Registered No. M. 1393.



ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೨ ಮಂಗಳೂರು, ೧೯೪೦ನೇ ಇಸವಿ ಜುಲೈ ತಾರೀಕು ೩೦ನೇ ಮಂಗಳವಾರ ಸಂಚಿಕೆ ೩೫

VOL. XXII MANGALORE, TUESDAY, JULY 30, 1940 NO. 35

ಅಮೃತಾಂಜನ

(Regd.)

ಹುಳುಕಡ್ಡಿ ಮದ್ದು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ..

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

AMRUTANJAN DEPOTS. BOMBAY. MADRAS. CALCUTTA.

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE

Bombay Life Assurance Co., Ltd.

(ESTD. 1908)

LIFE INSURANCE DISPELS DARKNESS OF THE MIND AND BRINGS ENLIGHTENMENT AND COURAGE, IMMORTALISES MAJOR PORTION OF YOUR INCOME WHETHER YOU SURVIVE OR NOT AND THUS MAKES LIFE WORTH LIVING TO YOU AND YOUR DEPENDANTS IN REALITY.

ASK US WHAT PARTICULAR SCHEME OF INSURANCE WILL SATISFY YOUR REQUIREMENTS AND YOUR PURSE.

Applications from Active and Influential Ladies and Gentlemen are invited.

or to Represent consult:—

KOCHIKAR BROTHERS, LTD.,

Secretaries & Chief Agents for Bombay City and Suburbs,

Bldg., Sir Lalubhai Samaldas Road, Gandhi Nagar, UDIPI

OR ANY OF THEIR FOLLOWING OFFICES AT:

(2) Car Street, Mangalore. (3) Central Station Road, Trivandrum.

(4) (5) Post Box No. 337, Mount Road, Madras. (6) Visweshwarapuram Circle, Bangalore City.

ಈವಾರದ ಕಥೆ

ಹೆಂಗಸು ನಮ್ಮ ಹೆ[illegible]ಗೆ

ಮರುದಿನ ೧೦ಕ್ಕೆ ಸರಿಯಾಗಿ ಸವಾರಿ ಮನೋರಂಜನ್ ದಯೆಮಾಡಿಸಿಕೊಂಡಿತು. ಲೇಡೀ ಡಾಕ್ಟರೂ ಅವರನ್ನು ಸುಸ್ವಾಗತಿಸಿ ಅವರಿಗೊಂದು ಕುರ್ಚಿ ಕೊಟ್ಟು ಕುಳ್ಳಿರಿಸಿದರು!

ಆ ಮೇಲೆ ಅವರವರೊಳಗೆ ತಡೆಯಿಲ್ಲದೆ ಮಾತುಕಥೆಗಳಿಗಾರಂಭವಾಯಿತು. ಇಬ್ಬರೂ ತಮ್ಮ ಜನ್ಮವೃತ್ತಾಂತವನ್ನು ತಿಳಿಯಪಡಿಸಿದರು. ಅವರ ಜೀವನ ಚರಿತ್ರೆಗಳು ಅವರವರು ಹೇಳಿಕೊಂಡಂತೆ ಹೀಗಿದ್ದುವು!

ಲೇಡಿ ಡಾಕ್ಟರು ಕಾಶ್ಮೀರ ದೇಶದವಳು. ಶ್ರೀಮಂತ ಕುಟುಂಬಕ್ಕೆ ಸೇರಿದ್ದು ಅಲ್ಲಿ ವಿದ್ಯಾಭ್ಯಾಸ ಪೂರೈಸಿ, ಅಮೇರಿಕಕ್ಕೆ ತೆರಳಿ, ಅಲ್ಲಿ ಡಾಕ್ಟರೀ ಪರೀಕ್ಷೆ ಪಾಸಾಗಿ ಆಫ್ರಿಕದಲ್ಲಿ ಖಾಸಗಿಯಾಗಿ ಪ್ರಾಕ್ಟೀಸ್ ಮಾಡಿಕೊಂಡಿದ್ದವಳು. ಆಕೆ [illegible] ಸಂಪಾದಿಸಿ [illegible] ಇದ್ದಳು. ಈಗ ಸ್ವದೇಶಕ್ಕೆ ತನ್ನ ಬಂಧು [illegible] ಅಪೇಕ್ಷೆಯಂತೆ, ಹಲವು ವರ್ಷಗಳ ಮೇಲೆ ಹಿಂದಿರುಗುವಾಗ, ಕಲ್ಕತ್ತೆಯನ್ನೂ ನೋಡಿಕೊಂಡು ಹೋಗೋಣವೆಂದು ಬಂದಿದ್ದಳು!

ಈಕೆ ಆಫ್ರಿಕದಲ್ಲಿ ಒಬ್ಬ ನರ್ಸ್ ಆಗಿದ್ದಳೆಂದೂ, ಇವಳ ಕೈಯಲ್ಲಿ ಚಿಕ್ಕಾಸೂ ಇರಲಿಲ್ಲವೆಂದೂ, ಈಗ ಅವಳು ಇದ್ದ ಕೆಲಸವನ್ನೂ ಕಾರಣಾಂತರದಿಂದ ಕಳೆದುಕೊಂಡು ಜೀವನೋಪಾಯಕ್ಕಾಗಿ ಕೆಲಸ ಹುಡುಕಿಕೊಂಡು ಕಲ್ಕತ್ತೆಗೆ ಬಂದಿದ್ದಳೆಂದೂ, ಅವಳು ಯಾವ ಶ್ರೀಮಂತ ಮನೆತನಕ್ಕೂ ಸೇರಿದವಳಲ್ಲವೆಂದೂ ಸಿಂಗಾಪುರದ ಸಾಹುಕಾರನಿಗೆ ಹೇಗೆ ತಿಳಿಯಬೇಕು, ಪಾಪ!

ಸಿಂಗಾಪುರದ ಸಾಹುಕಾರದ ಕಥೆ, ಅವನದೆಂತೆ ಇಷ್ಟು:—

ಅವನು ಕರಾಚೀ ಪ್ರಾಂತದವ; ಸಿಂಗಾಪುರದಲ್ಲಿ ದೊಡ್ಡ ವ್ಯಾಪಾರಿ; ದಲ್ಲಾಲ. ಇವನೂ ಸಾವಿರಾರು ರೂಪಾಯಿ ಸಂಪಾದಿಸಿ ಬೇಂಕಿನಲ್ಲಿ ಇಟ್ಟಿದ್ದ. ವ್ಯಾಪಾರದ ಸಂಬಂಧ ಕಲ್ಕತ್ತೆಯ ಸಾಹುಕಾರರೊಡನೆ ಮುಖತಃ ಕಂಡು ಮಾತಾಡಲು ಇಲ್ಲಿಗೆ ಬಂದಿದ್ದ.

ಈತನು ಸಿಂಗಪುರದಲ್ಲಿ ವ್ಯಾಪಾರ ಮಾಡಿ, ಕೊನೆಗೆ ಜುಗಾರಿಯಲ್ಲಿ ಸರ್ವಸ್ವವನ್ನೂ ಕಳೆದುಕೊಂಡು ಜೀವನಕ್ಕೆ ಗತಿ ಇಲ್ಲದೆ ಕಲ್ಕತ್ತೆಗೆ ಅಲೆದಾಡುತ್ತ ಬಂದಿದ್ದನೆಂದು ಲೇಡಿ ಡಾಕ್ಟರಳಿಗೆ ಹೇಗೆ ತಿಳಿಯಬೇಕು, ಪಾಪ!

'ತಮ್ಮ ಹೆಸರೇನು?' — ಲೇಡೀ ಡಾಕ್ಟರಳ ಪ್ರಶ್ನೆ.

'ಪುರುಷೋತ್ತಮ ದಾಸ್'

'ವಯಸ್ಸು?'

'೩೦!'

'ತಮ್ಮ ವಯಸ್ಸೆಷ್ಟೋ!'

'ನನ್ನದೂ ಅಷ್ಟೇ. ಆದರೆ ಹಗಲಿರುಳಿನ ವಿಶ್ರಾಂತಿ ಇಲ್ಲದ ಡಾಕ್ಟರೀ ಕೆಲಸದ ದಣುವಿನಿಂದ ತಲೆ ನರೆತು, ಕಣ್ಣಿಗೆ ಕನ್ನಡಕವೇರಿ ನನಗೆ ಕೊಂಚ ವಯಸ್ಸು ಹೆಚ್ಚಾದಂತೆ ತೋರಿದರೂ ತೋರಬಹುದು.'

'ಆದೇನು ವಿಶೇಷ? ಚಿಕ್ಕವರಿಗೆಲ್ಲಾ ಈಗ ಕನ್ನಡಕ; ೧೦–೧೫ ವರ್ಷಗಳಲ್ಲಿಯೇ ತಲೆಯೂ ನರೆತುಹೋಗುತ್ತಿದೆ.'

'ಲೋಕಾನುಭವವಿದ್ದವರು ತಾವು!'

'ತಮ್ಮ ಹೆಸರೇನೋ — ಹೇಳಲಾಗದೇ?'

'ನನ್ನ ಹೆಸರೇ? ಮಿಸ್ ಸುಲೋಚನಾದೇವಿ.'

'ಓಃ! ಮಿಸ್? ಇನ್ನೂ ಮದುವೆಯಾಗಿಲ್ಲ ತಮಗೆ?'

'ಇಲ್ಲ; ನನ್ನ ಇದುವರೆಗಿನ ಆಯುಷ್ಯವೆಲ್ಲ ಓದು, ಡಾಕ್ಟರಿಗಳಲ್ಲೇ ಕಳೆದುಹೋಯಿತು. ನಡುವೆ ಹಲವು ಶ್ರೀಮಂತರ 'ಪ್ರಪೋಜಲು'ಗಳು ಬಂದರೂ ನಾನು ನಿರಾಕರಿಸಿ ಬಿಟ್ಟೆ.'

'ತಮಗೆ ಲಗ್ನವಾಗಲು ಮನಸ್ಸಿರುವುದಾದರೆ, ...'

'ಯೋಗ್ಯರಾದ ತಮ್ಮ ಸ್ನೇಹಿತರು ಯಾರಾದರೂ ಇರಬಹುದೇನೋ!'

'ಸ್ನೇಹಿತರ ವಿಚಾರವೇನೂ ಅಲ್ಲ; ಸ್ವಂತ ವಿಚಾರವೇ!'

'ತಮಗೂ ಇದುವರೆಗೂ ಮದುವೆಯಾಗಿಲ್ಲ?'

[ಪುಟ ೧೩ ನೋಡಿ]

ಕಲ್ಕತ್ತೆಯ ಆ ಮನೋಹರವಾದ ಉಪವನಕ್ಕೆ, ನಿತ್ಯವೂ ಸಂಜೆ, ವಾಯುವಿಹಾರಕ್ಕಾಗಿ ನೂರಾರು ಮಂದಿ ಸ್ತ್ರೀ ಪುರುಷರು ಬರುವುದು ವಾಡಿಕೆ. ಅಲ್ಲಿ ನಾನಾ ಬಗೆಯ ಜನಗಳು ಸೇರುತ್ತಿದ್ದರು.

ಸುಮಾರು ೪೫ ವರ್ಷದ ಮಧ್ಯ ವಯಸ್ಕ ನೊಬ್ಬನೂ ಇಂದು ಅಲ್ಲಿಗೆ ಬಂದಿದ್ದನು. ಅವನು ಸಾದಾ ಉಡುಪವನ್ನು ಧರಿಸಿದ್ದನು. ಅವನು ಕಲ್ಕತ್ತಾ ನಗರಕ್ಕೇ ಹೊಸಬನಾಗಿ ತೋರುತ್ತಿದ್ದನು.

ಅವನು ಉದ್ಯಾನವನದಲ್ಲಿ ಕೊಂಚ ಹೊತ್ತು ಅತ್ತಿತ್ತ ಸಂಚರಿಸಿ, ಕೊನೆಗೆ ಒಂದು ಮರದ ಅಡಿಯಲ್ಲಿ ಹಾಕಿದ್ದ ಒಂದು ಬೆಂಚಿನಲ್ಲಿ ಬಂದು ಕುಳಿತನು. ಆ ಬೆಂಚಿನ ಇನ್ನೊಂದು ತುದಿಯಲ್ಲಿ ಸುಮಾರು ೪೮ ವರ್ಷದ ಹೆಂಗಸು ಒಬ್ಬಳೇ ಕುಳಿತಿದ್ದಳು.

ಅವರಿಬ್ಬರೂ ಒಬ್ಬರನ್ನೊಬ್ಬರು ನೋಡಿದರು!

ಆದರೆ ಇಬ್ಬರೂ ಅಪರಿಚಿತರು; ಯಾರು ಯಾರನ್ನು ಹೇಗೆ ಮಾತಾಡಿಸಿಯಾರು?

ಗಂಡಸು ಕೊನೆಗೆ ಧೈರ್ಯಮಾಡಿಕೊಂಡು, ಆಕೆಯನ್ನು ಮೆತ್ತಗೆ ಮಾತಾಡಿಸಿದನು.

'ತಾವು ಕಲ್ಕತ್ತೆಯವರೇ?'

'ಅಲ್ಲ; ಆಫ್ರಿಕದಲ್ಲಿದ್ದೆ. ಇಲ್ಲಿಗೆ ಬಂದು ಒಂದು ವಾರವಿನ್ನೂ ಆಗಿಲ್ಲ!'

'ನಾನೂ ಕಲ್ಕತ್ತೆಗೆ ಹೊಸಬನೇ. ಸಿಂಗಾಪುರದಿಂದ ಇಲ್ಲಿಗೆ ಬಂದು ೩ ದಿನಗಳಾಯಿತು.'

'ತಾವೆಲ್ಲಿ ಉಳಿದಿರುವಿರಿ?'—ಹೆಂಗಸು ಕೇಳಿದಳು.

'ಎಂಪಾಯರ್ ಹೋಟ್ಲಿನಲ್ಲಿ; ತಾವೋ?'

'ಮನೋರಂಜನ್ ಹಿಂದೂ ಹೋಟ್ಲಿನಲ್ಲಿ'.

'ತಮಗೆ ಆಫ್ರಿಕದಲ್ಲಿ ಉದ್ಯೋಗವೇನಾದರೂ ಇದೆಯೇ?' ಗಂಡಸಿನ ಪ್ರಶ್ನೆ!

'ಲೇಡಿ ಡಾಕ್ಟರು. ತಾವು ಸಿಂಗಾಪುರದಲ್ಲಿ ಏನು ಮಾಡಿಕೊಂಡಿರುವಿರಿ?'

'ವ್ಯಾಪಾರ!'

'ನಾನು ಇನ್ನೊಂದೆಂಟು ದಿನ ಕಲ್ಕತ್ತೆಯಲ್ಲಿಯೇ ಇರುತ್ತೇನೆ. ತಾವೂ ಇದ್ದರೆ, ಇನ್ನೊಮ್ಮೆ ಇಲ್ಲಿಯೇ ಭೇಟಿಯಾಗೋಣವೇ?' ಹೆಂಗಸಿನ ಮಾತು.

'ಅದಕ್ಕೇನು? ಇಲ್ಲಿ ಭೇಟಿಯಾದರೂ ಸರಿ; ಅಥವಾ ತಮ್ಮ ಹೊಟೆಲಿಗಾದರೂ ಬಂದು ತಮ್ಮನ್ನು ಕಾಣುತ್ತೇನೆ'—ವ್ಯಾಪಾರಿಯ ಉತ್ತರ.



ಬ್ರಿಟಿಷ್ ವೈಮಾನಿಕರು ಸದಾ ನಿಲ್ದಾಣದ ಸಲಹೆ ಕೇಳುತ್ತಲೇ ಇರುತ್ತಾರೆ

ಬ್ರಿಟಿಷ್ ವಿಮಾನದಳದ ವಯರ್‌ಲೆಸ್ ಸುದ್ದಿ ತಿಳಿವ ಈ ಕೇಂದ್ರದಿಂದ ಇವರು ಸಹಸ್ರಾರು ಮೈಲಿಗಳ ದೂರದವರೊಡನೆ ಮಾತಾಡುತಿದ್ದಾರೆ. ಬ್ರಿಟಿಷ್ ವೈಮಾನಿಕನು ಎಲ್ಲೇ ಇರಲಿ, ಇವರ ಸಂಬಂಧ ಆತನಿಗೆ ಇದ್ದೇ ಇದೆ.

Jaya Laxmi Bank, Ltd., Mangalore.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣಾನೂರು.

ಅಧಿಕೃತ ಮೂಲಧನ . . .	ರೂ. 1,00,000
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	ರೂ. 1,00,000
ತೆತ್ತ ಮೂಲಧನ	ರೂ. 92,705
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,10,979

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ—ಸೇ. 3%; 6 ತಿಂಗಳ ಠೇವಣಾತಿಗಳಿಗೆ—ಸೇ. 3½%; 12 ತಿಂಗಳ ಠೇವಣಾತಿಗಳಿಗೆ—4%.

ಮ್ಯಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರೆಟರಿ.

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ತೀಕ್ಷ್ಣವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ತೀಸೆ 1ಕ್ಕೆ ರೂ. 5—0—0.

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಏಜೆಂಟ್ಸ್—ಪರ್ಲ್ ಎಂಡ್ ಸನ್ಸ್, ಮಂಗಳೂರು.

ಕಾಮಿನಿಯ ಸೌಂದರ್ಯದ ಕೀರ್ತಿಯ ಕಲಶ

ಮೃದು ಮತ್ತು ವೈಭವದಿಂದ ಬೆಳೆವ ಕೂದಲು. ನಿಮ್ಮ ಚೆಲುವನ್ನು ಹೆಚ್ಚಿಸಲು ಮತ್ತು ರಕ್ಷಿಸಲು ಮರೆಯದೆ ಕೊಳ್ಳಿರಿ—

ಕಾಮಿನಿಯಾ ಓಯ್ಲ್
(ರಿಜಿಸ್ಟರ್ಡ್)

ಪರಿಶುದ್ಧವೂ ಅತ್ಯುತ್ತಮವೂ ಆದ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಇದು ತಲೆಯ ತೊಡರುಗಳಿಗೆಲ್ಲ ದಿವ್ಯ ಔಷಧಿ. ಅಲ್ಲದೆ ಕೂದಲ ಬೇರನ್ನು ಬಿಳಿಯಿಸಿ, ಕೂದಲು ಉದುರುವುದನ್ನು ತಡೆಯುವುದಲ್ಲದೆ, ಇದರ ಪ್ರಿಯವಾದ ಸುಗಂಧ ಮನಸ್ಸನ್ನು ಆಹ್ಲಾದಕರವಾಗಿ ಇರಿಸುವುದು.

ಕಾಮಿನಿಯಾ ತೈಲ

ಬಂಗಾರದ ಪದಕಗಳನ್ನೂ ಪ್ರಶಂಸಾ ಪತ್ರ [illegible] ಪತ್ರಗಳನ್ನೂ ಅದರ ಅತ್ಯುತ್ಕೃಷ್ಟತೆಗಾಗಿ, ರಾಷ್ಟ್ರದ ಸಕಲರಿಂದಲೂ ಪಡೆದಿದೆ.

ಬಾಟ್ಲಿಯೊಂದರ ಬೆಲೆ ರೂಪಾಯಿ 1. 3 ಬಾಟ್ಲಿಗಳಿಗೆ ರೂ. 2–10–0. ವಿ. ಪಿ. ಖರ್ಚು ಬೇರೆ. ಮುಕ್ಕಾ ಆಣೆ ಅಂಚೆ ಚೀಟಿ ಕಳುಹುವವರಿಗೆ ಮಾದರಿ ಸೀಸೆ ಫುಕ್ಕಟೆ. ಎಲ್ಲೆಲ್ಲೂ ಕೆಮಿಸ್ಟ್ಸ್‌ನ ಮತ್ತು ಡ್ರಗ್ಗಿಸ್ಟ್ಸ್‌ನ ಹಾಗೂ ಜೀನಸು ಅಂಗಡಿಗಳಲ್ಲೂ ಇದು ಮಾರಲ್ಪಡುತ್ತದೆ.

ಸುಗಂಧಗಳ ರಾಜ—ಓಟ್ಟೋ ದಿಲ್‌ಬಹಾರ್
(ರಿಜಿಸ್ಟರ್ಡ್)

ವಿಶಾಲ ಜಗತ್ತಿನಲ್ಲಿ ಇದಕ್ಕಿರುವ ಆದರವೇ ಇದರ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತದೆ. ನಿಮ್ಮ ಕರವಸ್ತ್ರದ ಮೇಲೆ ಬಿದ್ದ ಇದರ ಕೆಲವೇ ಬಿಂದುಗಳು ಮನಸೋಹಕ ಹಾಗೂ ಅಚ್ಚಳಿಯದ ಡೈಲಿ ಮತ್ತು ಜಾಜಿ ಹೂಗಳ ಸುಗಂಧವನ್ನು ಹೊರಸೂಸುವುದು. ¼ ಔನ್ಸ್ ಬಾಟ್ಲಿಯ ಬೆಲೆ ರೂ. 1¼ ಮತ್ತು ಒಂದು ಡ್ರೇವ್ಸ್ ಬಾಟ್ಲಿಯ ಬೆಲೆ 12 ಆಣೆಗಳು. ವಿ. ಪಿ. ಚಾರ್ಜು ಬೇರೆ. ಫುಕ್ಕಟೆ ಮಾದರಿ ಸೀಸೆಗಾಗಿ 2 ಆಣೆ ಅಂಚೆ ಚೀಟಿ ಕಳುಹಿಸಿ. ಸುಗಂಧ ಕಾರ್ಡಿನ ಬೆಲೆ 1 ಆಣೆ.

ಪ್ರಧಾನ ಏಜಂಟರು:—

ಎಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, ಬೊಂಬಾಯಿ 2.

ಭಾರತದಲ್ಲಿ ಆಕಾಶವಾಣಿಯ ಕಾರ್ಯಕ್ರಮ

ವಿವಿಧ ಸಮಸ್ಯೆಗಳ ವಿವೇಚನ

ಆಕಾಶವಾಣಿಯಲ್ಲಿ ಸುದ್ದಿ ಹಾಗೂ ಇತರ ವಿಷಯಗಳನ್ನು "ಪ್ರಸಿದ್ಧಿ"ಸುವ ("ಬ್ರಾಡ್ ಕಾಸ್ಟ್" ಮಾಡುವ) ಕೆಲಸ, ಕೆಲವು ವೇಳೆ ಟೀಕೆಗಳಿಗೂ ಎಡೆ ಕೊಡುತ್ತಲೇ ಇರುತ್ತದೆ. "ಪ್ರಸಿದ್ಧಿ"ಯ ಕಾರ್ಯಕ್ರಮವನ್ನು ತಯಾರಿಸುವವನು ಅದರ ಅಧಿಕಾರಿಯೂ ಸೇವಕನೂ ಆಗಿದ್ದಾನೆ.

ವಿವಿಧ ವಿಚಾರಗಳಿಂದಾಗಿ ಭಾರತದಲ್ಲಿ ಇದೊಂದು ಕಠಿನ ಸಮಸ್ಯೆಯೇ ಆಗಿಡೆ. ಭಾಷೆ. ಧಾರ್ಮಿಕತೆ, ಬಡತನ,—ಕಡಿಮೆ ಬೆಲೆಯ ರೇಡಿಯೋ ಯಂತ್ರಗಳು ಇಲ್ಲದಿರುವಿಕೆ; ಸಂಗೀತಕ್ಕೆ ನಿಯತವಾದ ಒಂದು ಬರಹವಾಗಲೀ, ಮಟ್ಟವಾಗಲೀ ಇಲ್ಲದಿರುವಿಕೆ; ಸಂಪೂರ್ಣ ವಿನೋದವನ್ನೂ, ವಿನೋದವಿಲ್ಲದಿರುವುದನ್ನೂ ಇಚ್ಛಿಸುವ ಜನತೆಯ ಇಚ್ಛೆ; ವಿದ್ಯಾವಂತನೇ ಆಗಿದ್ದವನಲ್ಲೂ ಇರುವ ಅಲ್ಪ ಅಭಿರುಚಿ; ರಾಜಕೀಯ ಪರಿಸ್ಥಿತಿಯ ಸ್ಥಿಮಿತವಿಲ್ಲದಿರುವಿಕೆ ಇವೇ ಮುಂತಾದ ಹಲವಾರು ವಿಚಾರಗಳು ರೇಡಿಯೋದ ಪ್ರಚಾರದ ಬೆಳವಣಿಗೆಯಲ್ಲಿ ತೊಡಕನ್ನು ತಂದಿವೆ. ಇಂತಹ ಪರಿಸ್ಥಿತಿಯಲ್ಲಿ, "ಪ್ರಸಿದ್ಧಿ"ಯ ಕಾರ್ಯಕ್ರಮವನ್ನು ತಯಾರಿಸುವವನು, ಆಕಾಶವಾಣಿಯಲ್ಲಿ ಸರ್ವಜನಸಮ್ಮತವಾಗಿ ಯಾವುದೇ ಒಂದು ರಾಷ್ಟ್ರೀಯ ವಿಚಾರದಲ್ಲಿ ಕೈಯಿಳುಹುವದು ಕಷ್ಟಸಾಧ್ಯವಾಗಿ ಸಂದಿಗ್ಧ ಪರಿಸ್ಥಿತಿಗೆಡೆಯಾಗುತ್ತದೆ.

ಇದೀಗ ಈ ಸಕಲ ವಿಚಾರಗಳ ವಿವೇಚನೆಯನ್ನಾಂತ, ಅಖಿಲ ಭಾರತ ರೇಡಿಯೋ ಸಂಸ್ಥೆಯ ೯ ವರ್ಷಗಳ ವರದಿ ಪ್ರಕಟವಾಗಿದೆ. ೧೯೨೦ರಲ್ಲಿ, ಮದ್ರಾಸಿನಲ್ಲಿ ತಲೆ ಎತ್ತಿದ ರೇಡಿಯೋ ಕ್ಲಬ್, ತದನಂತರ ಬೆಳೆದು ಬಂದ ರೇಡಿಯೋ ಯೋಜನೆ ಹಾಗೂ ಸರಕಾರವು ಅದನ್ನು ತನ್ನ ಅಂಕೆಯಲ್ಲಿ ಇರಿಸಿಕೊಂಡು ಇಂದು ಸ್ಥಾಪಿಸಿದ ೭ "ಪ್ರಸಿದ್ಧಿ" ಕೇಂದ್ರಗಳು ಮತ್ತು ೧೨ "ಪ್ರಸಿದ್ಧಿ ಸಂಬಂಧಿ" (ಟ್ರಾನ್ಸ್‌ಮಿಟರ್)ಗಳ ವಿಚಾರವೂ, ಅದರೊಡನೆ ಈ ೯ ವರ್ಷಗಳಲ್ಲಿ ದೊರೆತ ೧ ಕೋಟಿಗೂ ಮಿಕ್ಕಿದ ಲಾಭದ ವಿಷಯವೂ ವರದಿಯಲ್ಲಿದೆ.

ಭಾರತದ "ಪ್ರಸಿದ್ಧಿ" ಕಂಪೆನಿಯ ಸರಿಯಾದ ಕಾರ್ಯಕ್ರಮವು, ೧೯೨೭ರಲ್ಲಿ, ಮುಂಬಾಯಿ ಕೇಂದ್ರದ ಸ್ಥಾಪನಾನಂತರ, ಆರಂಭವಾಯಿತು. ಆಗ ಲೈಸೆನ್ಸ್ ಪಡೆದ ಸಾವಿರ, ಅಂದರೆ ೧೯೩೯ರಲ್ಲಿದ್ದುದಕ್ಕಿಂತ ೭೨ ಪಾಲು ಕಡಿಮೆ 'ರೇಡಿಯೋ' ಪೆಟ್ಟಿಗೆಗಳು ಭಾರತದಲ್ಲಿದ್ದುವು. ೧೯೩೮—೩೯ರಲ್ಲಿ, ಸರಕಾರಕ್ಕೆ ದೊರೆತ ಲೈಸನ್ಸ್ ಹಣ ೭೫೦,೨೭೧ ರೂಪಾಯಿಗಳು, ಕಸ್ಟಮ್ಸ್ ಆದಾಯ ರೂ. ೧೩,೭೦,೩೨೦—'ವಿೂಡಿಯಮ್ ವೇವ್' (ಮಧ್ಯ ಅಂತರ)ದಲ್ಲಿ ೧೬,೬೭೦ ತಾಸುಗಳ ಹಾಗೂ ಅಧಮಾಂತರ (ಶೋರ್ಟ್ ವೇವ್)ದಲ್ಲಿ ೧೩,೧೮೯ ತಾಸುಗಳ "ಪ್ರಸಿದ್ಧಿ" ನಡೆಸಲಾಗಿದೆ.

ಸಂಗೀತ

ಸಂಗೀತವು ಕಾರ್ಯಕ್ರಮದಲ್ಲಿ ಪ್ರಾಮುಖ್ಯ ಸ್ಥಾನವನ್ನು ಪಡೆದಿದೆ. ಪರಿಣಾಮವಾಗಿ ಸಂಗೀತದ ಮೇಲ್ಮೈಯೂ ಹೆಚ್ಚಿ ಅದರಲ್ಲಿನ ವಿವಿಧ ಸಮಸ್ಯೆಗಳು ಬಗೆಹರಿಸಲ್ಪಟ್ಟಿವೆ. ಈ ವಿಚಾರದ ಕುರಿತಾಗಿ ವರದಿಯಲ್ಲೊಂದು ಅಧ್ಯಾಯವೇ ಇದೆ.

ಸಂಗೀತದಂತೆಯೇ, ಮಾತಿನ ವಿಚಾರದಲ್ಲೂ, ಅಖಿಲ ಭಾರತ ಆಶರೀರ ವಾಣಿಯು ಯೋಗ್ಯ ಮಾತು ಹಾಗೂ ಹೆಚ್ಚಿನ ಪ್ರಚಾರದ ಭಾಷೆಯ ವಿಚಾರದಲ್ಲಿ ಯೋಚಿಸಿದೆ. ವಿವಿಧ ಅಭಿಪ್ರಾಯಗಳಿಂದಾಗಿ, ರೇಡಿಯೋ ಸಂಸ್ಥೆಯು ಕಾರ್ಯಕ್ಕೆ ಸಂಪೂರ್ಣ ಬೆಂಬಲ ದೊರೆಯದಾದರೂ, ಹೆಚ್ಚಿನ ಮೇಲ್ಮೈಯನ್ನು ಅತ್ಯಲ್ಪ ತೊಡಕಿನಿಂದ ಇದು ಸಾಧಿಸಿದೆ.

೧೯೩೮—೩೯ರಲ್ಲಿ, ದಿಲ್ಲಿ, ಬೊಂಬಯಿ, ಕಲ್ಕತ್ತ, ಮದ್ರಾಸ್, ಲಾಹೋರ್, ಲಕ್ನೌ ಮತ್ತು ಪೇಶಾವರಗಳ ೭ "ಮಧ್ಯಾಂತರ ಕೇಂದ್ರ"ಗಳು ಕೆಲಸ ನಡೆಸುತ್ತಿದ್ದು, ಡೆಕ್ಕಾನ್, ತಿರುಚಿನಾಪಳ್ಳಿಯ ಕೇಂದ್ರಗಳ ರಚನೆ ಸಾಗುತ್ತಲಿತ್ತು. (ಇವು ಇಂದು ಕೆಲಸ ನಿರ್ವಹಿಸುತ್ತಲಿವೆ)

ಸರಕಾರಕ್ಕೆ ದೊರೆವ ಲೈಸೆನ್ಸ್ ಹಣ—ವಿವಿಧ ಸಾಮಗ್ರಿಗಳನ್ನು ತರಿಸಿಕೊಂಡಾಗ ದೊರೆತ ತೆರಿಗೆ, ಲೈಸನ್ಸ್ ಹಣ, 'ರೇಡಿಯೋ ಪತ್ರಿಕೆ'ಯಲ್ಲಿನ ಜಾಹೀರಾತು ಹಾಗೂ ಚಂದಾದಿಂದ ದೊರೆತ ಮೊಬಲಗು. ೧೯೩೦—೩೧ರಿಂದ ೧೯೩೮—೩೯ರ ತನಕ ಹೀಗೆ ದೊರೆತ ಒಟ್ಟು ಹಣ ರೂ. ೧,೦೦,೪೪,೭೯೮; ಖರ್ಚು ರೂ. ೭೭,೪೪,೪೮೮; ದೊರೆತ ಲಾಭ ರೂ. ೨೨,೯೯,೯೫೦.

ಕಾರ್ಯಕ್ರಮದ ಖರ್ಚು

ಹೆಚ್ಚಿನ ಕೇಂದ್ರಗಳ ಸ್ಥಾಪನೆ ಹಾಗೂ ಹೆಚ್ಚು ತಾಸುಗಳ ಕಾರ್ಯಕ್ರಮಗಳಿಂದಾಗಿ, ೧೯೩೦—೩೧ರಲ್ಲಿ ರೂ. ೮೦,೪೯೯ ಇದ್ದ ವೆಚ್ಚ ೧೯೩೮—೩೯ರಲ್ಲಿ ರೂ. ೬,೩೬,೧೯೩ಕ್ಕೆ ಏರಿದೆ. ಅಂದರೆ ದಿನದ ಸರಾಸರಿ ವೆಚ್ಚ ರೂ. ೨೨೦ರಿಂದ ರೂ. ೧೭೪೩ಕ್ಕೇರಿತು. ಒಂದು ತಾಸಿನ ಕಾರ್ಯಕ್ರಮದ ಪ್ರತಿಫಲವನ್ನು ೩೦ರಿಂದ ೩೫ ರೂಪಾಯಿಗಳಿಗೇರಿಸಿದ್ದರೂ, ಉತ್ತಮೋತ್ತಮ ಭಾಷಣಕಾರರನ್ನು ಇದು ಇನ್ನೂ ಸೆಳೆದಿಲ್ಲ. ದಿನನಿತ್ಯದ ಕಾರ್ಯಕ್ರಮದಲ್ಲಿ, ಯಾವುದರ ಬೆಲೆ ಎಷ್ಟೆಂಬುದನ್ನು ಅವುಗಳಿಗಾಗಿ ಕೇಂದ್ರವು ವ್ಯಯಿಸುವ ಹಣದಿಂದ ಗೊತ್ತುಹಚ್ಚಬಹುದು. "ಹಳ್ಳಿಗರಿಗಾಗಿ" ಎಂಬುದಕ್ಕೆ ತಾಸಿಗೆ ರೂ ೨೦; ೪೫ ನಿಮಿಷಗಳಲ್ಲಿ ನಡೆಯುವ ಮೂರು ಭಾಷಣಗಳಿಗೆ ರೂ. ೬೫; ನಾಲ್ಕು ತಾಸುಗಳ ಮಟ್ಟಿಗೆ ಮೂವರು ದೇಶೀಯ ಕಲಾವಿದರಿಗೆ ರೂ. ೧೦೦, ಪರದೇಶೀ ಕಾರ್ಯಕ್ರಮ—ತಾಸಿಗೆ ರೂ. ೬೫, ಒಂದು ತಾಸಿನ ನಾಟಕಕ್ಕೆ ರೂ. ೪೫, ೩೫ ನಿಮಿಷಗಳ ತನಕ—ಸಂಗೀತ ಸಾಮಗ್ರಿಗಳಿಗೆ ರೂ ೨೦, ನಿತ್ಯದ ಹಾಗೂ ಹೊರಗಣ ಕಾರ್ಯಕ್ರಮಗಳಿಗೆ ಹತ್ತು ನಿಮಿಷಗಳಿಗೆ—ರೂ. ೧೦, ಶಾಲಾ ಮಕ್ಕಳ 'ಪ್ರಸಿದ್ಧಿ'ಗೆ ರೂ. ೧೦. (ಅರ್ಧ ತಾಸಿಗೆ.)

ಶಾಲಾ ಮಕ್ಕಳಿಗಾಗಿ ಕೊಡುವ ಭಾಷಣದಿಂದ, ಅದೆಷ್ಟು ಪರಿಣಾಮಕಾರಿಯಾಗಿದೆಯೆಂದು ಇಷ್ಟು ಬೇಗನೆ ಹೇಳಲು ಬರುವುದಿಲ್ಲವಾದರೂ, ಉಪಾಧ್ಯಾಯರ ಕೆಲಸದಲ್ಲಿ ಇದು ಸೌಲಭ್ಯತೆಯನ್ನು ಒದಗಿಸಿದೆ ಎಂಬುದು ನಿರ್ವಿವಾದ.

ಹಳ್ಳಿಗಳಲ್ಲಿ

ಹಳ್ಳಿಗಳಲ್ಲಿ ೧೯೩೯ರಲ್ಲಿದ್ದ ರೇಡಿಯೋಗಳ ಸಂಖ್ಯೆ ೧೦೦. ಹಳ್ಳಿಯ ಮುಂದಿ ಸಕಲರೂ ಒಟ್ಟು ಸೇರಿ, ರೇಡಿಯೋದ ಬಳಿ ಕಲೆತು, ತಮಗಾಗಿ 'ಪ್ರಸಿದ್ಧಿ'ಸಲಾಗುವ ವಿಚಾರಗಳನ್ನು ಹೆಚ್ಚು ಉತ್ಸಾಹದಿಂದ ಅರಿತುಕೊಳ್ಳುವರೆಂದು ತಿಳಿದುಬಂದಿದೆ. ಆದರೂ ಸಾಕಷ್ಟು ಪರಿಣಾಮಕಾರಿಯಾಗಿಲ್ಲ.

ಭಾರತದ ರೇಡಿಯೋ ಸಂಸ್ಥೆಯ ವಿವಿಧ ಕಾರ್ಯಕ್ರಮಗಳೂ, ವಿಚಾರಗಳೂ, ಸಮಸ್ಯೆಗಳೂ ಈ ವರದಿಯಲ್ಲಿ ಪ್ರಕಟವಾಗಿದೆ.

ಫ್ರಾನ್ಸಿನಲ್ಲಿ ಯುದ್ಧದ ಪರಿಣಾಮ

ಜರ್ಮನಿಯ ಆಕ್ರಮಣದಿಂದ ಫ್ರಾನ್ಸಿನ ವ್ಯಾಪಾರ ವಹಿವಾಟಗಳೆಲ್ಲ ಅಸ್ತವ್ಯಸ್ತವಾಗಿವೆ. ಯುದ್ಧಕಾಲದಲ್ಲಿ ಫ್ರಾನ್ಸಿನ ೭೦೦ ರೈಲ್ವೆ ಸೇತುವೆಗಳು ಮುರಿದುಬಿದ್ದಿರುವವಲ್ಲದೆ, ರಸ್ತೆ, ಕಾಲಿವೆ, ನದಿ, ಪೋಸ್ಟ್, ಟೆಲಿಗ್ರಾಫ್ ಮೊದಲಾದುವುಗಳ ಮೇಲೂ ಪರಿಣಾಮವುಂಟಾಗಿ, ಅದರ ಫಲಿತಾಂಶವಾಗಿ, ಪೆಟ್ರೋಲ್, ಕಲ್ಲಿದ್ದಲು ಮೊದಲಾದ ಹಲವು ಸಾಧನಗಳ ಅಭಾವವೂ ಈಗ ಫ್ರಾನ್ಸಿನಲ್ಲಿ ಉಂಟಾಗಿದೆ. ಸದ್ಯ ಫ್ರಾನ್ಸಿನ ಖಾಸಿಗೆ ಫರ್ಮುಗಳೂ, ಬೇಂಕುಗಳೂ ಪ್ಯಾರಿಸಿಗೆ ಹಿಂದಿರುಗಿ ತಮ್ಮ ವ್ಯವಹಾರ ಸಾಗಿಸುವಂತೆ ಸೂಚನೆಯಾಗಿದೆ. ಇವಕ್ಕೆಲ್ಲ ಸರಕಾರ ಹಣದ ಸಹಾಯ ನೀಡಲಿದೆ!

ನಿಮ್ಮ ಮಕ್ಕಳ ಆರೋಗ್ಯವೇ ಭಾರತದ ಭವಿಷ್ಯ

"ಮಗುವು ಮನುಷ್ಯನ ತಂದೆ." ಒಂದು ಜನಾಂಗದ ಭವಿಷ್ಯವು ಆ ದೇಶದ ಈಗಿನ ಮಕ್ಕಳ ಆರೋಗ್ಯವನ್ನವಲಂಬಿಸಿದೆ. ನಿರುತ್ಸಾಹಿಗಳಾದ ಮತ್ತು ದುರ್ಬಲರಾದ ಮಕ್ಕಳು ಬಾಲ ಪ್ರಾಶದಿಂದ ಉತ್ತಮಗೊಂಡು ಬೆಳೆಯುವರು. ಅದರ ರುಚಿಕರ ವಾಸನೆ ಕಂಡರೆ ಮಕ್ಕಳಿಗೆ ಪ್ರೀತಿ. — — —

ದೇಹವನ್ನು ಪುಷ್ಟಿಕರವಾಗಿ ಬೆಳೆಸುತ್ತದೆ

ಬಾಲ ಪ್ರಾಶ

ಮಕ್ಕಳಿಗೆ ಎಣೆಯಿಲ್ಲದ ಟಾನಿಕ್

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

KA 4

YOUR FUTURE ★
THE WELL-BEING OF YOUR DEPENDANTS ★
THE UNCERTAINTY OF TO-MORROW! ★

THESE ARE PROBLEMS WHICH FACE A MAN RELENTLESSLY.

It will not be for you to despair. Human intelligence—its history read with the experience of Wars, Famine, Epidemics, Unemployment, Accidents, has perfected in LIFE INSURANCE a safeguard against the difficulties of Future.

Insurance today is a necessity to the rich and poor. It is an estate—an investment which knows no Depreciation. Take out your Policy in the "Popular". It is a local enterprise and deserves your goodwill and co-operation.

The Popular Insurance Company, Limited,

Head Office: **Mangalore, S. J.**

Bombay Branch:
Prospect Chambers, Hornby Road.

★

Madras Branch:
13, Thambu Chetty St., George Town.

ವಾರ

ಬೊಂಬಯಿಯಲ್ಲಿ ಮದ್ಯನಿಷೇಧದ ಕುರಿತು

ಅಲ್ಲಿನ ಹೈಕೋರ್ಟ್ ಮಾಡಿರುವ ತೀರ್ಮಾನದಿಂದ ಉಂಟಾಗಿರುವ ಪರಿಸ್ಥಿತಿಯ ವಿಷಯದಲ್ಲಿ ಬೊಂಬಯಿ ಸರಕಾರವು ದೊಡ್ಡ ದೊಂದು "ಸ್ಟೇಟ್‌ಮೆಂಟ್" ಹೊರಡಿಸಿದೆ. ಆ ಹೈಕೋರ್ಟ್ ತೀರ್ಪಿನಿಂದ, ಈಗ ಅಸ್ತವಾಗಿರುವ ಕಾಂಗ್ರೆಸ್ ಸರಕಾರವು ಜ್ಯಾರಿಗೆ ತಂದಿದ್ದ "ಮದ್ಯನಿಷೇಧ" ಕ್ರಮಕ್ಕೆ ವಜ್ರಾಘಾತವೇ ಆದಂತಾಗಿದೆ. ಬೊಂಬಯಿಯ ಈಗಿನ ಸರಕಾರವೇನೋ ಈ ಹೈಕೋರ್ಟ್ ತೀರ್ಪಿನ ಮೇಲೆ ಫೆಡರಲ್ ಕೋರ್ಟಿಗೆ ಅಪೀಲ್ ಮಾಡಲಿದೆಯಾದರೂ, ಅದರ ಫಲಿತಾಂಶವೂ ಏನೆಂದು ಈಗಲೇ ಹೇಳಬರುವಂತಿಲ್ಲ. ಇಷ್ಟರ ಮಧ್ಯೇ, ಹೈಕೋರ್ಟಿನ ತೀರ್ಮಾನದ ಪರಿಣಾಮವಾಗಿ ಅಲ್ಲಿನ "ಮದ್ಯ"ದ ಇಲಾಖೆಯ ಧೋರಣೆಯಲ್ಲಿ ಕೆಲವೊಂದು ಬದಲಾವಣೆಗಳಾಗುವಂತೆ ತೋರುತ್ತಿದೆ. ಅದರಲ್ಲಿ ಮುಖ್ಯವೆಂದರೆ,—ಬೊಂಬಯಿ ನಗರದಲ್ಲಿಯೂ ಅದರ ಆಸುಪಾಸಿನಲ್ಲಿಯೂ ದೇಶೀಯ ಮದ್ಯದ ಮಾರಾಟದ ವಿಚಾರದಲ್ಲಿ ನಿರ್ಬಂಧವನ್ನಿರಿಸಲಾಗುವುದಾದರೂ, ವಿದೇಶೀ ಮದ್ಯವನ್ನು ಕೊಳ್ಳಲಿಕ್ಕಾಗಲೀ ಒಬ್ಬನ ವಶವಿರಿಸಿಕೊಳ್ಳಲಿಕ್ಕಾಗಲೀ ಯಾವ ನಿರ್ಬಂಧವೂ ಇರಲಾರದೆಂಬುದೇ. ಪ್ರಾಯಶಃ ಕ್ರಮವಾದ ಒಂದು ಶಾಸನ ಸಭೆ ಅಲ್ಲಿ ಕೆಲಸಮಾಡಲು ಆರಂಭಿಸುವ ವರೆಗೆ, ಈ ಸ್ಥಿತಿ ಹೀಗೇ ಉಳಿದರೂ ಉಳಿಯಬಹುದೇನೋ!

* * *

ರಾಷ್ಟ್ರಪತಿಗಳಾದ ಮೌಲಾನಾ ಅಜಾದರಿಗೆ

ಶ್ರೀ. ಜಿನ್ನಾ ಸಾಹೇಬರು ಬರೆದ ಪತ್ರದಲ್ಲಿ ಶಿಷ್ಟಾಚಾರವು ಸಾಲದೆಂದು ಸಮಗ್ರ ಭಾರತದ ಹಲವು ಮಂದಿ ಮುಸ್ಲಿಂ ಮುಖಂಡರು ಟೀಕಿಸಲಾರಂಭಿಸಿದ್ದಾರೆ. ಡಾ. ಸಯ್ಯದ್ ಮಹಮ್ಮದರೂ, ಡಾ. ಕೆಡ್ವ್ಯಾಯಯವರೂ ಈ ಟೀಕಾಕರ್ತರಲ್ಲಿ ಸೇರಿದವರೇ. ಪ್ರಾತಿನಿಧ್ಯ ವಹಿಸಿರುವ ಹಲವು ಮುಸ್ಲಿಂ ಸಂಸ್ಥೆಗಳಾದರೂ, ಅವರಿಬ್ಬರ ಕಾರ್ಯಕ್ರಮವನ್ನೇ ಅನುಸರಿಸಿವೆ. ಒಟ್ಟನಲ್ಲಿ ಶ್ರೀ. ಜಿನ್ನಾರವರು ತಾವು ಬರೆದ ಕಾಗದದಿಂದ, ತಮಗೆ ತಾವೇ ಬೆಲೆ ಕಟ್ಟಿಕೊಂಡಿದ್ದಾರೆ; ತಮ್ಮ ಉದ್ದೇಶಗಳೇನು, ತಾವು ಯಾವುದಕ್ಕಾಗಿ ಪೇಚಾಡುತ್ತಿರುವರೆಂಬ ಈ ರಹಸ್ಯವನ್ನು ಬಯಲು ಮಾಡಿದ್ದಾರೆ. ಹೊಸ ಡಿಲ್ಲಿಯ ಸಮಗ್ರಭಾರತ ಮುಸ್ಲಿಂ ಪಾರ್ಟಿ ಕಾನ್ಫರೆನ್ಸಿನ ಕೇಂದ್ರ ಕಾರ್ಯಾಲಯದಿಂದ ಹೊರಟ ಅದೊಂದು "ಸ್ಟೇಟ್‌ಮೆಂಟ"ನ ಮೇರೆಗೆ ಮುಸ್ಲಿಂ ಲೀಗ್ ದೊಡ್ಡ ಸಂಖ್ಯೆಯ ಮುಸ್ಲಿಮರ ಪ್ರಾತಿನಿಧ್ಯವನ್ನೇ ನಿರ್ವಹಿಸಿರಬಹುದಾದರೂ, ಜಿನ್ನಾರವರು ತಮ್ಮ ಸ್ವಂತ ಪ್ರಾತಿನಿಧ್ಯವನ್ನಲ್ಲದೆ ಬೇರೆ ಯಾರದನ್ನೂ ನಿರ್ವಹಿಸುತ್ತಿಲ್ಲವೆನ್ನಬೇಕು" ಎಂದಿದೆ. ಪೇಶಾವರ ಜಿಲ್ಲಾ ಕಾಂಗ್ರೆಸ್ ಕಮಿಟಿಯು "ಕಾಂಗ್ರೆಸ್, ಜಿನ್ನರೊಡನೆಯಾಗಲೀ, ಲೀಗಿನೊಡನೆಯಾಗಲೀ ವ್ಯವಹರಿಸಬಾರದೆಂದು" ವಿನಂತಿಸಲು ನಿರ್ಧರಿಸಿದೆ; ಇದೆಷ್ಟು ಕಾಲದ ವರೆಗೆ ಎಂದರೆ, ಜಿನ್ನಾರವರು ರಾಷ್ಟ್ರಪತಿಗಳಿಗೆ ಬರೆದ ಆ ಕಾಗದದಲ್ಲಿ ತೋರುವ ಆ ಅಗೌರವವಾದ ಹಾಗೂ ಸ್ವೇಚ್ಛಾವರ್ತನೆಯ ವಿಚಾರದಲ್ಲಿ, ಜಿನ್ನರು ತಕ್ಕ "ಪ್ರಾಯಶ್ಚಿತ್ತ" ಮಾಡಿಕೊಳ್ಳುವ ವರೆಗೆ! ಏನೇ ಜಿನ್ನಾರವರು ಹಿಂದುಸ್ಥಾನದ ರಾಜನೀತಿಯಲ್ಲಿನ ತಮ್ಮ ಸ್ಥಾನವನ್ನೇನಾದರೂ ಕಳೆದುಕೊಳ್ಳುವುದು ಅದು ಅವರ ಸ್ವಂತ ವರ್ತನೆಯಿಂದಲೇ ಇಂದಿನ ಈ ವಿದ್ಯಮಾನದಿಂದ ಬರುವಂತಿದೆ

* *

ಕಲ್ಕತ್ತೆಯ ಹಾಲ್ವೆಲ್ ಸ್ಮಾರಕ

ಅಲ್ಲಿ ಸತ್ಯಾಗ್ರಹ ನಡೆಯಲಾರಂಭಿಸಿ, ಇಂದಿನವರೆಗೆ ಹಲವು ಮಂದಿ ಖೈದಿಗೂ ಸೆರೆಗೂ ಗುರಿಯಾದ ಮೇಲೆ, ಮಿ. ಹಕ್ಕರ ಸರಕಾರವು ಆ ಸ್ಮಾರಕವನ್ನು ಅಲ್ಲಿಂದ ಕೀಳಲು ನಿರ್ಧರಿಸಿದೆ. "ತಡವಾದರೂ ಬೇಗ ಆಯಿತೆ"ಂಬಂತೆ, ಈಗಲಾದರೂ ಬಂಗಾಳ ಸರಕಾರವು, ಈ ನಿರ್ಧಾರವನ್ನು ಮಾಡಿದುದು ವಿಹಿತವಾಯಿತೆಂದು ಅದರ ವಿವೇಕಬುದ್ಧಿಯನ್ನು ನಾವು ಕೊಂಡಾಡದಿರಲಾರೆವು ಆದರೆ, ಸರಕಾರದ ನಿರ್ಬಂಧದಲ್ಲಿರುವವರ, ಆ ಸತ್ಯಾಗ್ರಹಿಗಳ ಮುಂದಿನ ವ್ಯವಸ್ಥೆ ಏನು? ಇನ್ನೂ ನಿರ್ಬಂಧವೇ? ಬಿಡುಗಡೆಯೇ? ಯಾವಾಗ ಉದ್ವೇಗಮಯವಾದ ಸತ್ಯಾಗ್ರಹಕ್ಕೆ ಎಡೆ ಕೊಟ್ಟ ಆ ಸ್ಮಾರಕವನ್ನೇ ಅಲ್ಲಿಂದ ಕೀಳುವ ನಿರ್ಧಾರವಾಯಿತೋ ಇನ್ನೂ ಆ ಸಂಬಂಧವಾದ ಖೈದಿಗಳನ್ನು ಜೈಲಲ್ಲಿ ಇರಿಸುವುದು ಚೆನ್ನಾಗಿಲ್ಲ. ಆದುದರಿಂದ ಬಂಗಾಳದ ಮಂತ್ರಿಮಂಡಲವು, ಈ ವಿಷಯದಲ್ಲಿಯೂ ಉದಾರಭಾವದಿಂದ ವರ್ತಿಸಲೆಂದು ಹಾರೈಸಲಾಗಿದೆ.

* * *

ಚೀನದ ಕಾರ್ಯ ಧೋರಣೆ

ಚೀನದ ಥೈರ್ಯರ್–ಸ್ಥೈರ್ಯಗಳು ಪ್ರಶಂಸನೀಯವಾಗಿವೆ. ಬರ್ಮಾ ರಸ್ತೆಯನ್ನು ಮುಚ್ಚಲಾಗುವುದೆಂದ ಬಳಿಕವೂ, ಚೀನಾವು ಜಪಾನಿಗೆ ಮಣಿಯುವ ಆಲೋಚನೆ ಮಾಡಿಲ್ಲ; ಬದಲಾಗಿ ಜಪಾನಿನ ವಿರುದ್ಧವಾದ ಯುದ್ಧದ ಕ್ರಮವನ್ನು ಇನ್ನಷ್ಟು ಬಿಗಿಮಾಡುವ ತೀರ್ಮಾನವನ್ನೇ ಮಾಡಿದೆ. ಈ ವಿಷಯದಲ್ಲಿ ಚೀನಾ ಸರಕಾರದ ಪಂಗಡದ ಒಂದು "ಮೆನಿಫೆಸ್ಟೊ", "ಶತ್ರುವನ್ನು ಚೀನಾ ಭೂಮಿಯಿಂದ ಹೊಡೆದೋಡಿಸುವ ವರೆಗೂ ಚೀನಾವು ಕಾದಾಡುವುದೇ ಸಿದ್ಧ"ವೆಂದೂ, ಅದೇ ಅಲ್ಲಿನ ನಿಸ್ಕರ್ಷೆಯಾದ ರಾಷ್ಟ್ರೀಯ ಕಾರ್ಯನೀತಿಯೆಂದೂ ಸಾರಿದೆ. ಮತ್ತೆ ಅದೇ ಪ್ರಕಟಣಾ ಪತ್ರವು ಮುಂಬರಿಯುತ್ತ "ಮಿತಿಮೀರಿದ ಸ್ವಾರ್ಥಪರಾಯಣತೆಯಿಂದ ತುಂಬಿದ ಜಪಾನಿನ ಇಂದಿನ ಮುನ್ನಡೆಯನ್ನು ಇಲ್ಲಿಗೇ ತಡೆಯದಿದ್ದರೆ, ಪೆಸಿಫಿಕ್ ಹಾಗೂ ಇಂಡಿಯನ್ ಸಾಗರಗಳಲ್ಲಿ ಜಗತ್ತಿನ ಯಾವ ಜನಾಂಗವೂ ತನ್ನ ಹಕ್ಕುಬಾಧ್ಯತೆಗಳನ್ನು ಉಳಿಸಿಕೊಳ್ಳಲು ಶಕ್ತನಾಗಲಾರದು" ಎಂದೂ ಶ್ರುತಪಡಿಸಿದೆ. "ವಸ್ತುತಃ ಜಗತ್ತಿನ ಯಾವತ್ತು ದೇಶಗಳೂ ಜಪಾನನ್ನು ತಮ್ಮ ಸಾಮಾನ್ಯ ಶತ್ರುವಾಗಿ ಭಾವಿಸಬೇಕಲ್ಲದೆ, ಚೀನದ ಇಂದಿನ ಇದಿರಾಟಕ್ಕೂ, ವಿಶ್ವಶಾಂತಿಗೂ ಇರುವ ಮುಖ್ಯ ಸಂಬಂಧವನ್ನೂ ಅವು ಅಗತ್ಯವಾಗಿಯೂ, ತಮ್ಮ ಅನುಭವಕ್ಕೆ ತಂದುಕೊಳ್ಳಲೇಬೇಕು" ಎಂಬುದೇ ಆ ಪ್ರಕಟಣಾ ಪತ್ರದ ಮುಂದಿನವರಿಂದ ಜಪಾನಿನ ವಿಷಯದಲ್ಲಿ ನೇನಾಕ್ಕೂ ಮಾನಭಾವವೇನೆಂಬುದು ಸ್ಪಷ್ಟವಾಗಿ ಅನ್ನುವಾಗ, ಜಗತ್ತಿನ ಯಾವ ರಾಷ್ಟ್ರವಾದರೂ, ಒಂದು ವೇಳೆ ಬ್ರಿಜನ್ನೇ ಆದರೂ, ಪೂರ್ವ ದೇಶದಲ್ಲಿ "ಶಾಂತಿ ಜಪ"ವನ್ನು ಮಾಡಿ ಪೂರೈಸುವಲ್ಲಿ ಕೃತಾರ್ಥವಾಗಬಹುದೆಂದು ನಂಬಲಾದೀತೇ?

* * *

ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿ

ಇದರ ಅಧ್ಯಕ್ಷರಾದ ಮಾಸ್ಟರ್ ತಾರಾ ಸಿಂಗರು "ಗ್ರೇಟ್ ಬ್ರಿಟನ್ ಕಾಂಗ್ರೆಸ್ ಕೇಳಿಕೆಯನ್ನು ಮನ್ನಿಸುವುದಾದರೆ, ಈ ಯುದ್ಧದಲ್ಲಿ ಕಾದಾಡಲಿಕ್ಕೆ ೧೦ ಲಕ್ಷ ಮಂದಿ ಸಿಖರನ್ನು ಒದಗಿಸುವ ಭಾರ ನನ್ನ ಮೇಲಿರಲಿ!" ಎಂದು ಪೇಶಾವರದ ಅವರದೊಂದು ಭಾಷಣದಲ್ಲಿ ಪ್ರಕಟಿಸಿದ್ದಾರೆ. ಇದೇನಾದರೂ "ವ್ಯಾಪಾರಿ" ದೃಷ್ಟಿಯ ವಾಗ್ದಾನವಲ್ಲ; ಒಂದು ಉದ್ದೇಶಕ್ಕಾಗಿ, ಒಂದು ಜನಾಂಗವು ಅತ್ಯಧಿಕವಾದ ತ್ಯಾಗಮಾಡಲು ಸಿದ್ಧವಿದೆ ಎಂಬ ಸತ್ಯಾಂಶವನ್ನು ಅಧಿಕಾರಿಗಳಿಗೆ ಖಚಿತಗೊಳಿಸುವುದಕ್ಕಾಗಿಯೇ ಈ ಆಶ್ವಾಸನವೆಂದು ತಿಳಿಯಬೇಕಾಗಿದೆ. ಈ ವಿಷಯದಲ್ಲಿ ಸಿಖರ ಪರವಾಗಿ ಅವರ ಮುಖಂಡರು ಕೊಟ್ಟರುವ ಆ ವಾಗ್ದಾನವೇ, ಹಿಂದೂಗಳ ವಿಚಾರದಲ್ಲಿಯೂ ಅನ್ವಯಿಸುವುದಾಗಿದೆ. ಆದ ಕಾರಣ ಬ್ರಿಟನ್ ಈ ಸಂಗತಿಗಳ ಯಥಾರ್ಥತೆಯನ್ನು ಅರಿತು, ಅದರಂತೆ ಇಂಡಿಯದ ಕಾರ್ಯನೀತಿಯನ್ನು ಬದಲಾಯಿಸಿ, ತನ್ಮೂಲಕ ಈ ದೇಶೀಯರ ಸರ್ವತೋಮುಖವಾದ ಸಹಕಾರವನ್ನು ಪಡೆಯಬಾರದೇ?

* *

"ಅಮೆರಿಕವು ಯುದ್ಧದಲ್ಲಿ ಪ್ರವೇಶಿಸುವುದು ಖಂಡಿತ"

—ಹೀಗೆಂದು ಸುಪ್ರಸಿದ್ಧ ಪತ್ರಿಕೆಯ ಮಾಲಕರಾದ ಮಿ. ಡಬ್ಲ್ಯು. ಆರ್. ಹಿಯರ್‌ಸ್ಟ್ ರವರು ಪತ್ರಿಕೆಗಳಿಗೆ ಬರೆದಿರುವರೆಂದು ನ್ಯೂಯಾರ್ಕಿನ ವಾರ್ತೆ. "ಅಮೆರಿಕವು ಯುರೋಪಿನ ಯುದ್ಧದಲ್ಲಿ ಪ್ರವೇಶಿಸುವುದು ಅನುಮಾನದಲ್ಲಿ ಉಳಿದಿಲ್ಲ. ಅದನ್ನು ಖಂಡಿತವೆಂದೇ ಭಾವಿಸಬಹುದು. ಸದ್ಯ ಅಮೇರಿಕವು ಯುದ್ಧದಲ್ಲಿ ಪ್ರವೇಶಿಸುವುದಕ್ಕಿಂತಲೂ ಹೊರಗಿದ್ದೇ ಬ್ರಿಟನಿಗೆ ಹೆಚ್ಚಿನ ಸಹಾಯ ಕೊಡಬಹುದಾಗಿದೆ. ಆದರೆ ಇನ್ನೊಂದು ವರ್ಷದೊಳಗಾಗಿ, ಪರಿಣಾಮಕಾರಿಯಾದ ಯುದ್ಧಕಾರ್ಯದಲ್ಲಿ ಭಾಗಿಯಾಗಲು ಅಮೆರಿಕವು ಶಕ್ತವಾಗುವುದು ಹಾಗೂ ಅದು ನಿಸ್ಸಂದೇಹವಾಗಿಯೂ ರಣರಂಗಕ್ಕಿಳಿಯುವುದು" ಎಂದು ಹಿಯರ್‌ಸ್ಟ್‌ರವರು ಅಭಿಪ್ರಾಯಪಡುತ್ತಾರೆ.

ಶಾಸ್ತ್ರೀಯ ಅಮೂಲ್ಯ

ಔಷಧಗಳು

ಅಮೃತಾಕುಂಕುಮ ತೈಲ:— ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1–2–0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧಮಹರ್ಷಿಗೆ ಅಶ್ವನೀದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3–0–0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯರು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಆರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ: ಬಾಟ್ಲಿ 1ಕ್ಕೆ ರೂ. 2–0–0.
ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಶ್ರೀ। ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯಾದೆ.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ

ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಜೈನಾ ಬಜಾರ್, ಮದ್ರಾಸ್.

Money to Lend

LOANS ARE GRANTED AT COMPETITIVE RATES ON BULLION, GOLD ORNAMENTS, GOVERNMENT PAPER, GOODS AND PRODUCE, SHARES & OTHER VALUABLE SECURITIES. ENQUIRE OF ANY OF OUR THIRTY-SEVEN OFFICES.

RESOURCES OF A CRORE

Estd. 1906
CANARA BANK, LIMITED

ಅಶಕ್ತ ಮಕ್ಕಳು
ಡೋಂಗರೇ ಬಾಲಾಮೃತವನ್ನು
ಕೊಡುವದರಿಂದ
ಸಶಕ್ತರೂ,
ಚೆಲುವರೂ,
ಸಂತೋಷ ಚಿತ್ತರೂ
ಆಗುವರು.

ವಿದೇಶ

"ಇಂಡಿಯದ ಪರಿಸ್ಥಿತಿ ವಿಷಮವಾಗಿಲ್ಲ"

ಕಾಮನ್ಸರ ಮಂದಿರದಲ್ಲಿ ಇಂಡಿಯದ ಸ್ಟೇಟ್ ಸೆಕ್ರಟರಿಗಳಾದ ಮಿ. ಅಮರಿಯವರು ಒಂದು ಪ್ರಶ್ನೆಗೆ ಉತ್ತರಕೊಡುತ್ತ, ಸದ್ಯದ ಇಂಡಿಯದ ರಾಜಕೀಯ ಪರಿಸ್ಥಿತಿಯ ಕುರಿತು ಯಾವ ಹೇಳಿಕೆಯನ್ನೂ ಕೊಡುವುದಕ್ಕಿಲ್ಲವೆಂದು ನುಡಿದರು. ಇನ್ನೊಂದು ಪ್ರಶ್ನೆಗೆ ಉತ್ತರವಾಗಿ, ಪ್ರಶ್ನಾ ಕರ್ತರು ಅಂದಂತೆ, "ಇಂಡಿಯದ ಪರಿಸ್ಥಿತಿಯು ಅಷ್ಟೇನೂ ಕಠಿನವಾಗಿಲ್ಲ"ವೆಂದು ಮಿ. ಅಮರಿಯವರು ಹೇಳಿದವರಲ್ಲದೆ, "ಅಪೇಕ್ಷಿಸಲಾದರೆ, ಇಂಡಿಯದ ವಿಷಯಕವಾದ ಅದೊಂದು ಬಗೆಯ ಚರ್ಚೆಯನ್ನು ಇಲ್ಲಿ ಏರ್ಪಡಿಸಬಹುದು" ಎಂದೂ ಶ್ರುತಪಡಿಸಿದರು.

ಆಫ್ರಿಕದಲ್ಲಿ ಯುದ್ಧನೀತಿ

ಈಜಿಪ್ಟಿನಲ್ಲಿ ಬ್ರಿಟಿಷರ ಕಾರ್ಯಧೋರಣೆಯು ಆತ್ಮರಕ್ಷಣೆಯದಾಗಿದೆ ಲೀಬಿಯದಲ್ಲಿ ಫ್ರೆಂಚರ ಅಪಜಯದಿಂದ ಪರಿಸ್ಥಿತಿ ಬದಲಾಗಿ, ಇಟೆಲಿಯನವರು ೨-೩ರಂಗಗಳಲ್ಲಿ ಕಾದಾಡದಂತಾಗಿದೆ. ಈಜಿಪ್ಟಿನ ಗಡಿಗಳಲ್ಲಿ ಸಾಗಿಸುವ ಶ್ರಮವೂ, ನೀರಿನ ಅಭಾವವೂ ವಿಪರೀತವಾಗಿದೆ. ಇಟೆಲಿಯವರು ತುಂಬಿಕೊಂಡಿರುವ ಕಡೆ "ನೆಲ ಯುದ್ಧ"ವೇ ಮುಖ್ಯವಾಗಿದೆ. ಹಲವು ಕಡೆ ಮುಳ್ಳಿನ ಸರಿಗೆಯ ಬೇಲಿಯನ್ನು ಕತ್ತರಿಸಿ ಹಲವು ಕೋಟೆಗಳನ್ನು ಹಿಡಿಯಲಾಗಿದೆ. ಕಪುಜ್ಜೊವನ್ನು ಇಟೆಲಿಯವರು ಪುನಃ ವಶಮಾಡಿಕೊಂಡಿರುವುದಾದರೂ ಬ್ರಿಟಿಷರಿಂದ ಕಳಚಲ್ಪಟ್ಟ ಆ ಪ್ರದೇಶದಿಂದ ಹೆಚ್ಚಿನ ಫಲವಾಗದು. ಕೆನಿಯಾದಲ್ಲಿ ಹೇಳತಕ್ಕುದೇನೂ ಈಗ ಇಲ್ಲ. ಅಲ್ಲಿ ಮಳೆಗಾಲ ತೊಡಗಿದೆ. ಕೈ ಕಾಳಗಗಳೂ, ಗೊರಿಲ್ಲಾ ಯುದ್ಧವೂ ಮಾತ್ರ ನಡೆಯುತ್ತಿದೆ.

ಇಟೆಲಿಯವರ ಮದ್ದುಗುಂಡಿನ ಉಗ್ರಾಣ ಹಾರಿತು

ಬ್ರಿಟಿಷ್ ವಿಮಾನಗಳ ಸಾಹಸದಿಂದ ಬಾರ್ಡಿಯದಲ್ಲಿರುವ ಇಟೆಲಿಯವರ ಮದ್ದುಗುಂಡಿನ ಉಗ್ರಾಣದ ದೊಡ್ಡದೊಂದು ಭಾಗವು ನಷ್ಟವಾಯಿತು. ೪೨ ಶತ್ರು ವಿಮಾನಗಳು ಈ ಕಾಳಗದಲ್ಲಿ ಭಾಗವಹಿಸಿದ್ದುವು.

ಬ್ರಿಟನಿನಲ್ಲಿ ಹಿಟ್ಲರು ಮುಂದುವರಿಯದಿರಲು ಕಾರಣವೇನು?

ಜರ್ಮನ್ ರಾಜನೀತಿ ಪಂಡಿತರ ಹಾಗೂ ಸೇನಾನಾಯಕರೊಳಗೆ ಬ್ರಿಟನಿನ ಮೇಲೆ ಆಕ್ರಮಣ ನಡೆಸಬೇಕೇ ಬೇಡವೇ ಎಂಬ ವಿಚಾರದಲ್ಲಿ ತೀವ್ರ ಮತಭೇದವುಂಟಾಗಿರುವುದಾಗಿಯೂ ಅದರಿಂದ ಹಿಟ್ಲರ್ ಕೊಂಚ ಹಿಂಜರಿಯುತ್ತಿರುವುದಾಗಿಯೂ ವಾರ್ತೆ.

ಜರ್ಮನಿಯ ಮುಂದಿನ ಹೆಜ್ಜೆ ಎಲ್ಲಿ?

ಸುರಕ್ಷಿತವಾದ ಬ್ರಿಟನನ್ನು ಆಕ್ರಮಿಸಿ ಹೆಚ್ಚಿನ ಅಪಾಯಕ್ಕೆ ಗುರಿಯಾಗುವುದಕ್ಕಿಂತಲೂ, ಜರ್ಮನಿ ಮೆಡಿಟರೇನಿಯನಿನ ಮೂಲಕ ಸಿರಿಯಾ, ಪ್ಯಾಲಸ್ತೈನ್ ಮತ್ತು ಈಜಿಪ್ಟ್‌ಗಳ ಮೇಲೆ ಏರಿ ಹೋಗಬಹುದೆಂದು ಇಂದಿನ ವಿದ್ಯಮಾನಗಳಿಂದ ಅನುಮಾನಿಸುವಂತಾಗಿದೆ. ಬ್ರಿಟನಿನಲ್ಲಿ ಹೆಚ್ಚಾದರೆ ಜರ್ಮನಿಯ "ವಿಮಾನಗಳ ಹಾವಳಿ" ಯೊಂದಿಷ್ಟು ನಡೆಯಬಹುದೆಂದು ಅಂದಾಜು.

ಜರ್ಮನಿಯ ಬಾಂಬರುಗಳ ಕಾಲಿವೆಯಲ್ಲಿನ ಸಾಹಸ

ಉಗ್ರವಾದ ವಿಮಾನಗಳ ಕಾಳಗವೊಂದು ಆಂಗ್ಲ ಕಾಲಿವೆಯಲ್ಲಿ ನಡೆಯಿತು. ನೂರಾರು ಬ್ರಿಟಿಷ್ ಹಾಗೂ ಜರ್ಮನಿಯ ವಿಮಾನಗಳು ಈ ಕಾದಾಟದಲ್ಲಿ ಭಾಗವಹಿಸಿದ್ದುವು. ಬಹಳ ಹೊತ್ತು ಯುದ್ಧ ನಡೆಯಿತು. ೮೦ ಶತ್ರು ವಿಮಾನಗಳು ಕಾಲಿವೆಯ ಹಡಗುಗಳನ್ನು ಆಕ್ರಮಿಸಲು ಮುಂದಾದರೂ, ಕೋವಿಗಳ ಬೆಂಕಿಯಿಂದ ಅವನ್ನು ಹಿಂದಕ್ಕೆ ಅಟ್ಟಲಾಯಿತು. ಹಡಗುಗಳಿಗೇನೂ ಪೆಟ್ಟಾಗಲಿಲ್ಲ. ಒಟ್ಟಿಗೆ ಈ ಕದನದಲ್ಲಿ ೨೪ ಶತ್ರು ವಿಮಾನಗಳನ್ನು ನಾಶ ಪಡಿಸಲಾಗಿದೆ.

ಜರ್ಮನಿಯ ಮೇಲೆ ದಾಳಿ

ಜರ್ಮನಿಯ ಮೇಲೂ, ಅದು ಆಕ್ರಮಿಸಿದ ದೇಶಗಳ ಮೇಲೂ ಬ್ರಿಟನ್ ಕಳೆದ ೩ ತಿಂಗಳಲ್ಲಿ ೧ ಸಾವಿರ ಸಲಕ್ಕಿಂತಲೂ ಹೆಚ್ಚಿಗೆಯಾಗಿ ವಿಮಾನ ದಾಳಿ ನಡೆಸಿದೆ. ತಗ್ಗಿನ ರಾಷ್ಟ್ರಗಳ ಆಕ್ರಮಣ ಆರಂಭವಾದಾಗಿನಿಂದ ಮುಖ್ಯವಾದ ಮಿಲಿಟರಿ ಹಾಗೂ ಫ್ಯಾಕ್ಟರಿಗಳ ಮೇಲೆ ಈ ದಾಳಿ ನಡೆದಿದೆ. ಫ್ರಾನ್ಸಿನ ಆಕ್ರಮಣನಾದ ಮೇಲಂತೂ ಈ ದಾಳಿಗಳ ವೇಗತೆ ಹೆಚ್ಚಿ ಒಂದೇ ತಿಂಗಳಲ್ಲಿ ಬ್ರಿಟನಿನ ವಿಮಾನಗಳು ೫೧೭ ಬಾರಿ ದಾಳಿ ನಡೆಸಿವೆ.

ಫ್ರೆಂಚರ ಅಶ್ರಯಹೀನರ ಹಡಗು ಮುಳುಗಿತು

"ಲಂಕಾಸ್ಟ್ರಿಯಾ" ಎಂಬ ಫ್ರೆಂಚರ ಹಡಗು ೫೩೦೦ ಮಂದಿ ಅನಾಥರನ್ನು ಹೊತ್ತು ತರುತ್ತಿದ್ದು ಸೈಂಟ್ ನಾಜಯರಿನ ಬಳಿ ಅದು ಮುಳುಗಿಸಲ್ಪಟ್ಟಿತು. ಇದು ನಾಜಿಗಳ ಅತ್ಯಾಚಾರ. ನೂರಾರು ಮಂದಿ ಹೆಂಗಸರೂ, ಮಕ್ಕಳೂ ಜಲಸಮಾಧಿಯಾದರು.

ಷಾಂಘ್ಹಾಯಲ್ಲಿ

ಇಲ್ಲಿ ಅಮೆರಿಕದ ನಾವಿಕರಿಗೂ ಜಪಾನಿಗಳಿಗೂ ಕೈ ಕೈ ಹತ್ತಿ ಗಲಭೆಯಾಗಿದೆ. ಇತ್ತೀಚಿನವರೂ ಇದನ್ನು ವಿಶೇಷ ಸಂಗತಿಯಾಗಿ ಭಾವಿಸಿ ವಿಚಾರಣೆ ನಡೆಸುತ್ತಿದ್ದಾರೆ!

ಹಾಫಿಯದಲ್ಲಿ

ಶತ್ರುಗಳ ವಿಮಾನಗಳಲ್ಲಿ ದಾಳಿ ನಡೆಸಿದುದರ ಫಲವಾಗಿ ಸುಮಾರು ೧೦೦ ಮಂದಿ ನಾಗರಿಕರಿಗೆ ಗಾಯಗಳಾಗಿವೆ. ನೂರಾರು ಟನ್ ಚಿಮಿಣಿ ಎಣ್ಣೆಗೆ ಬೆಂಕಿ ಹತ್ತಿದ್ದರೂ ನಂದಿಸಲಾಯ್ತು.

ಫ್ರೆಂಚ್ ಹಡಗನ್ನು "ಟಾರ್ಪಿಡೋ" ಮಾಡಿದರು

"ಮೆಕ್ನೆಸ್" ಎಂಬ ಫ್ರೆಂಚ್ ಹಡಗನ್ನು ನಾಝಿಗಳು ಗುಂಡು ಹಾರಿಸಿ ಧ್ವಂಸಮಾಡಿದರು. ಈ ಹಡಗು ೬೧೭೭ ಟನ್ನಿನದು. ಇದರಲ್ಲಿ ೧೩೦೦ ಮಂದಿ ಇದ್ದು ೩೬೩ ಮಂದಿ ಮುಳುಗಿರಬೇಕೆಂದು ಅಂದಾಜು. ಹೀಗೇ ಬ್ರಿಟಿಷರ ಮೂರು ಟ್ರಾವಲರುಗಳೂ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ.

ಅಮೆರಿಕದ ಎಣ್ಣೆ ಸರಬರಾಯಿ

ಅಮೆರಿಕದಲ್ಲಿ ಪೆಟ್ರೋಲಿಯಂ, ಬೀಡು, ಕಬ್ಬಿಣ ಮೊದಲಾದುವನ್ನು ಹೊರಗೆ ಸಾಗಿಸಬೇಕಾದರೆ ಇನ್ನು ಲೈಸನ್ಸ್ ಬೇಕಾಗಿದೆ. ಸ್ಪೈನಿನ ಮೂಲಕ ಇವು ಜರ್ಮನಿಗೆ ಸಾಗುತ್ತಿವೆ ಎಂಬ ಸಂದೇಹ ಬಂದುದರಿಂದ ಈ ಏರ್ಪಾಡು. ಇದರಿಂದ ಎಕ್ಸಿಕ್ ರಾಷ್ಟ್ರಗಳಿಗೆ ತೊಂದರೆಯಾಗಿದೆ. ಜಪಾನಿಗೂ ಕೈಕಟ್ಟಿದ ಹಾಗೇ.

ಇಂಡಿಯಾ ಸರಕಾರದ

3% ಡಿಫೆನ್ಸ್ ಬೋಂಡುಗಳು 1946

ಶೇಕಡಾ 3ರ ಆರು ವರ್ಷಗಳ ಡಿಫೆನ್ಸ್ ಬೋಂಡುಗಳನ್ನು ಕೊಂಡುಕೊಳ್ಳುವದರ ಅತ್ಯಧಿಕ ಮೊಬಲಗಿನ ಮಿತಿ ಕಟ್ಟುಗಳನ್ನು 1940ನೇ ಅಗೋಸ್ತು ತಾರೀಕು 1ರಿಂದ ತೆಗೆದುಹಾಕಲಾಗುವದು. ಶೇಕಡಾ 3ರ 1946ರ ಡಿಫೆನ್ಸ್ ಬೋಂಡುಗಳು ಆ ತಾರೀಕುಲಾಗಾಯಿತು ಮುಂದೆ ನೋಟೀಸು ಕೊಡುವವರೆಗೆ ಸಿಗುವುವು. ಅದನ್ನು ವಿಕ್ರಯಿಸುವ ಮೌಲ್ಯವು ರೂ. 100-0-0 ಆಗಿದ್ದು ಮುಂದೆ ಪ್ರತಿ ವಾರವೂ ಅದರ ಮೇಲೆ ಪ್ರತಿ ವಾರ ಫಲಿಸುವ ಬಡ್ಡಿಯ ಮೇರೆಗೆ ಸರಿಸುಮಾರು ಅಧಿಕವಾಗುತ್ತ ಬರುವುದು. ಬೋಂಡುಗಳು 1946ನೇ ಆಗೋಸ್ತು ತಾರೀಕು 1ರಂದು ಶೇಕಡಾ ಒಂದು ರೂಪಾಯಿ ಪ್ರೀಮಿಯಮಿನೊಂದಿಗೆ ಮರುಪಾವತಿ ಮಾಡಲ್ಪಡುವುವು.

ಮಾರುಪಾಟಿನ ಶರ್ತಗಳು

5% ಸಾಲ 1940-43

ಈ ಸಾಲಪತ್ರಗಳು ಅವುಗಳ ಗುಜಾರಾಗುವ ಕಾಲದ ಪೂರ್ಣ ಮೌಲ್ಯದಲ್ಲಿ ಜೋಂಡುಗಳನ್ನು ಕೊಳ್ಳುವ ಬೆಲೆಯ ಬದಲಾಗಿ ಕೊಳ್ಳಲ್ಪಡುವುವು. ಶೇಕಡಾ 5ರ ಸಾಲದ ಮೇಲಣ 1940ನೇ ಸಪ್ಟಂಬರ 30ರ ವರೆಗಣ ಬಡ್ಡಿಯು ಹೊಸ ಸೆಕ್ಯುರಿಟಿಗಳನ್ನು ಕೊಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು.

ಈ ಸಾಲದ ಪ್ರಕಟಣಾ ಪತ್ರವೂ ಅಪ್ಲಿಕೇಶನ್ ಫಾರ್ಮುಗಳೂ ರಿಜರ್ವ್ ಬ್ಯಾಂಕ್ ಒಫ್ ಇಂಡಿಯಾದ ಮುಂಬಾಯಿ, ಕಲ್ಕತ್ತಾ, ಢಿಲ್ಲಿ ಮತ್ತು ಮದ್ರಾಸು ಕಾರ್ಯಾಲಯಗಳಲ್ಲೂ, ಹಿಂದುಸ್ಥಾನದ ಇತರೆಡೆಗಳಲ್ಲಿರುವ ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾದ ಶಾಖೆಗಳಲ್ಲೂ, ಎಲ್ಲಾ ಸರಕಾರಿ ಖಜಾನೆಗಳಲ್ಲೂ ಸಿಗುವುವು.

ಜಂತನಾಶಕ ವ್ಯಡಿ

ಜಂತುಗಳು ಹೊಟ್ಟೆಯೊಳಗೆ ಬೆಳೆದರೆ ಯಾವ ತರದ ಪೋಷಕ ತಿಂಡಿಗಳು ತಿಂದರೂ ಶರೀರಕ್ಕೆ ಉಪಯೋಗವಿರದು. ಆಲ್ಲದೆ ಸಣ್ಣ ಹುಡುಗರಿಗೆ ಈ ಹುಳುವಿನಿಂದ ತುಂಬಾ ಕೆಡಕಾಗಿರುವದು. ನಮ್ಮ ಜಂತಿನ ಪುಡಿಯಿಂದ ಹೊಟ್ಟೆಯೊಳಗಿನ ಚಿಕ್ಕ ದೊಡ್ಡ ಹುಳಗಳು ಸಲಿಸಾಗಿ ಮಲದೊಡನೆ ಖಿದ್ದು ಹೋಗುವದು. ಇದಕ್ಕೆ ಹರಳೆಣ್ಣೆ ತೆಕ್ಕೊಳ್ಳುವದು ಬೇಡ. ಪೆಕೆಟು 1ಕ್ಕೆ 0-1-0.

ಮೆಜಿಕ್ ಕ್ಯೂರ್

ಈ ಪ್ರಸಿದ್ಧವಾದ ಔಷಧಿಯು, ಅರ್ಧ ತಲೆನೋವು, ವಾಯು ಹೊಟ್ಟೆನೋವು, ಜಳಿಜ್ವರ, ಹಲ್ಲುನೋವು, ನೆಗಡಿ, ಕೆಮ್ಮು, ಇನ್‌ಫ್ಲೂಯೆಂಜ ಮುಂತಾದವುಗಳ ಮೇಲೆ ಗುಣಕಾರಿಯಾಗಿದೆ. ಪೆಕೆಟು 1ಕ್ಕೆ 0-1-6.

ತಯಾರಿಸುವವರು:

SHIVAJI CHEMICAL WORKS,
BELGAUM.

ವಿಕ್ರಿತ ಮಾಡುವವರು:

ಶ್ರೀ. ಹರಿದಾಸ್ ಭಂಡಾರಿಗಳು ಮತ್ತು ಸಾ. ಕಂಪೆನಿ, ಮಂಗಳೂರು.

ರಾಜಾ ಸ್ನೋ

ಅಂದಕ್ಕಾಗಿ

ಮಣ್ಯಂ ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

PANDIT BANK,
MANGALORE.

ಪಂಡಿತ್ ಬೇಂಕ್,

ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ಪ್ರಕಾರಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿಯುಳ್ಳದ್ದಾಗಿರುವದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ಶಿಲ್ಕಿನ ಮೇಲೆ	ಶೇಕಡಾ 1½ %
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ.	ಶೇಕಡಾ 4½ %

PANDIT SHIVA RAO, B.A., LL.B.,
PROPRIETOR.
PANDIT SANJIVA RAO, B.A.
AGENT.

EARN Rs. 300.

Beautiful, Rectangular, chro mium, 5 years Gtd., Swiss lever Wrist Watch, may be sold to others for Rs. 18/-, but we offer them at Rs. 4/8/- ; 4 Jewls, Rs. 6/8/-; Gold gilt, Rs. 5/8/- Round or Square, Superior, Rs. 3-8 ; Gold gilt, Rs. 4-8 ; Ladies ; small Rectangular, Rs. 9-8 ; Round, Rs. 4-8 Postage and Packing annas /9/- in India, out of India Extra. free for 3 at a time.

EDMUND & CO.,
66-B, SADANANDA ROAD,
CALCUTTA.

ತಾ. 30-7-'40 ಮತ್ತು 31-7-'40 ಮಾತ್ರ
ಸಮಯ:— 6-30 ಮತ್ತು 9-30 ಕ್ಕೆ

ನ್ಯೂ ಚಿತ್ರಾ ಟೊಕೀಸ್,

ಮಂಗಳೂರು — ಇವರ ಸಿನೆಮಾ ರಂಗಭೂಮಿಯಲ್ಲಿ
ಅಂತರ ರಾಷ್ಟ್ರೀಯ
ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ

ಮೀನಕಾ— ಭಾರತ ನಾಟ್ಯವಿಶಾರದೆ

ಮತ್ತು

ಧಾಮನಾರಾಯಣ : ಗೌರೀಶಂಕರ : ಕೃಷ್ಣನ್ ಕುಟ್ಟಿ : ವಸಂತ ನಾಡಕರ್ಣಿ : ವಿಮಲಾ : ಮಾಲತಿ : ಅನುಸೂಯಾ ಶೇವಂತಿ

ಇವರ ಹಿಂದೂ ಗಾಯನ ಯಂತ್ರಗಳಿಂದ
ಉಪಯುಕ್ತ ಗಾಯನ ನೃತ್ಯಗಳನ್ನು
ಕಣ್ಣಾರೆ ಕಾಣುವ ಇದೊಂದೇ ಸುಸಂದರ್ಭ
— ಕಳೆಯ ಬೇಡಿರಿ —

ಓರ್ಕೆಸ್ಟ್ರ ರಾಮಚಂದ್ರು ಗಂಗುಲಿ
ದಿಗ್ದರ್ಶಕರು: ಮತ್ತು
ವಿಷ್ಣು ಕಿರೋಡ್‌ಕರ್,
(ಮಾಜಿ ನ್ಯೂ ಥಿಯೇಟರ್ಸ್ ಕಂಪೆನಿಯವರು.)

A BANK OF INTEREST

FORMS OF TRUST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of [illegible]ion is attributable to the interest t[illegible]l in it and that is what "CORPOR[illegible]n rightly boast of.

THE CANARA BANKING CORPORATION, LTD.
(*Incorporated in British India*)

XXII] ಮಂಗಳೂರು, ತಾರೀಕು ೩೦—೭—೧೯೪೦ [೩೫
೧೯೬೨ ವಿಕ್ರಮ ಸಂವತ್ಸರದ ಆಷಾಢ ಬ। ೧೧ ಕುಜವಾರ

ಪ್ರಾಣಿಯು ಸ್ವಾರ್ಥಿಯಲ್ಲ; ಅದು ಅದಕ್ಕಾಗಿ ಆಹಾರವನ್ನು ಬಯಸುತ್ತದೆ. ಉಳಿದುದರಲ್ಲಿ ಅದಕ್ಕೆ ಆಗ್ರಹವಿಲ್ಲ; ಮನುಷ್ಯನಿಗೆ ಅದರಲ್ಲೇ ಸ್ವಾರ್ಥ.
—ಸೂಕ್ತಿಮಾಲೆ.

ಸಮೃದ್ಧ–ಸಮಾನ–ನವೀನ ಭಾರತದ ಸೃಷ್ಟಿ.

ನಿಮ್ಮ ಹಿಂದಿನ ಯಾವುದು ಹೆಚ್ಚು ಕೆಡಕು ಮಾಡಿತಕ್ಕುದು?—ಹಿಟ್ಲರಿಜಮ್ಮೋ? ಕಮ್ಯುನಿಜಮ್ಮೋ? "ಎರಡೂ ಕೆಟ್ಟುದೇ; ಆದರಲ್ಲಿ "ಹಿಟ್ಲರಿಜಂ" ಅತಿ ನಿಕೃಷ್ಟವಾದುದು" ಎಂದು ಹೇಳುವವರೂ ಹಲವರಿದ್ದಾರೆ. ಒಂದು ವೇಳೆ, ರಷ್ಯಾ ಬ್ರಿಟನಿಗೆ ಸಹಾಯ ಮಾಡಬಹುದಾದ ಕಾರಣ, ಕಮ್ಯುನಿಜಮ್ಮನ್ನಾದರೂ ಸಹಿಸಬಹುದು ಎಂಬ ಹೀಗೊಂದು ಅಭಿಪ್ರಾಯವೂ ಇದೆ. ಇದರ ನೇರೆಗೆ, ರಷ್ಯಾ ಎಲ್ಲಿಯಾದರೂ ಸಹಾಯ ಮಾಡಿದರೆ, ಬಾದಶಾಹಿ ತತ್ತ್ವಾದ ಬಂಡವಾಳವು, ಈ ಕಮ್ಯುನಿಜಮ್ಮಿಗೆ ಆಶ್ರಯ ಕೊಟ್ಟರೂ ಆಶ್ಚರ್ಯವಲ್ಲವೆನ್ನಿ.

ಕೊಂಚ ಸಮಯದ ಹಿಂದೆ, ಮಿ. ಚೆಂಬರ್‌ಲೀನರು ಕಮ್ಯುನಿಜಮಿಗ್ಕಿಂತ ನಾಜಿಯಿಜಮ್ಮೇ ವಾಸಿ ಎಂದು ತಿಳಿದಿದ್ದಂತೆ ತೋರುತ್ತದೆ. ಆದುದರಿಂದಲೇ ಚೆಂಬರ್‌ಲೀನರ ಹಾಗೂ ಬ್ರಿಟಿಷ್ ಬಂಡವಾಳಗಾರರ, ಕುಬೇರರ ಸಹಾನುಭೂತಿಯು ಸ್ಟೆಲಿನಿಗಿಂತ ಹಿಟ್ಲರಿನಲ್ಲಿಯೇ ಹೆಚ್ಚಾಗಿರಲು ಕಾರಣವಾಗಿರಬೇಕು. ಆದರೆ ಜರ್ಮನಿಯೂ, ರಷ್ಯವೂ ಪರಸ್ಪರ ಕಾದಾಡುವಂತೆ ಹೂಡಿದ್ದ ಆ ಬಲೆ ಹರಿದು ಹೋದಾಗ, ಚೆಂಬರ್‌ಲೀನರ "ಕಣ್ಣುಮುಚ್ಚಾಲೆ"ಯ ಕಾರ್ಯನೀತಿಯ ಉಪಯೋಗವನ್ನು ಮಾಡಿಕೊಂಡು, ಹಿಟ್ಲರ್ ರಷ್ಯದ ಸರ್ವಾಧಿಕಾರಿಯೊಡನೆ ಒಂದು ಒಪ್ಪಂದ ಮಾಡಿಕೊಂಡಾಗ, ಬಾದಶಾಹಿ ತತ್ತ್ವಾದ ಬ್ರಿಟಿಷರ ಕಣ್ಣುಗಳಿಗೆ, ಹಿಟ್ಲರಿಜಮ್ಮೂ, ಕಮ್ಯುನಿಜಮ್ಮೂ ಎರಡೂ ಅಸಹ್ಯಕರವೆಂದೇ ತೋರಿತು. ಅಷ್ಟರಲ್ಲಿ ಹಿಟ್ಲರ್ ಯುದ್ಧವನ್ನಾರಂಭಿಸಿದ ರಷ್ಯ ದಂಡೆಯ ಕೆಳಕುಳಿತಿತು. ಆದುದರಿಂದ ಬಾದಶಾಹಿ ತತ್ತ್ವಾದ ಆರಾಧಕರಾದ ಕೆಲ ಬ್ರಿಟಿಷರಿಗೆ ಇದರಲ್ಲಿ "ಚುನಾವಣೆ" ಮಾಡುವುದು ಕಷ್ಟವಾಗಲಿಲ್ಲ. ಹಿಟ್ಲರಿಜಂ ಅತ್ಯಂತ ಅಸಹ್ಯಕರವಾದದ್ದು,—ಮುಖ್ಯವಾಗಿ ಹಿಟ್ಲರನ ಮಿಲಿಟರಿ ಜಯದ ದೃಷ್ಟಿಯಿಂದ; ಕಮ್ಯುನಿಜಂ ಅಷ್ಟೊಂದು ಅಸಹ್ಯವಲ್ಲ—ಕಾರಣ, ಸ್ಟಾಲಿನ್ ಇನ್ನೂ ದಂಡೆಯ ಮೇಲೆ ಕುಳಿತಿದ್ದಾನೆಯಾಗಿ, "ಸಂದೇಹದ ಸತ್ಫಲ"ವು ಅವನಿಗೆ ದೊರಕಬೇಕು! ಇದಿಷ್ಟೇ ಅವರ ತೀರ್ಮಾನವಾಗಿರಬೇಕು!

ಇಷ್ಟಾದರೂ, ರಷ್ಯದ ಸರ್ವಾಧಿಕಾರಿ ಎಲ್ಲಿಯಾದರೂ ಬಹಿರಂಗವಾಗಿ ತನ್ನ ಜರ್ಮನ್ ಸ್ನೇಹಿತನೊಡನೆ ಕೈ ಜೋಡಿಸಿದನೆಂದಾದರೆ, ಆಗ ಹಿಟ್ಲರಿಜಮ್ಮಿಗೂ ಕಮ್ಯುನಿಜಮ್ಮಿಗೂ ಕಷ್ಟು ಬಳಿಯುವ ಆ ಕುಂಚವು ಒಂದೇ ಎಂಬುದು ನಿರ್ವಿವಾದ. ಇದರಲ್ಲಿ ಬ್ರಿಟನಿನ ಮುಖ್ಯ ಪ್ರಶ್ನೆ ಏನೆಂದರೆ,—ನಮ್ಮೊಡನೆ ಇರುವವರು ಯಾರು, ನಮಗೆ ವಿರುದ್ಧವಾಗಿರುವವರು ಯಾರು ಎಂಬುದಷ್ಟೇ. ತತ್ತ್ವಾಗಳ, ಯೋಗ್ಯತೆಗಳ ಪರೀಕ್ಷೆಗಿಂತಲೂ, ಈ ಪ್ರಕರಣದಲ್ಲಿ ರೊಟ್ಟಿ ಬೆಣ್ಣೆಯ ವಿಚಾರವೇ ಪ್ರಧಾನವಾಗಿರುವಂತೆ ತೋರುತ್ತದೆ.

ಇಂಡಿಯವನ್ನೂ ಪುಷ್ಟಿಯಾಗಿರುವಂತೆ ರಚಿಸಬೇಕೆಂದು ಒಂದೆರಡು ಆಂಗ್ಲೋ–ಇಂಡಿಯನ್ ಪತ್ರಿಕೆಗಳು ಬಹಳವಾಗಿ ಹಾರೈಸುತ್ತಿವೆ. ಈ ಹಾರೈಸುವಿಕೆಯಲ್ಲಿ, ನಮ್ಮ ಹಿಂದಿನ ಋಷ್ಯಾಶ್ರಮಗಳಂತೆ, ಹುಲಿಯೂ ನರಿಯೂ ಒಂದೇ ಜಲಮೂಲದಿಂದ ನೀರು ಕುಡಿಯಬಹುದೇನೋ! ಬಾದಶಾಹಿ ಸೂತ್ರವೂ, ಸಮಾಜವಾದವೂ, ಬಂಡವಾಳವೂ, ಶ್ರಮಜೀವನವೂ ಎಲ್ಲವೂ ಒಂದಾಗಿ ಎಲ್ಲರಿಗೂ ಧಾರಾಳ ಮೃಷ್ಟಾನ್ನವೋ, ಹಾಲೋ, ಜೇನೋ ದೊರೆತು, ಕಷ್ಟಕ್ಲೇಶಗಳೆಲ್ಲ ಮಾಯವಾಗುವವೇನೋ! ಹಾಗಾಗಬೇಕೆಂದು ಆ ಪತ್ರಿಕೆಗಳ ಅಭಿಲಾಷೆ.

ಆದುದರಿಂದಲೇ ಆ ಆಂಗ್ಲೋ–ಇಂಡಿಯನ್ ಪತ್ರಿಕೆಗಳು, ಅಂತಹ ನಿತ್ಯ ಸುಖಿಯಾದ ಇಂಡಿಯದ ನಿರ್ಮಾಣಕ್ಕಾಗಿ, ಕೆಲ ಏರ್ಪಾಡುಗಳಾಗಬೇಕೆನ್ನುತ್ತಿವೆ:—"ವ್ಯಾಪಾರೀ ಸಂಘಗಳೊಡನೆ ಆಲೋಚನೆ ನಡೆಸಿ, ಶ್ರಮಜೀವನದ ಶೋಷಣೆಯಾಗದ ಹಾಗೆ, ಆ ವ್ಯಾಪಾರೀ ಸಂಸ್ಥೆಗಳ ಬೆಳವಣಿಗೆ ಸಾಗುವ ಯೋಜನೆ ಮುಂಮೊತ್ತಲಿ; ಬಹು ದೊಡ್ಡ ಕಸುಬು ಆದ ಕೃಷಿ ಕರ್ಮವೂ, ಅದೇ ರೀತಿಯಲ್ಲಿ ಅಭಿವೃದ್ಧಿಗೆ ಬರಲಿ; ವಿದ್ಯಾ, ಉದ್ಯೋಗ, ಆಹಾರ, ಆರೋಗ್ಯಗಳು ಅಜ್ಞಾನ, ಅವಿದ್ಯೆ, ಉಪವಾಸ ಮತ್ತು ರೋಗಾದಿಗಳನ್ನು ಹೊಡೆದೋಡಿಸಲಿ!" ಇದೀಗ ಆ ಪತ್ರಿಕೆಗಳ ಕಮ್ಯುನಿಜಂ ಛಾಯೆಯ ಕಲ್ಪನಾ ಸೃಷ್ಟಿಯ ಆ "ಸಮಾನ, ಸಮೃದ್ಧ ನವೀನ ಭಾರತ"ದ ಮನೋಹರ ಚಿತ್ರ!

ಇವೆಲ್ಲಾ ಇಂಡಿಯದ ಪರವಾದ ಸದ್ಭಾವಗಳೇ; ಸರಿ; ಒಪ್ಪೋಣ. ಆದರೆ ಈ ಸದ್ಭಾವಗಳು ಕಳೆದ ಹಲವು ವರ್ಷಗಳಿಂದಲೂ ಇಂಡಿಯದಲ್ಲಿ ಓಡಾಡುತ್ತಿರುವುದನ್ನು ನಾವು ಕೇಳಿಲ್ಲವೇ? ಕಂಡಿಲ್ಲವೇ? ಈ ಒಂದೂವರೆ ಶತಮಾನಗಳಲ್ಲಿ, ನಮ್ಮ ದೇಶದ ಕೃಷಿ, ವ್ಯಾಪಾರ, ನಿರುದ್ಯೋಗ, ಆರೋಗ್ಯಾದಿಗಳ ಸ್ಥಿತಿ ಎಷ್ಟು ಮಟ್ಟಿಗೆ ಸುಧಾರಿಸಿವೆ ಎಂದು ನಮ್ಮ ಬ್ರಿಟಿಷ್ ಪ್ರಭುಗಳೇ ತಿಳಿಯದೆ? ಹಿಂದೀಯರಲ್ಲಿ ಇಂದಿಗೂ ಸೇಕಡಾ ೯೦ ನುಂದಿ ಅನಕ್ಷರಸ್ಥರು; ಸೇಕಡಾ ೭೦ ಮುಂದಿಗೆ ಹೊಟ್ಟೆ ತುಂಬುವ ಒಂದೂಟಕ್ಕೂ ಗತಿ ಇಲ್ಲವೆನ್ನುವಾಗ, ಈಗ ಅಥವಾ ಇನ್ನು ಮುಂದೆ ಇಂಡಿಯವು "ಸಮೃದ್ಧ–ಸಮಾನ–ನವೀನ–ಇಂಡಿಯ" ವಾಗುವುದೆಂದರೆ, ಆಗಬೇಕೆಂದರೆ ಯಾರಿಗೆ ಬೇಡವಾಗಿದೆ?

ಆದರೆ ಈ "ಸಮೃದ್ಧ ಇಂಡಿಯ"ದ ಈ ನಿರ್ಮಾಣ, ಹಿಟ್ಲರನನ್ನು ಗೆಲ್ಲುವ ತನಕ ಆಗಲಾರದೆಂದು ತೋರುತ್ತದೆ. ಅನಂತರ ಭಾರತದಲ್ಲಿ, ಆ ಆಂಗ್ಲೋ–ಇಂಡಿಯನ್ ಪತ್ರಿಕೆಗಳ ಉದ್ಗಾರಗಳಂತೆ, ಪ್ರಾಯಶಃ, ಇಲ್ಲಿನ ಅವಿದ್ಯೆ, ನಿರುದ್ಯೋಗ, ಅಜ್ಞಾನ, ಉಪವಾಸಾದಿಗಳೆಲ್ಲ ಏಕಾಏಕಿ ಮಾಯವಾಗುವುವೇನೋ! ಆದರೆ ಈ ಅದ್ಭುತ ಕಾರ್ಯವು ಹೇಗೆ ನಡೆಯುವುದು? ಹಲವರೆನ್ನುವಂತೆ ಹಿಟ್ಲರನ ನಿಗ್ರಹದಲ್ಲಿ ಭಾರತೀಯರೆಲ್ಲರೂ ಸಹಕರಿಸುವುದರಿಂದ! ಒಂದು ವೇಳೆ ಹಾಗೆ ಭಾರತವು ಸಹಕರಿಸಿಯೂ, ಭಾರತದ ಈ ಕಷ್ಟಕ್ಲೇಶಗಳು ತೊಲಗದಿದ್ದರೆ, ಮತ್ತೆ ಭಾರತದ ಆ ಸಮಸ್ಯೆಗಳ ನಿವೃತ್ತಿ ಯಾವಾಗ ಹೇಗೆ ಆದೀತೆಂದು ಅವೇ ಆಂಗ್ಲೋ–ಇಂಡಿಯನ್ ಪತ್ರಿಕೆಗಳೇ ಹೇಳದಿರಲಾರವು. ಅಂತೂ ಸದ್ಯಕ್ಕೆ—ಈ ಯುದ್ಧ ಮುಗಿವ ತನಕ,—ಈ ಸದ್ಭಾವಗಳ ಪ್ರದರ್ಶನಕ್ಕೆ ಕಡಿಮೆ ಇಲ್ಲ ಎಂಬುದಿಷ್ಟನ್ನು, ಈ ಪತ್ರಿಕೆಗಳು, ಹಿಂದೀಯರ ಮುಂದಿರಿಸಲು ಹೊರಟಿವೆ. ಆದರ ಪ್ರಯೋಜನವನ್ನು ಮಾಡಿಕೊಳ್ಳದಿದ್ದರೆ, ಅದು ಭಾರತೀಯರದೇ ತಪ್ಪಾಗದೇ?

ಬಾಲ್ಕನ್ ರಾಷ್ಟ್ರಗಳ ಹಿಗ್ಗಾ ಮುಗ್ಗಿ

ರುಮೇನಿಯಕ್ಕೆ ಪುನಃ ಗಂಡಾಂತರವೊದಗಿದೆ ಹಂಗೇರಿ ಮತ್ತು ಬಲ್ಗೇರಿಯಗಳು ಪುನಃ ತಮ್ಮ ಪ್ರದೇಶಗಳನ್ನು ರುಮೇನಿಯವು ಕೊಡಬೇಕೆಂದು ಒತ್ತಾಯ ಪಡಿಸುತ್ತಿವೆ. ರಷ್ಯಾವಾದರೋ ಹಾವಳಿ ಮಾಡುವ ಸ್ಫೂರ್ತಿಯನ್ನೇ ತೋರ್ಪಡಿಸುತ್ತಿದೆ. ಏಕ್ಸಿಕ್ ರಾಷ್ಟ್ರಗಳ ಹಾಗೂ ರಷ್ಯದ ನೆಂಟಸ್ತಿಕೆಯು, ಕಳೆದ ಮಹಾಯುದ್ಧದಲ್ಲಿ ರುಮೇನಿಯವು ಸುಲಭದಲ್ಲಿ ಸಂಪಾದಿಸಿದ ಪ್ರದೇಶಗಳನ್ನೇನೂ ಉಳಿಸಿಕೊಳ್ಳಲು ರುಮೇನಿಯಕ್ಕೆ ಸಹಾಯ ಮಾಡುವಂತೆ ತೋರಲಿಲ್ಲ. ರುಮೇನಿಯದ ಮಂತ್ರಿಗಳೇನೋ ಹಿಟ್ಲರನ್ನು ಕಂಡು ಮಾತಾಡಿದುದು ನಿಜ ಆದರೆ ಅವರು ಅಲ್ಲಿಗೆ ಹೋದುದು ಹಿಟ್ಲರಿಂದ "ಅಪ್ಪಣೆ" ಪಡೆಯುವುದಕ್ಕಲ್ಲದೆ, ಬೇರೇನೂ ಫಲವಾಗಲಿಲ್ಲವೆಂದು ಹೇಳಲಾಗಿದೆ. ವಾರ್ತೆಗಳ ಮೇರೆಗೆ, ಜರ್ಮನಿ ಹಂಗೆರಿಯ ಟ್ರಾನ್ಸಿಲ್ವೇನಿಯದ ಕುರಿತಾದ ಕೇಳಿಕೆಯನ್ನೇ ಸಮರ್ಥಿಸುವುದಾಗಿದೆ; ಹಂಗೇರಿಗೆ ರುಮೇನಿಯ ಬಿಟ್ಟುಕೊಡಬೇಕಾದ ಪ್ರದೇಶದ ವಿಸ್ತೀರ್ಣವೆಷ್ಟೆಂಬುದು ಮಾತ್ರ ನಿರ್ಧಾರವಾಗಬೇಕಷ್ಟೆ. ಆದರೆ ರುಮೇನಿಯ ಯುದ್ಧ ಮಾಡದೆ ಇನ್ನೂ ತನ್ನ ಪ್ರದೇಶಗಳನ್ನು ಬಿಟ್ಟು ಕೊಡಲಾರದೆಂದು ಕೇಳಿ ಬರುತ್ತಿದೆ. ಈ ತತಂಗದಿಂದ ಜರ್ಮನಿ ಈಗ ಉಭಯ ಸಂಕಟದಲ್ಲಿ ಬಿದ್ದಿದೆ. ಅತ್ತ ಹಳೆಯ ಮಿತ್ರನಾದ ಹಂಗೆರಿಯನ್ನು ಸಮರ್ಥಿಸದಿರಲಾರದು; ಇತ್ತ ರುಮೇನಿಯಾ–ಹಂಗೆರಿಗಳ ಕಾದಾಟವೂ ಅದಕ್ಕೆ ಪಥ್ಯವಿಲ್ಲ. ಕಾರಣ, ಬಾಲ್ಕನಿನಲ್ಲಿ ಯುದ್ಧವೆಂದರೆ ಜರ್ಮನಿಯ ಕೈಕಟ್ಟಿದ ಹಾಗೆ. ಆದು ಕಾರಣವೇ ರುಮೇನಿಯದ ಮಂತ್ರಿಗಳಿಗೆ ಹಿಟ್ಲರು "ನೀವು ರಾಜಿಯಾಗಿ" ಎಂದು ಉಪದೇಶಿಸಿದುದು. ಇದರ ಇತ್ಯರ್ಥವೇನೆಂದು ಮುಂದೆ ನೋಡಬೇಕು.

ಡಿಫೆನ್ಸ್ ಬಾಂಡು

ಇದೇ ಕಳೆದ ಜುಲ್ಯಾ ತಾ. ೧೯ರ ವರೆಗೆ "ಬಡ್ಡಿ ಉಚಿತದ ಡಿಫೆನ್ಸ್ ಬಾಂಡು"ಗಳು ೧,೨೫,೬೯,೦೦೦ ರೂಪಾಯಿಗಳಷ್ಟೂ, ಮೂರು ಪರ್ಸೆಂಟ್ ಡಿ, ಬಾಂಡುಗಳು ೫೦,೬೧,೦೦೦ ರೂಪಾಯಿಗಳಷ್ಟೂ, ಪೋಸ್ಟ್ ಆಫೀಸ್ ೧೦ ವರ್ಷಗಳ ಡಿll ಸೇವಿಂಗ್ಸ್ "ಸರ್ಟಿಫಿಕೇಟ್"ಗಳು ೩೩,೧೯,೦೦೦ ರೂಪಾಯಿಗಳಷ್ಟೂ, ಚೆಂದಾ ಆರ್ಪಿಸಲ್ಪಟ್ಟಿರುವುದಾಗಿ ಪ್ರಕಟವಾಗಿದೆ.

ತಿರುಪೂರಿನಲ್ಲಿ ಅರಳೆ ಸಾಹುಕಾರರಾದ ಶ್ರೀ. ಎಸ್. ಕೆ. ಅರುಣಾಚಲಂ ಚೆಟ್ಟಿಯಾರರು ಅಲ್ಲಿನ ಒಂದು ಕೊಳದಲ್ಲಿ ಸತ್ತು ಬಿದ್ದುದನ್ನು ಕಂಡ ಆ ರಾತ್ರಿಯೇ ಅವರ ಪತ್ನಿಯೂ ಒಂದು ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡರು.

ಲಾಹೋರಿನಲ್ಲಿ ವಾರ್ತಾ ಪತ್ರಿಕೆಯನ್ನು ಹೊತ್ತು ಮಾರುವನನೊಬ್ಬನು ಭಯೋತ್ಪಾದನದ ಸುದ್ದಿಗಳನ್ನು ಕೂಗಿ ಹೇಳುತ್ತಿದ್ದನೆಂದು ಅವನನ್ನು ಕೈದುಮಾಡಿದ್ದಾರೆ.

ಕವಿರ್ಧುಲದಲ್ಲಿ ಇಬ್ಬರು ಸಿಖರ ಕೈದೂ (ರಕ್ಷಣಾ ಕಾನೂನಿನ ಮೇರೆಗೆ) ಕಲ್ಕತ್ತೆಯಲ್ಲಿ "ಫಾರ್ವರ್ಡ್ ಬ್ಲಾಕ್" ಎಂಬ ಆಂಗ್ಲ ವಾರ ಪತ್ರಿಕೆಯ ಕಾರ್ಯಾಲಯದ ಝಡ್ತಿಯೂ ನಡೆದಿದೆ.

"ತುಟ್ಟಿಯ ಭತ್ತೆ"ಯ ವಿಷಯದಲ್ಲಿ ನಾಗ್ಪುರದ ಮೊಡೆಲ್ ಮಿಲ್ಲುಗಳ ಕೆಲಸಗಾರರಿಗೂ, ಅದರ ಮಾಲಕರಿಗೂ ವಿವಾದವುಂಟಾಗಿ ಕೆಲಸಗಾರರು ಶಾಂತರೀತಿಯಿಂದ ಸತ್ಯಾಗ್ರಹಕ್ಕೆ ಆರಂಭಿಸಿದ್ದಾರೆ. ಇದರಲ್ಲಿ ಹೆಂಗಸರೂ ಭಾಗವಹಿಸಲಿರುವರು.

ಇದೇ ಕಳೆದ ಜುಲೈ ತಾ. ೨೫ರ ವರೆಗೆ ಗವರ್ನರರ ಯುದ್ಧ ನಿಧಿಗೆ ೭॥ ಲಕ್ಷಕ್ಕೂ ಮಿಕ್ಕಿದ ವಂತಿಗೆಯ ಸಂಗ್ರಹವಾಗಿದೆ. ಈ ನಿಧಿಯಿಂದ ೧ ಲಕ್ಷ ರೂಪಾಯಿಗಳನ್ನು ಒಂದು ಬಾಂಬರನ್ನು ಕೊಳ್ಳಲು ವಿಮಾನ ಮಂತ್ರಿಗಳಿಗೆ ಕಳುಹಿಸಿಕೊಟ್ಟು ಆ ಬಾಂಬರಿಗೆ "ಮದ್ರಾಸ್" ಎಂಬ ಹೆಸರಿಡಬೇಕಾಗಿ ಅಪೇಕ್ಷಿಸಲಾಗಿದೆ.

ಅರ್ಧ ರೂಪಾಯಿಗಳ ನಾಣ್ಯಗಳಲ್ಲಿನ ಬೆಳ್ಳಿಯ ಪ್ರಮಾಣವನ್ನು ಕಡಿಮೆ ಮಾಡಿ ಆ ನಾಣ್ಯಗಳನ್ನು ಹೊರಡಿಸಲು ಇಂಡಿಯಾ ಸರಕಾರವು ನಿರ್ಧರಿಸಿದೆ ಇತ್ತ ರೂಪಾಯಿ ನೋಟುಗಳೂ ಚಲಾವಣೆಗೆ ಬಂದಿವೆ.

ಶಾಂತಿನಿಕೇತನಕ್ಕೆ "ಟ್ರಂಕ್ ಟೆಲಿಫೋನಿನ" ಕನೆಕ್ಶನ್ ಈಗ ತಾನೇ ಕೊಡಲಾಗಿದೆ. ಕವಿ ರವೀಂದ್ರರು ಅಂದು, ಅಲ್ಲಿಂದ ಹೊಸ ಡಿಲ್ಲಿಯಲ್ಲಿರುವ 'ಪೋಸ್ಟ್ಸ ಮತ್ತು ಟೆಲಿಗ್ರಾಫ್' ಶಾಖೆಗಳ ಡೈರೆಕ್ಟರ್ ಜನರಲರಾದ ಸರ್. ಜಿ. ವಿ. ಬೇವೂರರೊಡನೆ ಅಭಿನಂದನಗಳನ್ನು ಬದಲಾಯಿಸಿಕೊಂಡಿದ್ದರು.

ಭಾಗಲ್ಪುರದ ಪ್ರಾಂತದಲ್ಲಿ ಒಬ್ಬ ಪೋಸ್ಟ್ ಮ್ಯಾನ್ "ಟೆಲಿಗ್ರಾಫ್ ಮನಿಯಾರ್ಡರು"ಗಳ ಸಹಿತ ಒಂದು ಹಳ್ಳಿಗೆ ದೋಣಿಯಲ್ಲಿ ಹೋಗುತ್ತಿದ್ದಾಗ ದೋಣಿ ಮುಳುಗಿ, ಹಣ, ಕಾಗದ ಪತ್ರಗಳೆಲ್ಲ ನೀರು ಪಾಲಾದುವು.

ಸಿರುವಾಲೈ ಜಮೀನ್ದಾರರಾದ ರಾವ್ ಬಹದೂರ್ ಪಿ. ಸಿ. ಮುತ್ತು ಚೆಟ್ಟಿಯಾರರನ್ನು ಯಾರೋ ತಿವಿದ ಫಲವಾಗಿ ಅವರು ಮೃತರಾಗಿರುವರು. ಇವರು ಹಿಂದೆ ಶಾಸನ ಸಭೆಯ ಸದಸ್ಯರಾಗಿದ್ದರು. ಇವರು ಮಧುರೆ ಪ್ರಾಂತದವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪೂನೆಯಲ್ಲಿ ಡಿಲ್ಲಿಯ ನಿರ್ಧಾರವನ್ನೇ ಮಂಜೂರು ಮಾಡಿದೆಯಲ್ಲದೆ, ಸಮಗ್ರ ಭಾರತ ಕಾಂಗ್ರೆಸ್ ಕಮಿಟಿಯ ಪರ್ಯಾಲೋಚನೆಗಾಗಿ ೨ ಠರಾವುಗಳನ್ನೂ ಇರಿಸಿದೆ. ಸ್ವಾತಂತ್ರ್ಯದ ಕಾದಾಟವು ಅಹಿಂಸಾತ್ಮಕವಾಗಿರಬೇಕು; ರಾಷ್ಟ್ರೀಯ ರಕ್ಷಣೆ ಹಾಗಿರಲು ಸಾಧ್ಯವಿಲ್ಲೆಂಬುದು ಒಂದು ಠರಾವು; ಕಾಂಗ್ರೆಸ್ ವಾಲಂಟಿಯರ್ ದಳಗಳೆಲ್ಲಾ ಅಹಿಂಸೆಯ ತತ್ವವನ್ನೇ ಅಕ್ಷರಶಃ ಪಾಲಿಸಬೇಕೆಂಬುದು ಇನ್ನೊಂದು ಠರಾವು.

ವರ್ಕಿಂಗ್ ಕಮಿಟಿ ಶಿಸ್ತುಭಂಗದ ಕಾರಣದಿಂದ ಪಂಡಿತ ಜೆ. ಮಿಶ್ರ ಹಾಗೂ ಶ್ರೀ. ಜೆ. ಮಂಗರಾಜ್ಜು, ಕಾಂಗ್ರೆಸ್ ಟಕೆಟಿನಿಂದ ಪಡೆದ ಶಾಸನ ಸಭಾ ಸ್ಥಾನಗಳಿಗೆ ರಾಜಿ ಕೊಡುವಂತೆ ಅಪ್ಪಣೆ ಮಾಡಿ ೩ ವರ್ಷದ ಮಟ್ಟಿಗೆ ಅವರು ಕಾಂಗ್ರೆಸ್ ಮೆಂಬರರಾಗಕೂಡದೆಂದೂ ವಿಧಿಸಿದೆ.

ಯುದ್ಧ ಕಾರ್ಯಗಳಿಗಾಗಿ ಬಲವಂತದಿಂದ ವಂತಿಗೆ ವಸೂಲುಮಾಡುವುದು ಸರಿಯಲ್ಲವೆಂದು ಕಾಂ. ವ. ಕಮಿಟಿಯು ಒಂದು ಠರಾವು ಮಾಡಿದೆ.

ಬರ್ಮಾ ಡಿಫೆನ್ಸ್ ಕೌನ್ಸಿಲಿನಲ್ಲಿ ಇನ್ನಿಬ್ಬರು ಮಂತ್ರಿಗಳನ್ನು ಸೇರಿಸಿಕೊಳ್ಳಲಾಗಿದೆ. ಹೀಗೆ ಆ ಕೌನ್ಸಿಲಿನಲ್ಲಿ ಬರ್ಮಿಯರ ಸದಸ್ಯರೇ ಬಹು ಸಂಖ್ಯಾಕರಾಗಿದ್ದಾರೆ.

ಪೂನೆಯಲ್ಲಿ ಸಮಗ್ರ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗ್ ರಾಷ್ಟ್ರಪತಿಗಳಾದ ಆಜಾದರ ಅಧ್ಯಕ್ಷತೆಯಲ್ಲಿ ಆರಂಭವಾಗಿ, ವಿವಿಧ ವಿಚಾರ ವಿಮರ್ಶೆಗಳ ಅವರ ಹೇಳಿಕೆಯೂ ಮುಗಿದಿದೆ. ಅಹಿಂಸಾತತ್ವವು, ಗಾಂಧಿಜಿಯವರ ಹೇಳಿಕೆಯಂತೆ, ಅಷ್ಟು ದೂರವೂ ಹೋಗಲಾರದೆಂಬ ಪಂಡಿತ ನೆಹರೂಗಳ ಠರಾವು ಬಹುಮತದಿಂದ ಮಂಜೂರಾಗಿದೆ

ವೈಸರಾಯರು ಪತ್ನೀ ಪರಿವಾರ ಸಹಿತ ಮದ್ರಾಸಿಗೆ ದಯೆಮಾಡಿಸಿ ಅಲ್ಲಿನ ಗವರ್ನರರೇ ಮೊದಲಾದವರಿಂದ ಸುಸ್ವಾಗತ ಪಡೆದರು.

ಮದ್ರಾಸ್ ಗವರ್ನರರ ಯುದ್ಧನಿಧಿಯಿಂದ, ರಾಯಲ್ ವಿಮಾನ ಬಲಕ್ಕೊಂದು ವಿಮಾನಗಳ ತುಕ್ಕಡಿಯನ್ನು ಒದಗಿಸಲು ನಿರ್ಧರಿಸಿ, ಅದಕ್ಕಾಗಿ ೩॥ ಲಕ್ಷ ರೂಪಾಯಿಗಳನ್ನಾಗಲೇ ಲಂಡನಿನ ವಿಮಾನ ಮಂತ್ರಿಗಳಿಗೆ ರವಾನಿಸಲಾಗಿದೆ. ಈ ತುಕ್ಕಡಿಯ ನಾಮಕರಣ "ಮದ್ರಾಸ್". ಹಾಗೇ ಅದೇ ಹೆಸರಿನ ಒಂದು ಫೈಟರನ್ನು ಕೊಳ್ಳಲೂ ೧॥ ಲಕ್ಷ ರೂಪಾಯಿಗಳನ್ನೂ ಅತ್ತ ರವಾನಿಸಲಾಗಿದೆ.

ಇಂಡಿಯಾ ಡಿಫೆನ್ಸ್ ಕಾನೂನಿನ ಮೇರೆಗೆ ಸಂಯುಕ್ತ ಪ್ರಾಂತದಲ್ಲಿ, ಆ ಪ್ರಾಂತಿಕ ಕಾ. ಕಮಿಟಿಯ ಸದಸ್ಯರಾದ ಪಂಡಿತ ರಾಮಚಂದರ್ ಶರ್ಮರನ್ನೂ, ಪಾಟ್ನಾದಲ್ಲಿ ಬಿಹಾರ್ ಫಾರ್ವರ್ಡ್ ಬ್ಲಾಕ್ ಸದಸ್ಯ ಶ್ರೀ. ಸತ್ಯನಾರಾಯಣ ಸಿಂಹರನ್ನೂ, ಕಲ್ಕತ್ತೆಯಲ್ಲಿ ಬಂಗಾಳ ಪ್ರಾಂ. ಕಾಂ. ಕಮಿಟಿಯ ಉಪಾಧ್ಯಕ್ಷ ಶ್ರೀ. ವಸಂತ ಕುಮಾರ ಮುಜುಂದಾರರನ್ನೂ ಕಲ್ಲಿಕೋಟೆಯಲ್ಲಿ ಸಮಗ್ರಭಾರತ ಕಾಂ. ಕಮಿಟಿಯ ಮೆಂಬರೂ, ಕೇರಳ ಪ್ರಾಂತಿಕ ಕಾಂ. ಕಮಿಟಿಯ ಸೆಕ್ರಟರಿಗಳೂ ಆಗಿರುವ ಶ್ರೀ. ಕೆ. ಪಿ. ಗೋಪಾಲರನ್ನೂ ಕೈದುಮಾಡಲಾಗಿದೆ.

ಇಂಡಿಯಾದಲ್ಲಿ ಸಾಕಷ್ಟು ಪೆಟ್ರೋಲ್ ಮತ್ತು ಚಿಮಣಿ ಎಣ್ಣೆಯ ಸಂಗ್ರಹವಿರುವುದರಿಂದ ಅದರ ಉಪಯೋಗದ ಪ್ರಮಾಣದಲ್ಲಿ ಕಡಿಮೆ ಮಾಡುವ ಅಗತ್ಯವಿಲ್ಲವೆಂದು ಹೇಳಲಾಗಿದೆ.

ನೋಟೀಸು

ಜ. ಕ. ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. 60 / 1940

1. A. ತಿಮ್ಮಪ್ಪಯ್ಯ
2. ಸುಬ್ಬರಾವ್
3. ಶಂಕರ
4. ವೆಂಕಟರಾವ್ } ವೈನರರು, ಹಿತಚಿಂತಕಳು ಸೀತಮ್ಮ
5. ಮೋಹನ
6. ಸೀತಮ್ಮ —ಅರ್ಜಿದಾರರು

ಮತ್ತು

ಕಾತಿ ಅಮ್ಮ —ರೆಸ್ಪೊಂಡೆಂಟಳು

ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ:—

ಮೇಲ್ಕಂಡ ಅರ್ಜಿದಾರರು, 1ರಿಂದ 5ನೇ ವರೆಗಿನವರ ತಂದೆ ವ 6ನೇಯವಳ ಗಂಡ ಹಾಲಿ ಮದ್ರಾಸಿನಲ್ಲಿ ಮೃತಪಟ್ಟ A. ಕೃಷ್ಣಯ್ಯನವರ ಬಾಬ್ತು ಒರಿಯಂಟಲ್ ಇನ್ಸೂರೆನ್ಸ್ ಕಂಪೆನಿಯ ಮತ್ತು ರಿಸರ್ವ್ ಬೇಂಕಿನ ಶೇರಿನ ಬಾಬ್ತು ಕೂಡ ಹಣ ವಸೂಲಿ ಕುರಿತು 1ನೇ ಅರ್ಜಿದಾರನ ಹೆಸರಿಗೆ ಒಂದು ಸರ್ಟಿಫಿಕೇಟು ಕೊಡಿಸಬೇಕೆಂತ ವಗೈರೆ ಕೊಟ್ಟ ಮೇಲಿನ ಅರ್ಜಿಯು ತಾರೀಕು 12–8–1940ಕ್ಕೆ ತನಿಕೆ ಬಗ್ಗೆ ಇಟ್ಟಿದೆ. ಆ ಕುರಿತು ಆಕ್ಷೇಪಣೆ ಉಳ್ಳವರು ಸದರಿ ದಿವಸ ಹಗಲು 10–30 ಗಂಟೆಗೆ ಮೇಲಿನ ಕೋರ್ಟ್ ಮುಂದೆ ಖುದ್ದು ಯಾ ವಕೀಲ್ ದ್ವಾರಾ ಹಾಜರಾಗುವರೆ ತಪ್ಪಿದರೆ ಕೋರ್ಟನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲ್ಪಡುವುದು.

S. Narsapaya,
Vakil for Petitioners.
Mangalore, 26—7—'40.

ಅಲ್ಪ ಮೊಬಲಗುಗಳನ್ನು ನಾಣ್ಯ ಯಾ ನೋಟುಗಳ ರೂಪದಲ್ಲಿ ಇನ್ಯಾರು ಮಾಡದ ಲಕೋಟೆಗಳಲ್ಲಿ ಕಳುಹುವುದು ನಿರ್ಬಂಧಿತ ಮಾತ್ರವಲ್ಲ, ಅಪಾಯಕಾರಿ. ನಿಷ್ಪ ಹೊಂದಲು ಕಾದಿರಬೇಡಿ; ಜಾಣ್ಮೆಯುಳ್ಳವರಾಗಿ ನಿಮ್ಮ ಲೆಕ್ಕಾಚಾರವನ್ನು ಸುಭದ್ರ ಮತ್ತು ಅತೀ ಆಗ್ಗ ವಿಧಾನವಾದ ಇಂಡಿಯನ್ ಪೋಸ್ಟಲ್ ಆರ್ಡರುಗಳ ಮೂಲಕ ತೀರ್ಮಾನಿಸಿಕೊಳ್ಳಿ. ವಿವರಗಳನ್ನು ನಿಮ್ಮ ಪೋಸ್ಟಾಫೀಸಿನಲ್ಲಿ ವಿಚಾರಿಸಿ.

USE INDIAN
POSTAL ORDERS
NO 5

ನೋಟೀಸು

ಜ. ಕ. ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. 59 / 1940

ಮಹಾಲಕ್ಷ್ಮಿ —ಅರ್ಜಿದಾರಳು

ಮತ್ತು

1. ತಿಮ್ಮಪ್ಪಯ್ಯ } ವೈನರರು, ಗಾರ್ಡಿಯನ್
2. ಮಹಾಬಲ } A. ತಿಮ್ಮಪ್ಪಯ್ಯ
3. ಕಾತಿ ಅಮ್ಮ —ರೆಸ್ಪೊಂಡೆಂಟರು

ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ:—

ಮೇಲ್ಕಂಡ ಅರ್ಜಿದಾರಳು, ಮಂಗಳೂರು ತಾಲೂಕು ಅಡೂರು ಗ್ರಾಮದಲ್ಲಿದ್ದು ಹಾಲಿ ಮದ್ರಾಸಿನಲ್ಲಿ ಮೃತಪಟ್ಟ ತನ್ನ ಗಂಡ ಅನಂತ ರಾಮಪ್ಪಯ್ಯನ ಬಾಬ್ತು ಒರಿಯಂಟಲ್ ಗವರ್ನಮೆಂಟ್ ಇನ್ಶೂರೆನ್ಸ್ ಕಂಪೆನಿ ನಂ. 149629 ನೇ ಪೊಲಿಸಿ ಪ್ರಕಾರ ಬರತಕ್ಕ ಹಣ ವಸೂಲಿ ಕುರಿತು ಒಂದು ಸಕ್ಸೆಶನ್ ಸರ್ಟಿಫಿಕೇಟು ಅರ್ಜಿದಾರಳ ಹೆಸರಿಗೆ ಕೊಡಬೇಕಾಗಿ ವಗೈರೆ ಕೊಟ್ಟ ಅರ್ಜಿಯು ತಾ. 12–8–'40ಕ್ಕೆ ತನಿಕೆ ಬಗ್ಗೆ ಇಟ್ಟಿದೆ. ಆ ಕುರಿತು ಆಕ್ಷೇಪಣೆ ಉಳ್ಳವರು ಸದರಿ ದಿವಸ ಹಗಲು 10–30 ಗಂಟೆಗೆ ಮೇಲಿನ ಕೋರ್ಟ್ ಮುಂದೆ ಖುದ್ದು ಯಾ ವಕೀಲ್ ದ್ವಾರಾ ಹಾಜರಾಗುವರೆ ತಪ್ಪಿದರೆ ಕೋರ್ಟನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲ್ಪಡುವುದು.

S. Narsapaya,
Vakil for Petitioner.
Mangalore, 26—7—1940.

NOTICE

In the Court of the District Judge of South Kanara.

O. P. No. 72 / 1940

In the matter of the securities of the deceased K. Sunder Rao.

K. Narayana Rao—as manager of joint Hindu family —PETITIONER.

The above named Petitioner has made application to this Court under Section 372 Part X of the Indian Succession Act for the grant of a Succession Certificate authorising him to get the shares of the Coimbatore Spinning and Weaving Co., Ltd., standing in the name of the deceased K. Sunder Rao transferred to his name and for collection of the dividends in respect of those shares and the said application stands posted to 31—8—1940 at 10-30 A. M. for final disposal.

It is hereby given notice that persons interested in the above matter may appear either in person or by duly instructed pleader and oppose the said application and failing which the said application will be heard and determined ex-parte.

G. Somasheker Rao,
Vakil for Petitioner
Mangalore, 29—7—1940.

ಆಯುರ್ವೇದ ಸಾರ

ಅಮೂಲ್ಯ ಕನ್ನಡ ವೈದ್ಯ ಗ್ರಂಥ

ಪಂಡಿತರು ಅಗತ್ಯವಾಗಿ ತಿಳಿದಿರಬೇಕಾದ ತತ್ವಗಳನ್ನೆಲ್ಲಾ ಬಹು ಗ್ರಂಥಗಳಿಂದ ಸಂಗ್ರಹಿಸಿ, ಬೇಕಾದಲ್ಲಿ ಪಾಶ್ಚಾತ್ಯ ಡಾಕ್ಟರರ ಮತ ಸಹ, ವಿರಳವಾಗಿ ವರ್ಣಿಸಿರುವ ಕನ್ನಡ ಗ್ರಂಥ ಇದು ಒಂದೇ. ಬಹು ಪ್ರಯೋಜನಕಾರಿಯಾಗಿ ಕಂಡ ಅನೇಕ ಹೊಸ ಔಷಧ ಯೋಗಗಳು ಮತ್ತು ಸ್ವತಂತ್ರವಾಗಿ ಚಿಕಿತ್ಸೆ ಮಾಡುವದಕ್ಕೆ ಬೇಕಾದ ಬಹಳ ಅನುಭವಗಳು ಇದರಲ್ಲಿ ಇವೆ. 'ಸ್ನಾಯುಮಂಡಲದ ರಚನೆ ಮತ್ತು ಅಧಿಕಾರ, 'ಪ್ರತಿ ಅಧ್ಯಾಯದಲ್ಲಿ 'ದುಷ್ಪಫಲ ಚಿಕಿತ್ಸೆ', 'ಪೃಥಗ್ಯೋಗೋಕ್ತೌಷಧಗಳು', 'ಪ್ರಕರಣಾನ್ತ ಟಿಪ್ಪಣಿ', ಇವೇ ಮೊದಲಾದವು ದ್ವಿತೀಯ ಭಾಗದ ವಿಶೇಷಗಳು. ೬೦೦ ಪ್ರತಿಗಳಷ್ಟೇ ಮುದ್ರಿತವಾಗಿರುವುದರಿಂದ ವಿಳಂಬದಿಂದ ಪ್ರತಿ ದೊರೆಯದೆ ಹೋಗುವ ಸಂಭವ ಇದೆ. ಪ್ರತಿ ಬೇಕಾದವರು ತ್ವರೆಯಾಗಿ ಕೆಳಗಣ ವಿಳಾಸಕ್ಕೆ ಬರಕೊಳ್ಳಬೇಕು. ಎರಡು ಅಥವಾ ಹೆಚ್ಚು ಪ್ರತಿಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ರೂಪಾಯಿಗೆ ಒಂದಾಣೆಯಿಂದ ಎರಡಾಣೆ ವರೆಗೆ ಯುಕ್ತಕಂಡ ಡಿಸ್ಕೌಂಟು ಕೊಡಲಾಗುವುದು.

ಪ್ರಥಮ ಭಾಗ (೬೦೦ ಪುಟ) ರೂ. 6–8–0.
ದ್ವಿತೀಯ ಭಾಗ (೬೪೦ ಪುಟ) ರೂ. 6–8–0.
(ಟಪ್ಪಾಲು ಹಾಷಲು ಬೇರೆ)

ವಿಳಾಸ:— **ಪಿ. ರಾಮಕೃಷ್ಣಯ್ಯ,** ಬಿ.ಎ.,
(ನಿವೃತ್ತ) ಜಿಲ್ಲಾ ರಿಜಿಸ್ಟ್ರಾರ್,
ಕಂಬಳ, ಪೋಸ್ಟ್ ಮಂಗಳೂರು.

ಮಂಗಳೂರು

ತಿಲಕ ದಿನಾಚರಣೆ

ಸ್ಥಳೀಯ ಹಿಂದೂ ಮಹಾ ಸಭೆಯ ಆಶ್ರಯದಲ್ಲಿ ಆಗೋಸ್ತು ತಾ. ೧ರಂದು ಸಂಜೆ ೫ಕ್ಕೆ, ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ, ಲೋಕ ಮಾನ್ಯ ಬಾಲಗಂಗಾಧರ ತಿಲಕರವರ ಪುಣ್ಯ ತಿಥಿಯು ಆಚರಿಸಲ್ಪಡಲಿದೆ. ಸರ್ವರಿಗೂ ಸ್ವಾಗತವಿದೆ.

ಶೋಚನೀಯ ನಿಧನ

ಮಾಜಿ ಮುನಿಸಿಪಲ್ ಚೆಯರ್‌ಮ್ಯಾನರಾದ ರಾವ್ ಬಹದೂರ್ ನೆಲ್ಲಿಕ್ಕಾ ವೆಂಕಟರಾಯರ ಪತ್ನಿಯವರಾದ ಶ್ರೀಮತಿ ಸುಂದರಮ್ಮನವರು ಕಳೆದ ಶನಿವಾರ ಅಪರಾಹ್ನ ತಮ್ಮ ೫ಳನೆ ವಯಸ್ಸಿನಲ್ಲಿ ದಿವಂಗತರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತಿದೆ. ಅವರು ಕೊಂಚ ಕಾಲದಿಂದ ಅಸೌಖ್ಯದಲ್ಲಿದ್ದರೂ ಈಚಿಗೆ ಅವರು ಕೆಲವು ಮಟ್ಟಿಗೆ ಆರೋಗ್ಯ ಲಾಭವನ್ನು ಪಡೆದಂತೆ ತೋರಿಬಂದುದು, ಕಳೆದ ವಾರದ ಮಧ್ಯದಲ್ಲಿ ಅಕಸ್ಮಾತ್ ಹೆಚ್ಚಾಗಿ, ಯಾವ ಸಮರ್ಥ ಡಾಕ್ಟರುಗಳ ಚಿಕಿತ್ಸೆಯೂ ಫಲವಾಗದೆ, ಅವರ ಪ್ರಾಣಕ್ಕೇ ಸಂಚುಗಾರವಾಯಿತು!

ಶ್ರೀಮತಿಯವರು ಮಂಗಳೂರಿನವರಿಗೆಲ್ಲ ಸುಪರಿಚಿತರಾಗಿಯೇ ಇದ್ದರು. ಅವರು, ಮಹಿಳಾ ಸಮಾಜದ ಮೇಲ್ಮೈಗಾಗಿ ಹಲವು ರೀತಿಯಿಂದ ದುಡಿದ ಮಂಗಳೂರಿನ ಕೆಲವೇ ಮಂದಿ ಮಹಿಳೆಯರಲ್ಲಿ ಒಬ್ಬ ಉತ್ಸಾಹೀ ಕೆಲಸಗಾರರಾಗಿದ್ದರು. ಇವರ ನಿಧನದಿಂದ ಮಹಿಳಾ ಸಮಾಜವು ತನ್ನ ಬಲಗೈಯನ್ನೇ ಕಳೆದುಕೊಂಡಾಯಿತು.

ಶ್ರೀಮತಿಯವರು ೧೦ ವರ್ಷ ಸ್ಥಳೀಯ "ಲೇಡೀಸ್ ಕ್ಲಬ್" ಅಧ್ಯಕ್ಷರಾಗಿಯೂ "ಮಹಿಳಾ ಸಭೆ"ಯ ಸದಸ್ಯರಾಗಿಯೂ ಇದ್ದು ಆ ಕಾರ್ಯ ಭಾರವನ್ನು ಚೆನ್ನಾಗಿ ನಿರ್ವಹಿಸಿದುದಲ್ಲದೆ, ಒನರೆರಿ ಮ್ಯಾಜಿಸ್ಟ್ರೇಟರಾಗಿಯೂ ಇವರು ಗೌರವಾದರಗಳನ್ನು ಸಂಪಾದಿಸಿದವರಾಗಿದ್ದರು.

ಶ್ರೀಮತಿಯವರು ಕನ್ನಡ ವಾಙ್ಮಯೆ ಸೇವೆಯನ್ನೂ ತಮ್ಮ ಕೈಲಾದ ಮಟ್ಟಿಗೆ ಮಾಡಿ, ಕನ್ನಡ ನಾಡಿಗೆ ಮಹೋಪಕಾರ ಮಾಡಿದ್ದಾರೆ. ಸ್ತ್ರೀ ಲೇಖಕಿಯರು ವಿರಳವಾಗಿರುವ ಕರ್ನಾಟಕದಲ್ಲಿ ಇವರು ನಮ್ಮ ಮಹಿಳೆಯರಿಗೊಂದು ಉತ್ಕೃಷ್ಟ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಇವರು ಹಲವು ದೇವರ ನಾಮಗಳನ್ನು ರಚಿಸಿದವರಲ್ಲದೆ, "ಕಂಠೀರವ"ನಿಗಾಗಿ ಹಲವು ಉತ್ತಮ ಲೇಖನಗಳನ್ನೂ ಆಗಾಗ ಬರೆಯುತ್ತಿದ್ದರು. ಇವರು "ಹಳ್ಳಿಯ ರಾಣಿ" ಎಂಬ ಉತ್ತಮ ಗ್ರಂಥವನ್ನೂ ಬರೆದು ಪ್ರಸಿದ್ಧರಾಗಿದ್ದಾರೆ. ವಿದ್ಯಾ ಇಲಾಖೆಯವರು ಈ ಗ್ರಂಥವನ್ನು ಕೆಲ ಪರೀಕ್ಷೆಗಳಿಗೆ ಓದಬೇಕಾದ ಪುಸ್ತಕವನ್ನಾಗಿ ಏರ್ಪಡಿಸಿದ ಇದೊಂದು ಸಂಗತಿಯಿಂದಲೇ ಆ ಗ್ರಂಥದ ಹಾಗೂ ಲೇಖಕಿಯರ ಯೋಗ್ಯತಾ ವಿಶೇಷವನ್ನು ತಿಳಿಯಬಹುದಾಗಿದೆ. ಸಮಯಾನುಕೂಲವು ಚೆನ್ನಾಗಿದ್ದ ಪಕ್ಷದಲ್ಲಿ ಇನ್ನೂ ಹಲವು ಉದ್ಗ್ರಂಥಗಳು ಇವರ ಪ್ರತಿಭಾಯುಕ್ತವಾದ ಲೇಖನಿಯಿಂದ ಹೊರಬೀಳುತ್ತಿದ್ದಿತೆಂಬುದು ನಿರ್ವಿವಾದ. ಕೀರ್ತಿಪ್ರತಿಷ್ಠೆಗಳಿಗಾಗಿ ಆಶೆಪಡದೆ ಮರೆಯಲ್ಲಿದ್ದು ಗುಪ್ತವಾಗಿ ಸಾಹಿತ್ಯ ಸೇವೆಯನ್ನು ಸಲ್ಲಿಸಿದ ಶ್ರೀಮತಿಯವರಿಗೆ, ಸರಿಯಾದ ಸಂದರ್ಭಗಳನ್ನು ಒದಗಿಸಿಕೊಟ್ಟಿದ್ದರೆ, ದಕ್ಷಿಣ ಕನ್ನಡದ ಮಹಿಳಾ ಲೇಖಕಿಯರಾದ ಇವರು, "ಸಾಣೆ ಹಿಡಿದ ವಜ್ರ"ದಂತೆ ಎಲ್ಲೆಲ್ಲೂ ತಮ್ಮ ಉಜ್ವಲ ಪ್ರಭೆಯನ್ನು ಇಷ್ಟರೊಳಗೆ ಸುನ್ಯಕ್ತವಾಗಿ ಬೀರುತ್ತಿದ್ದರೆಂಬುದೂ ನಿರ್ವಿವಾದ

ಇವರ ನಿಧನ ವಿಷಯದಲ್ಲಿ ನಮ್ಮ ಅನುತಾಪವನ್ನು ಸೂಚಿಸಿ, ಅವರ ಪವಿತ್ರ ಆತ್ಮಕ್ಕೆ ನಿತ್ಯ ಶಾಂತಿಯನ್ನು ಬಯಸುವುದರೊಂದಿಗೇ ಅಪಾರ ಶೋಕಕ್ಕೀಡಾದ ರಾ ಬಿ ವೆಂಕಟರಾವ್ ಹಾಗೂ ಅವರ ಕುಟುಂಬವನ್ನು ಪರಮಾತ್ಮನೇ ಸಂತೈಸಲೆಂದೂ ಹಾರೈಕೆ!

ವ್ಯಾಯಾಮ ಪ್ರದರ್ಶನ

ಕಳೆದ ಆದಿತ್ಯವಾರ ಸ್ಥಳೀಯ ಮಿಶನ್ ಹೈಸ್ಕೂಲಿನಲ್ಲಿ ಉಸ್ತಾದ್ ಅಬ್ದುಲ್ ಹಖ್ ಮತ್ತು ಸ್ವಾಸ್ಥ್ಯ ಸಂಘದ ಸದಸ್ಯರುಗಳ ವ್ಯಾಯಾಮ, ಲಾಠಿ ಪ್ರದರ್ಶನವೊಂದು ಸ್ವಾಸ್ಥ್ಯ ಸಂಘದ ಸಹಾಯಾರ್ಥವಾಗಿ ಜರುಗಿತೆಂದು ತಿಳಿದುಬರುತ್ತದೆ.

ನೃತ್ಯಕುಂಡಲು

ಜಗತ್ಪ್ರಖ್ಯಾತ ಭರತನಾಟ್ಯವಿಶಾರದರಾದ ಶ್ರೀಮತಿ ಮೇನಕಾ ಮತ್ತು ಶ್ರೀ. ರಾಮನಾರಾಯಣ ಹಾಗೂ ಇವರ ಮಂಡಲದವರು ಮಂಗಳೂರಿನಲ್ಲಿ ಇದೇ ತಾ. ೩೦ ಮತ್ತು ೩೧ರಂದು ತಮ್ಮ ಕಲಾಮಯ ನೃತ್ಯಗಳ ಪ್ರದರ್ಶನವನ್ನೀಯಲಿರುವರು.

ವಿದೇಶ ವಾರ್ತೆ

ಪ್ಯಾಲಸ್ತೈನಿನ ಮೇಲೆ ಇಟೆಲಿಯ ಕಣ್ಣು

ಪ್ಯಾಲಸ್ತೈನನ್ನು ಇಟೆಲಿ ಸಾಮ್ರಾಜ್ಯದೊಳಗೆ ಸೇರಿಸಿಕೊಳ್ಳುವುದೂ ಇಟೆಲಿಯ ಯುದ್ಧೋದ್ದೇಶಗಳಲ್ಲಿ ಒಂದೆಂದು, ಈಗ ಒಂದು ಹೊಸ ಜಳವಳದ ಪ್ರಚಾರಕಾರ್ಯ ನಡೆಯುತ್ತಿದೆ. "ಕೆಥೊಲಿಕ್ ಪವಿತ್ರ ಸ್ಥಾನ"ವನ್ನು ಕೇಳುವಂತೆ ಇಟೆಲಿ ವೆಟಕಾನಿಗೆ ಗಾಳಿ ಹಾಕುತ್ತಿದೆ. ಅಲ್ಬೇನಿಯದ ಆಡಳಿತದಂತೆ ಇಲ್ಲಿನ ರಾಜ್ಯಭಾರ, ಯಹೂದಿಗಳನ್ನು ಇಲ್ಲಿಂದ ಹೊರ ಹಾಕಬೇಕು ಎಂದು ಇಟೆಲಿಯ ಉದ್ದೇಶ.

ಬ್ರಿಟನಿನಲ್ಲಿ ಫೆಶಿಯಿಸ್ಟರ ಕೈದು

೫೦೦ ಮಂದಿ (ಬ್ರಿಟಿಷ್ ಯೂನಿಯನಿಗೆ ಸೇರಿದ) ಫೆಶಿಯಿಸ್ಟರನ್ನು ಬ್ರಿಟನಿನಲ್ಲಿ ನಿರ್ಬಂಧ ವಾಸದಲ್ಲಿ ಇರಿಸಲಾಗಿದೆ ಎಂದು ತಿಳಿದು ಬರುತ್ತಿದೆ.

ತುರ್ಕಿ—ಜರ್ಮನಿ

ತುರ್ಕಿ ಜರ್ಮನಿಯೊಳಗೆ ವ್ಯಾಪಾರದ ಕರಾರಾಗಿ ಎರಡು ದೇಶಗಳೊಳಗೆ ೨೧ ಮಿಲ್ಯ ಟರ್ಕಿ ಪೌಂಡುಗಳು ಬಾಳುವ ಸಾಮಗ್ರಿಗಳು ಅದಲುಬದಲಾಗಬೇಕೆಂದಿದೆ. ಇದರಿಂದ ತುರ್ಕಿ–ಬ್ರಿಟನಿನ ಬಾಂಧವ್ಯಕ್ಕೇನೂ ಪೆಟ್ಟಲ್ಲ.

ನೋಟೀಸು

ದಕ್ಷಿಣ ಕನ್ನಡಾ ಉಡುಪಿ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 491/1938 R. I A. 333/1940

ಕಲ್ಯಾಣಪುರ ವೆಂಕಟ್ರಮಣ ದೇವರ ಭಂಡಾರದ ಕಡೆಯಿಂದ ಮೊಕ್ತೇಸರರು—1. ಕೆ. ಪದ್ಮನಾಭ ಬಾಳಿಗ 2. ರಾಮಚಂದ್ರ ಬಾಳಿಗ 3. ಕೃಷ್ಣಾಯ ಪಡಿಯಾರ

—ವಾದಿರು–ಅರ್ಜಿದಾರರು.

ಮತ್ತು

1. ಐತ ಮರಕಾಲ 2. ಗಂಗೆ ಹೆಂಗ್ಸು 3 ತುಕ್ರಿ ಹೆಂಗ್ಸು 4. ಕಾಡ್ಯ ಮರಕಾಲ 5. ದೇವ ಮರಕಾಲ (ರಂಗು ಹೆಂಗ್ಸಿನ ಮಕ್ಕಳು)—ಉಡುಪಿ ತಾಲೂಕು ಪಡುತೊನ್ಸೆ ಗ್ರಾಮದ ಕಲ್ಯಾಣಪುರ

—ಪ್ರತಿವಾದಿರು–ಎದ್ರಿರು.

ಇವರೊಳಗೆ

ಸದರಿ ವ್ಯಾಜ್ಯದ 1, 2ನೇ ಪ್ರತಿವಾದೀರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರಿ ವ್ಯಾಜ್ಯದಲ್ಲಿ ಕೊಡೋಣಾದ ಪ್ರಿಲಿಮಿನೆರಿ ವ ಫ್ಯಾನಲ್ ಡಿಕ್ರಿಗಳ ಪ್ರಕಾರ ವಾದಿರಿಗೆ ಬರತಕ್ಕ ಐವೇಜಿನ ಬಗ್ಗೆ ವಾದಿರು ನಡೆಸಿದ್ದ ಅಮಲ್‌ಜ್ಯಾರಿಯಲ್ಲಿ ಸದರಿ ಪ್ರಿಲಿಮಿನೆರಿ ಡಿಕ್ರಿಯಿಂದ ಕಾಣುವ ಸ್ಥಿರಾಸ್ತಿ ಮಾರಾಟದಿಂದ ಹುಟ್ಟಿ ಬಂದ ಐವೇಜು ಕಳೆದು ಸದರಿ ಅರ್ಜಿ ಸಂಗಡ ಹಾಜರು ಪಡಿಸಿದ ಶೆಡ್ಯೂಲಿನಲ್ಲಿ ವಿವರಿಸಿದ ಪ್ರಕಾರ ಬರತಕ್ಕ ಬಾಕಿ ಐವೇಜಿಗೆ ಪ್ರತಿವಾದಿರ ಮೇಲೂ ಅವರ ಕುಟುಂಬದ ಸೊತ್ತುಗಳ ಮೇಲೂ ಪರ್ಸನಲ್ ಡಿಕ್ರಿ ಅಪೇಕ್ಷಿಸಿ ವಾದಿರು ಕೊಟ್ಟ ಸದರಿ ಅರ್ಜಿಯು ತಾ. 8–8—'40ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪೆ ಹೇಳುವರೆ ಸದರಿ 1, 2ನೇ ಪ್ರತಿವಾದಿರು ಸ್ವತಹಾ ಅಥವಾ ವಕೀಲರ ಮುಖಾಂತರ ಸದರಿ ತಾರೀಕಿನ ದಿವಸ ಸದರಿ ಅರ್ಜಿ ತನ್ನಿ ಸಮಯ ಸದರಿ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದರಿ ಅರ್ಜಿಯು ಸದರಿ 1, 2ನೇ ಪ್ರತಿವಾದಿರ ಗೈರಹಾಜರಿಯಲ್ಲಿ ತೀರ್ಮಾನಿಸಲಾದೀತೆಂತ ಸದರಿ 1, 2ನೇ ಪ್ರತಿವಾದೀರಿಗೆ ಈ ಮೂಲಕ ಸೂಚಿಸೋಣಾಗುತ್ತದೆ.

M. Damodar Kamath,
Advocate for Plaintiffs.
Udipi, South Kanara, Dated 25—7—1940.

ಬಿಳಿಯ ಗುಲಾಬಿಯಂತೆ ಪರಿಮಳವುಳ್ಳದ್ದು
ತಂಗಾಳಿಯಂತೆ ಚೈತನ್ಯ ವುಂಟುಮಾಡುವಂಥಾದ್ದು

ಅದರ ಪರಿಮಳವು ಪ್ರತ್ಯೇಕವಾಗಿದೆ; ಮನಸ್ಸನ್ನು ಸೂರೆಗೊಳ್ಳುವ, ಚೈತನ್ಯದಾಯಕವಾದ ಮತ್ತು ಆಕರ್ಷಕವಾದ ಬಿಳಿ ಗುಲಾಬಿಯ ಮೊಗ್ಗುಗಳಂತೆ ಸುಮನೋಹರವೂ ಸುಮಧುರವೂ ಆದ ಸುವಾಸನೆ. ವೈಟ್‌ರೋಸ್ ಸೋಪು ತಂಗಾಳಿಯಂತೆ ಚೈತನ್ಯವನ್ನುಂಟುಮಾಡುತ್ತದೆ. ಅದರಿಂದ ಸ್ನಾನಮಾಡಿದರೆ ನಿಮಗೆ ನವಚೇತನವುಂಟಾಗಿ, ನೀವು ತಾರುಣ್ಯ ಮತ್ತು ಚಟುವಟಿಕೆಯನ್ನು ಪಡೆದಂತೆ ಅನುಭವ ವುಂಟಾಗುವುದು. ಅದು ಕಡಿಮೆಬೆಲೆಯ ಮಹತ್ವ ಗುಣವುಳ್ಳ ಸೋಪಾಗಿದೆ.—ಎಲ್ಲರಿಗೂ ಉಪಯೋಗವಾಗುವ ಉತ್ತಮ ಸೋಪಾಗಿದೆ.

VINOLIA
WHITE ROSE SOAP

V.W.R. 3-169 KN — VINOLIA CO., LIMITED, LONDON, ENGLAND

ಪ್ರಾರ್ಥನೆಯ ಫಲ

ಕಡಪಾ ಜಿಲ್ಲಾ ಮುನ್ಸಿಫರು, ಜಿಲ್ಲಾ ಮುನ್ಸಿಫ್ ಕೋರ್ಟಿನ ರಿಕಾರ್ಡುಗಳಲ್ಲಿ ಕ್ರಮವರಿತು ಫೋರ್ಜರಿ ನಡೆಯುತ್ತಿದೆ ಎಂದು ಪೋಲೀಸರಿಗೆ ವರದಿ ಮಾಡಿದ್ದರ ಮೇಲೆ, ಸಿ. ಐ. ಡಿ. ಯವರು ಜಿ. ರಾಮಣ್ಣ, ಎಸ್. ರಾಮಣ್ಣ ಮತ್ತು ವಿ. ಫಕ್ರುದ್ದೀನ್ ಎಂಬ ಮೂವರನ್ನು ಕೈದುಮಾಡಿರುತ್ತಾರೆ.

ಅಲ್ಲಹಾಬಾದಿನಲ್ಲಿ ಜರುಗಿದ ಒಂದು ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಪಂಡಿತ ನೆಹರುಗಳು ಇಂಡಿಯದ ಪ್ರಕೃತದ ರಾಜಕೀಯ ವಿದ್ಯಮಾನಗಳ ಕುರಿತಾಗಿಯೂ, ಚೀನಕ್ಕೆ ಬರ್ಮದ ಮಾರ್ಗವನ್ನು ಮುಚ್ಚಿರುವ ಕುರಿತಾಗಿಯೂ ಪ್ರಸ್ತಾವಿಸಿ, ಜಪಾನನ್ನು ಸಂತೈಸಲು ಕೈಕೊಂಡ ಈ ಉಪಾಯದ ಪರಿಣಾಮವು ನೆಟ್ಟಗಾಗದೆಂದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಹಳೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ, ಇಂದಿನ ಸಂದರ್ಭಾನುಸಾರವಾಗಿ ವರ್ತಿಸುತ್ತಿದೆ ಎಂದು ಮುಂತಾಗಿ ನುಡಿದರು.

ನಮ್ಮ ಮಾಜಿ ಪ್ರಧಾನರಾದ ಶ್ರೀ. ಸಿ ಆರ್. ಆಚಾರಿಯವರು ಮದ್ರಾಸ್ ಕಾಂಗ್ರೆಸ್ ಮುಂದಿರದ ವಠಾರದಲ್ಲಿ ಒಂದು ಪ್ರಚಂಡ ಸಾರ್ವಜನಿಕ ಸಭೆಯ ಮುಂದೆ ತಮಿಳಿನಲ್ಲೊಂದು ಭಾಷಣ ಕೊಟ್ಟರು. ವರ್ಕಿಂಗ್ ಕಮಿಟಿಯ ಈಚಿಗಿನ ತೀರ್ಮಾನವೇನು, ಮಹಾತ್ಮರಿಗೂ ಈ ಕವಿಟಗೂ ಎಷ್ಟು ಮಟ್ಟಿನ ಭಿನ್ನಾಭಿಪ್ರಾಯ ಉಂಟಾಯಿತು, — ಎಂದು ಮುಂತಾಗಿ ವಿವರಿಸುತ್ತ ಅಧಿಕಾರಿಗಳು ಜನಗಳಲ್ಲಿ "ಆತ್ಮರಕ್ಷಣೆ"ಯ ಸ್ಫೂರ್ತಿಯನ್ನು ಸ್ವಾತಂತ್ರ್ಯಸಿದ್ಧಿಯ ವಾದದಿಂದ ಉತ್ಪನ್ನಗೊಳಿಸಬೇಕೆಂದರು. ಎಕ್ಸಿಕ್ಯುಟಿವ್ ಕೌನ್ಸಿಲಿನ ವಿಸ್ತಾರದ ಈ ಸೂಚನೆಯು ಹಿತಕರವಲ್ಲ, ಅದರಿಂದ ತಿಕ್ಕಾಟವಾಗಬಹುದೆಂದರು. ಇಂಡಿಯದ ಕೇಳಿಕೆಗಳನ್ನು ಈಗ ಮನ್ನಿಸುವುದೇ, ಇಂಡಿಯದ ಬ್ರಿಟಿಷ್ ರಾಜ್ಯಭಾರದ ಇತಿಹಾಸದಲ್ಲಿ ಒಂದು ಕೀರ್ತಿದಾಯಕವಾದ ಸಾಧನೆಯಾಗಿದೆ, ಬ್ರಿಟನ್ ಹಾಗೆ ಮಾಡಲಿ, ಸ್ವತಂತ್ರ ಭಾರತದ ಸಹಾಯವು ಮಾತ್ರವೇ ಗಣನೀಯವಾಗಿದೆ ಎಂದು ಅಪ್ಪಣೆ ಕೊಡಿಸಿರುವರು.

ರೋಹರಿಯಲ್ಲಿ ಕೆಲ ಕಾಲದಿಂದ ಹಿಂದೂ ಮುಸ್ಲಿಮರೊಳಗೆ ಮನಸ್ತಾಪವಿದ್ದು, ಈಚಿಗೊಬ್ಬ ಶಾಸನ ಸಭಾ ಸದಸ್ಯರ ಕೊಲೆಯೂ ನಡೆದಿರುವ ಕಾರಣ, ಶಾಂತಿಭಂಗವಾಗದಂತೆ ೧೪ಳಳನೇ ಪ್ರಕರಣವನ್ನು ೧ ತಿಂಗಳ ವರೆಗೆ ಸಕ್ಕೂರ್, ಷಿಕಾರಿಪುರ ಮತ್ತು ರೋಹರಿಯಲ್ಲಿ ಜ್ಯಾರಿಗೆ ತರಲಾಗಿದೆ!

ರಾಮದುರ್ಗ ಪ್ರಜಾ ಸಂಘದ ೩೦ ಮಂದಿ ಮೆಂಬರರು ರಾಮದುರ್ಗದ ದಂಗೆಯ ನಷ್ಟವಾಗಿ ೯ ಸಾವಿರ ರೂಪಾಯಿಗಳ ನಷ್ಟ ತೆರಬೇಕಾಗಿ ರಾಮದುರ್ಗ ದರ್ಬಾರಿನವರು ವಿಧಿಸಿದ್ದಾರೆ.

ಕಳೆದ ವರ್ಷ; ಬರ್ಮಾ ಹಿಂದೂ ಮುಸ್ಲಿಂ ದಂಗೆಯ ಕುರಿತು ವಿಚಾರಣೆ ನಡೆಸಲು ಅಲ್ಲಿನ ಸರಕಾರವು ನಿರ್ಧರಿಸಿದ್ದ ಅದೊಂದು ಸಮಿತಿಯ ಶಿಫಾರಸುಗಳ ಮೇರೆಗೆ ೫೩ ಮಂದಿ ಹಿಂದೀಯರನ್ನು ಬರ್ಮದಿಂದ ಉಚ್ಚಾಟನೆ ಮಾಡಬೇಕಾಗಿದೆ. ಅವರಲ್ಲಿ ಆಗಲೇ ಕೆಲವರನ್ನು ಅಲ್ಲಿಂದ ಹೊರ ಹೊರಡಿಸಿಯೂ ಆಗಿದೆ!

ವೈಸರಾಯರ ಯುದ್ಧನಿಧಿಗೆ ಸುಮಾರು ೧ ಕೋಟಿ ರೂಪಾಯಿಗಳು ವಂತಿಗೆಯಾಗಿ ಸಂಗ್ರಹವಾಗಿರುವುದೆಂದು ತಿಳಿದುಬರುತ್ತಿದೆ. ಇದರಲ್ಲಿ ಹೆಚ್ಚಾಗಿ ನರೇಂದ್ರರೇ ಮುಖ್ಯ ಭಾಗವನ್ನು ನಿರ್ವಹಿಸಿದವರು. ಈ ವಂತಿಗೆಯಲ್ಲಿ ೬ ಪೈ ವಂತಿಗೆಯಿಂದ ಹಿಡಿದು ತಿಂಗಳಿಗೆ ೧೫ ಲಕ್ಷ ರೂಪಾಯಿಗಳ ವರೆಗಿನ ವಂತಿಗೆಯೂ ಸೇರಿದೆ!

ಯುದ್ಧ ಕಾರ್ಯದ ನಿರ್ವಾಹಕ್ಕಾಗಿ ಪೋರ್ಚುಗೀಸಿನ ನಾಗರಿಕರು ಬ್ರಿಟಿಷ್ ಸರಕಾರಕ್ಕೆ ೧೫೦,೦೦೦ ಪೌಂಡುಗಳನ್ನೂ ಒಂದು ಸಮುದ್ರ ವಿಮಾನವನ್ನು ಕೊಳ್ಳಲು ೧೧ ಸಾವಿರ ಪೌಂಡುಗಳನ್ನೂ ದಾನಮಾಡಿರುತ್ತಾರೆ ಈ ಹಣದಲ್ಲಿ ಹೆಚ್ಚಿನ ಅಂಶ [illegible] ವಂತೀಯರಿಂದ ಬಂದುದು.


'ಎಸ್ಪ್ರೊ'
12
ಘಂಟೆಗಳು
MADE ENGLAND
ASPRO
REG TRADE MARK
TABLETS
ಕೆಲಸ ಮಾಡುತದೆ
'ಎಸ್ಪ್ರೊ' ಮಾಡುವುದಿದು.
ಒಂದು ಮೊಗು ಕೂಡ 'ಎಸ್ಪ್ರೊ'ವನ್ನು ಕೆಡುಕಿಲ್ಲದೆ ಸೇವಿಸಬಹುದು.
5 ನಿಮಿಷಗಳಲ್ಲಿ ತಲೆನೋವನ್ನು ನಿಲ್ಲಿಸುತ್ತದೆ. ಒಂದೇ ರಾತ್ರಿಯಲ್ಲಿ ನಾತರೋಗವನ್ನು ಓಡಿಸುತ್ತದೆ. ಹತ್ತು ನಿಮಿಷಗಳಲ್ಲಿ ಜ್ವರವನ್ನು ಇಳಿಸುತ್ತದೆ. ನರಗೆಳನ್ನೋವನ್ನು ತಕ್ಷಣ ಪರಿಹರಿಸುತ್ತದೆ. ನಿನುಗೆ ಸುಖ ನಿದ್ದೆ ಬರಿಸುತ್ತದೆ. ಸ್ತ್ರೀಯರ ಶೂಲೆಗಳನ್ನು ಕೊನೆಗಾಣಿಸುತ್ತದೆ. ನೆಗಡಿ ಮತ್ತು ಇನ್‌ಫ್ಲೂಯಂಜಾಗಳಿಗೂ ಮತ್ತು ಜ್ವರಸಂಬಂಧವಾದ ಎಲ್ಲ ರೋಗಗಳಿಗೂ ಪರಮೌಷಧ.
'ಎಸ್ಪ್ರೊ' ಹೃದಯಕ್ಕಾಗಲಿ ಪರರಕ್ಕಾಗಲಿ ಹಾನಿಕರವಲ್ಲ.
ಅದು ಬೇಗ ಗುಣಮಾಡುತ್ತದೆ.
'ಎಸ್ಪ್ರೊ' ವಿನ 'ಸೀಲ್ಡ್ ಟೈಟ್' ವ್ಯಾಕೆಟ್ಟನ್ನು ನೀವೆಂದಿಗೂ ಹಾಳಿದಯಾ ಅದಕ್ಕೆ ಚ್ಯುತಿ ತಗಲುವುದಿಲ್ಲ.
'ಎಸ್ಪ್ರೊ' ಬಿಲ್ಲೆಯು ತೇವವನ್ನು ನಿರೋಧಿಸುವಂತಹ ಸುಪ್ರಸಿದ್ಧ 'ಸೀಲ್ ಟೈಟ್' ರೀತಿಯಲ್ಲಿ ಪ್ಯಾಕುಮಾಡಲ್ಪಟ್ಟಿರುವುದರಿಂದ ಅದು ವರ್ಷಗಟ್ಟಲೆಗಳವರೆಗೆ ಹೊಸದಾಗಿಯೂ ಶುದ್ಧವಾಗಿಯೂ ಇರುತ್ತದೆ.
ಬೆಲೆ :—3 ಬಿಲ್ಲೆಗಳಿಗೆ 1 ಆಣೆ.
30 ,, 10 ಆಣೆ.
ಏಜೆಂಟರು : ಜೆ. ಎಲ್. ಮೋರಿಸ್ ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್.
ಪೋ. ಬಾ. 1370, ಮದರಾಸು. (ಫೋ 3126) ಮತ್ತು ಬ್ರಾಂಚುಗಳು. K.B.104

ಬ್ರಿಟನಿನ ಆಯವ್ಯಯವನ್ನು ಸರಿದೂಗಿಸಲು ಆದಾಯ ತೆರಿಗೆಯನ್ನು ಹೆಚ್ಚಿಸದೆ ನಿರ್ವಾಹವಿಲ್ಲವೆಂದು ಬ್ರಿಟಿಷ್ ಆರ್ಥಿಕ ಪರಿಸ್ಥಿತಿಯಿಂದ ವೇದ್ಯವಾಗುತ್ತಿದೆ. ಇನ್ನು ಆ ಏರಿಕೆ ಎಷ್ಟೆಂಬುದು ಆಗಲೇ ಪ್ರಕಟವಾಗಿದೆ.

ಪೂರ್ವ ದೇಶದಲ್ಲಿನ ಸಾಮಾನ್ಯ ಪರಿಸ್ಥಿತಿಯ ದೃಷ್ಟಿಯಿಂದ, ಸಿಂಗಪುರದ ರಕ್ಷಣಾ ಕಾರ್ಯಗಳನ್ನು ಇನ್ನಷ್ಟು ಉತ್ತಮಗೊಳಿಸುವ ವ್ಯವಸ್ಥೆ ನಡೆದಿದೆ. ಬರೇ ಸಿಂಗಪುರದಲ್ಲೇ ಅಲ್ಲ; ಪೆನಾಂಗಿನಲ್ಲಿಯೂ ಇಡೀ ಮಲಯದಲ್ಲಿಯೂ ಮುಂಜಾಗರೂಕತೆಯ ರಕ್ಷಣೋಪಾಯಗಳನ್ನು ಕೈಕೊಳ್ಳಲಾಗಿದೆ. ಇದರಿಂದ ಮಲಯದಲ್ಲಿ ಶೀಘ್ರವಾದ ಅಪಾಯಗಳೇನಾದರೂ ಬರಬಹುದೇ ಎಂದು ಅನುಮಾನಿಸುವ ಸಂದರ್ಭಗಳೇನೂ ಇಲ್ಲವಾಗಿ ಹೇಳಲಾಗಿದೆ.

ಪೀಟರ್‌ಬರೋವಿನ [illegible] ನಿವಾಸಿಯಾದ ೮೦ ವರ್ಷದ ಬ್ರಹ್ಮಚಾರಿ ಮಿ. ಜಾನ್ ಫೀಲ್ಡನ್ ಎಂಬಾತನು, ಯುದ್ಧದ ನಿಧಿಗಾಗಿ ೫೦,೦೦೦ ಪೌಂಡುಗಳನ್ನು ದಾನಮಾಡಿದ್ದಾನೆ.

ಲಿಥುವೇನಿಯಾ ಮೊದಲಾದ ೩ ರಾಷ್ಟ್ರಗಳು ರಷ್ಯವನ್ನು ಆಶ್ರೈಸಿದ್ದರಿಂದ, ರಷ್ಯಕ್ಕೆ ೬೦ ಸಾವಿರ ಚದರ ಮೈಲುಗಳಿಗೂ ಮಿಕ್ಕಿದ ಪ್ರದೇಶವು ಸೇರಿದ ಹಾಗಾಯಿತು. ರಷ್ಯದ ಜನಸಂಖ್ಯೆ ೬೦ ಲಕ್ಷದಷ್ಟು ಹೆಚ್ಚಿದಂತಾಯಿತು. ಅಲ್ಲದೆ ಬಾಲ್ಟಿಕ್ ತೀರದಲ್ಲಿ ೭೫೦ ಮೈಲುಗಳು ರಷ್ಯದ ಆಡಳಿತಕ್ಕೆ ಸಿಕ್ಕಿದಂತಾಯಿತು.

ಆಸ್ಟ್ರೇಲಿಯದವರು ವಾರಕ್ಕೆ ಸುಮಾರು ೧೫ ಮಿಲ್ಯ ಪೌಂಡು ಬಾಳುವ "ವಾರ್ ಸೇವಿಂಗ್ಸ್ ಸರ್ಟಿಫಿಕೇಟು"ಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಅಲ್ಲಿನ ಜನಸಂಖ್ಯೆಯಲ್ಲಿ ಹತ್ತರಲ್ಲಿ ಒಂದು ಅಂಶದವರು ಇವುಗಳನ್ನು ಕೊಳ್ಳುತ್ತಿದ್ದಾರೆಂದು ತಿಳಿದುಬಂದಿದೆ.

ಇತಿಯೋಪಿಯ ತಲೆ ಎತ್ತುವುದೇ?

ಈಗಲೀಗ ಇತಿಯೋಪಿಯವು ಬ್ರಿಟನಿನ ಮಿತ್ರರಾಷ್ಟ್ರವೆಂದು ಪರಿಗಣಿಸಲು ಅವಕಾಶವುಂಟಾಗಿದೆ. ಸಮಯಕ್ಕೆ ಹುಲ್ಲು ಕಡ್ಡಿಯಾದರೂ ಬೇಕಷ್ಟೆ!

ಇತಿಯೋಪಿಯವು ಇಟೆಲಿಯ ಜಗಳಗಂಟ ತನಕ್ಕೆ ಬಲಿಬಿದ್ದು ನೆಲಕಚ್ಚಿ ಹೋಗಿದೆ. ಇಟೆಲಿ "ವಿಷವಾಯು, ಮೊದಲಾದ ಅನ್ಯಾಯವಾದ ಯುದ್ಧೋಪಕರಣಗಳನ್ನು ಉಪಯೋಗಿಸಿ ಆ ದೇಶವನ್ನು ತನ್ನ ಪಾದಾಕ್ರಾಂತವೆಂದು ಮಾಡಿಕೊಂಡಿದೆ. ಆದರೂ ಆ ದೇಶೀಯರ ಸ್ವಾತಂತ್ರ್ಯದ ಸ್ಫೂರ್ತಿ ಕುಂದಿಲ್ಲವೆಂದು ಇಂದಿನ ವಿದ್ಯಮಾನಗಳಿಂದ ಖಚಿತವಾಗುತ್ತಿದೆ.

ಈ ಯುದ್ಧದಲ್ಲಿ ಸೇರಿ, ಅದರ ಸುಖಕಷ್ಟಗಳನ್ನು ಅನುಭವಿಸಿ, ಈ ಸಣ್ಣ ರಾಷ್ಟ್ರವು ಪುನಃ ಸ್ವಾತಂತ್ರ್ಯವನ್ನು ಪಡೆಯುವಂತಾದರೆ ಜಗತ್ತಿಗೇ ಸಂತೋಷವಾದೀತು!

ಇತಿಯೋಪಿಯಕ್ಕೀಗ ವಿಮಾನಗಳೇ ಮೊದಲಾದ ಯುದ್ಧ ಸಾಮಗ್ರಿಗಳು ಒದಗಿದರೆ, ಆ ದೇಶವು ಇಟೆಲಿಯನ್ನು ಸೋಲಿಸದಿರಲಾರದು. ಆ ಭಯ ಇಟೆಲಿಗೂ ಉಂಟೆಂಬುದು ಖಂಡಿತ. ಕಾರಣ ಆ ದೇಶವು ಇಂದು ಒಗ್ಗಟ್ಟಾಗಿರುವಷ್ಟು ಹಿಂದೆಂದೂ ಆಗಿರಲಿಲ್ಲ. ಅಲ್ಲೀಗ ೩೦ ಸಾವಿರ ದೇಶೀಯ ಸೈನ್ಯ ಯುದ್ಧಕ್ಕೆ ಅಣಿಯಾಗಿ, ದೇಶದ ಒಂದು ಭಾಗವನ್ನು ಹಿಡಿದಿಟ್ಟಿದೆ. ಇನ್ನು ಬ್ರಿಟಿಷ್ ಬಲವು ಇಟೆಲಿಯ ಕತ್ತನ್ನು ಹಿಡಿದರೆ, ನೇಗಸರು ಇಟೆಲಿಯ ಅವಸ್ಥೆ ಮುಗಿಯಿತೆಂದು ಧೈರ್ಯಗೊಳ್ಳುವಂತಾಗುತ್ತದೆ!


A SURE CURE FOR COLDS AND RHEUMATIC PAINS
ತಲೆನೋವು, ಶೀತ, ವಾತ, ಉಳುಕು ಮತ್ತು ವಾತದ ಬೇನೆಗಳಿಂದ ಪಾರಾಗಿಹೊರಬರಲು ಈ ಸುಗಂಧ, ಬೇನೆಹಾರಿ ಮುಲಾಮನ್ನು ಹಚ್ಚಿರಿ. ಸಿಪ್ರಸ್ ಮುಲಾಮಿನ ವಿಷಹಾರಕ ಗಂಧವು ಶೀತದಿಂದ ಕಟ್ಟಿಕೊಳ್ಳೋದ ನಾಸಿಕ ದ್ವಾರವನ್ನು ಶೀಘ್ರದಲ್ಲಿ ಸರಿಪಡಿಸಿ ಉಪಶಮನವೀವುದು. ಎಲ್ಲಾ ಕೆಮಿಸ್ಟರಲ್ಲೂ ದೊರೆಯುವುದು. ಚಾಟ್ಲಿಯೊಂದರ ಬೆಲೆ ರೂ. 1. ಅಂಚೆಗಾಗಿ ಎರಡಾಣೆ ಅಂಚೆ ಚೀಟು ಕಳುಹಿಂದಲ್ಲಿ ಪುಕ್ಕಟೆ ಮಾದರಿ ಸೀಸೆ ಕಳುಹಲಾದೀತು.
ಶೀತವನ್ನು ಅಲಕ್ಷಿಸದಿರಿ. ಶೀಘ್ರ ಉಪಶಮನಕ್ಕೆ ಸಿಪ್ರಸ್ ಮುಲಾಮನ್ನು ಎದೆ ಮತ್ತು ಗಂಟಲುಗಳಿಗೆ ತಿಕ್ಕಿಕೊಳ್ಳಿರಿ.
ODMAN'S
CYPRESS SALVE
(Pain Balm) REGD
ಅಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂ.,
825, ಜುಮ್ಮಾ ಮಸೀದಿ, ಬೊಂಬಾಯಿ, 2.

ನಗರವಾಸಿಯ ಆರೋಗ್ಯ ರಕ್ಷಣೆ

(ಭಾಗ ೨)

(ಮಾನವನು ತನ್ನ ಜೀವಮಾನವೆಲ್ಲಾ ಆರೋಗ್ಯ ದೃಢಕಾಯನಾಗಿದ್ದು ಕರ್ತವ್ಯವನ್ನು ಮಾಡಿ ಸಂತೋಷದಿಂದ ಬಹಳ ಕಾಲ ಬಾಳಿ ಬದುಕಿರಬೇಕಾದರೆ ಅನುಸರಿಸಬೇಕಾದ ವಿಧಾನಗಳ ವಿವರ).

೮. ಸ್ನಾನ

ನೀರು ನಮ್ಮ ಆಂತಶ್ಯುದ್ಧಿ ಬಹಿಶ್ಯುದ್ಧಿಗೂ ನಾವು ತೊಡುವ ಉಡುಪಿನ ಶುದ್ಧಿಗೂ ನಾವು ವಾಸಮಾಡುವ ಮನೆಯ ಶುದ್ಧಿಗೂ ನಾವು ಉಪಯೋಗಿಸುವ ಪದಾರ್ಥಗಳ ಶುದ್ಧಿಗೂ ಮೂಲಾಧಾರವಾದುದು. ಪ್ರತಿನಿತ್ಯವೂ ಹೊತಾರೆ ಎದ್ದು ಮಲಮೂತ್ರವಿಸರ್ಜನೆ ಮಾಡಿ ಕೈಕಾಲುಗಳನ್ನು ತೊಳೆದು ಹಲ್ಲುಜ್ಜಿ, ಮುಖ, ಕಣ್ಣು, ಮೂಗುಗಳನ್ನು ಚೆನ್ನಾಗಿ ತೊಳೆದು ಬೊಕ್ಕಟ ಮಾಡಿಕೊಳ್ಳುವುದು ತಿಳಿದ ವಿಷಯವೇ ಆಗಿದೆ. ಆಹಾರ ಜೀರ್ಣವಾಗುವುದಕ್ಕೂ ಆರೋಗ್ಯಕ್ಕೂ ಹಲ್ಲನ್ನು ಶುಭ್ರವಾಗಿಟ್ಟು ಚೆನ್ನಾಗಿ ಕಾಪಾಡುವುದು ಅಗತ್ಯ. ತರುವಾಯ ಒರಟಾದ ಒಂದು ಚೌಕವನ್ನು ತಣ್ಣೀರು ಅಥವಾ ಸುಖೋಷ್ಣವಾದ ಬಿಸಿನೀರಿನಲ್ಲಿ ಅದ್ದಿ ಕಾಲಿನಿಂದ ತಲೆಯವರೆಗೂ ನೀರು ಹಾಕಿಕೊಂಡು ಮೈಯನ್ನೆಲ್ಲಾ ಉಜ್ಜಿ ತೊಳೆದು ಸ್ನಾನಮಾಡಬೇಕು. ಸ್ನಾನ ಮಾಡುವಾಗ ಕೈ, ಕಾಲು, ತಲೆಯ ಕೂದಲು, ಉಗುರು ಸಂದುಗಳು ಇವುಗಳನ್ನು ಚೆನ್ನಾಗಿ ತೊಳೆಯಬೇಕು. ಬೇಸಿಗೆ ಕಾಲದಲ್ಲಿ ಎರಡಾವರ್ತಿ ಸ್ನಾನ ಮಾಡಬಹುದು. ಎಣ್ಣೆಯನ್ನು ಒತ್ತಿಕೊಂಡು ಆಗಾಗ್ಗೆ ಸ್ನಾನಮಾಡಿದರೆ ಆರೋಗ್ಯ; ಚರ್ಮವೂ ಮೃದುವಾಗುತ್ತದೆ. ಸ್ನಾನ ಮಾಡುವುದರಿಂದ ಹೈಮೇಲೆಲ್ಲಾ ಇರುವ ರೋಮಕೂಪ(ತೂತು)ಗಳು ಚೊಕ್ಕಟವಾಗಿ, ಬೆವರು ಧಾರಾಳವಾಗಿ ಹೊರಗೆ ಬರುವುದಕ್ಕೆ ಅವಕಾಶ ಹೆಚ್ಚುತ್ತದೆ. ಮೈಯಿಂದ ಹೊರಗೆ ಬರುವ ನೀರಿನಲ್ಲಿ ೨/೩ ಭಾಗ ಚರ್ಮದ ಮೂಲಕವೇ ಬರುವುದರಿಂದ ಚರ್ಮವು ಸ್ನಾನದಿಂದ ಶುದ್ಧಿಯಾಗಬೇಕು. ನೀರಿನ ಸ್ನಾನದ ಜೊತೆಗೆ ಪ್ರತಿನಿತ್ಯವೂ ವಾಯುಸ್ನಾನ, ಸೂರ್ಯರಶ್ಮಿ ಸ್ನಾನವನ್ನು ಮಾಡಿಕೆಬೇಕು. ಅಂದರೆ ಕೌಪೀನವನ್ನು ಧರಿಸಿ ಮೈಯನ್ನು ಸ್ವಲ್ಪ ಹೊತ್ತು ಗಾಳಿಗೂ, ಸ್ವಲ್ಪ ಹೊತ್ತು ಬಿಸಿಲಿಗೂ ಬಿಟ್ಟರಬೇಕು. ಇದರಿಂದ ಹೊರಗಣ ವಾಯುವು ಚರ್ಮದ ಮೂಲಕವಾಗಿಯೂ ಒಳಕ್ಕೆ ಸೇರುತ್ತದೆ. ಮತ್ತು ಸೂರ್ಯ ರಶ್ಮಿಯು ಚರ್ಮದ ಮತ್ತು ಅವಯವಗಳ ಕರ್ತವ್ಯಗಳನ್ನು ಚುರುಕಾಗಿ ನಡೆಸಿ ದೇಹದ ಬೆಳವಣಿಕೆಗೆ ಅವಕಾಶವಾಗುತ್ತದೆ.

೯. ಉಡುಪು

ಉಡುಪು ಶರೀರಡ ಶಾಖವನ್ನು ಸರಿಯಾಗಿ ಇಡುವುದಕ್ಕೂ ಚಳಿ–ಗಾಳಿ–ಬಿಸಿಲಿನ ಹೊಡೆತದಿಂದ ಕಾಪಾಡುವುದಕ್ಕೂ ಶರೀರಕ್ಕೆ ಕೊಳೆ ಸೇರದ ಹಾಗೆ ಮಾಡುವುದಕ್ಕೂ ಮತ್ತು ಅದಕ್ಕೆ ಅಲಂಕಾರವಾಗಿರುವುದಕ್ಕೂ ಸಹಾಯಮಾಡುತ್ತದೆ ಇದು ಉಣ್ಣೆ, ಹತ್ತಿ, ರೇಷ್ಮೆ, ನಾರು ಮುಂತಾದುವುಗಳಿಂದ ತಯಾರಾಗುತ್ತದೆ. ಉಣ್ಣೆಯ ಬಟ್ಟೆಯು ಶಾಖವನ್ನು ತಡೆಯುತ್ತದೆ ಎಂದರೆ ಹೊರಗಣ ಶಾಖವನ್ನು ಒಳಕ್ಕೆ ಬಿಡುವುದಿಲ್ಲ ಮತ್ತು ಶರೀರದ ಶಾಖವನ್ನು ಹೊರಗೆ ಬಿಡುವುದಿಲ್ಲ. ಆದರೆ ಬೆವರನ್ನು ಹೆಚ್ಚಾಗಿ ಹೀರಿಕೊಂಡು ಶರೀರದ ಶಾಖವನ್ನು ಕಡಮೆಮಾಡುತ್ತದೆ ದುರ್ವಾಸನೆಯನ್ನು ಹೀರಿಕೊಳ್ಳುತ್ತದೆ. ಆದಕಾರಣ ತೆಳು ಮತ್ತು ಮೃದುವಾದ ಬಿಳಿಯ ಬಣ್ಣದ ಉಣ್ಣೆಯ (ಫ್ಲಾನಲ್) ಅಂಗಿಯನ್ನು ತೊಡುವುದು ಆರೋಗ್ಯವಾದುದು. ಬಿಳಿಯ ಬಣ್ಣದ ಉಡುಪು ಉತ್ತಮವಾದುದು. ಹಳದೀ ಬಣ್ಣದು ಎರಡನೆಯದು. ಅಗಸನ ಮಡಿಯನ್ನಾಗಲಿ ನಿತ್ಯವೂ ಒಗೆದ ಬಿಳಿಯ ಬಟ್ಟೆಯನ್ನಾಗಲಿ ಧರಿಸಬೇಕು. ಆದರೆ ಅಗಸನ ಮಡಿಯನ್ನು ೧–೨ ಸಲ ಬಿಸಿಲಿನಲ್ಲಿ ಹಾಕಿ ಆ ಮೇಲೆ ಉಪಯೋಗಿಸಬೇಕು. ದೇಶ ಕಾಲಕ್ಕೆ ಅನುಗುಣವಾದ ಉಡುಪನ್ನು ಧರಿಸಬೇಕು. ಎಂದರೆ ಉಷ್ಣ ದೇಶದಲ್ಲಿ ಬೇಸಿಗೆ ಕಾಲದಲ್ಲಿ ತೆಳುವಾದ ಮತ್ತು ಪಗುರವಾದ ಬಟ್ಟೆಯನ್ನೂ ಶೀತ ದೇಶದಲ್ಲಿ ಛಳಿಗಾಲದಲ್ಲಿ ಬೆಚ್ಚಗಿರುವ ಮಂದವಾದ ಉಡುಪನ್ನೂ ಉಣ್ಣೆಯ ಶಾಲು, ಸಕಲಾತಿಯನ್ನೂ ಧರಿಸಬೇಕು. ಉಡುಪು ಬೆಲೆಯಲ್ಲಿ ಕಡಮೆಯಾಗಿಯೂ, ಸ್ವದೇತಿಯಾಗಿಯೂ ಇರಬೇಕು ಉಡುಪನ್ನು ಬಲು ಬಿಗಿಯಾಗಿ ಉಡಬಾರದು, ಸಡಿಲವಾಗಿರಬೇಕು. ಹಾಸಿಗೆ ಮತ್ತು ದುಪಟಿಯನ್ನು ಒಗೆದು ಬಿಸಿಲು ಗಾಳಿಯಲ್ಲಿ ಹಾಕಬೇಕು. ಶಾಲು ಸಕಲಾತಿಗಳನ್ನು ಗಾಳಿಯಾಡುವ ಸ್ಥಳದಲ್ಲಿ ನೇತು ಹಾಕಬೇಕು. ಐನೂರು ರೂಪಾಯಿ ಶಾಲನ್ನು ಹೊದ್ದುಕೊಂಡರೆ ಶಾಖವನ್ನು ಕೊಡುತ್ತದೆ. ಐದು ರೂಪಾಯಿ ಶಾಲನ್ನು ಹೊದ್ದುಕೊಂಡರೂ ಅದೇ ಶಾಖವನ್ನು ಕೊಡುತ್ತದೆ. ಎರಡು ಬಗೆಯ ಶಾಲಿನಿಂದಲೂ ಪ್ರಯೋಜನವು ಒಂದೇ ಆಗಿರುವುದರಿಂದ ಮಧ್ಯಮ ದರ್ಜೆಯ ಶಾಲನ್ನು ಕೊಂಡು ಹಣವನ್ನು ಮಿಗಿಸಿ ಪರೋಪಕಾರ ಮಾಡಬಾರದೇಕೆ? ವಾಸಮಾಡುವ ಮನೆಯ ವಿಷಯವೂ ಹೀಗೆಯೇ.

೧೦. ಮನೆ

ನಾವು ಪ್ರತಿ ದಿನದಲ್ಲಿಯೂ ಸುಮಾರು ಮುಕ್ಕಾಲು ಭಾಗದಷ್ಟು ಕಾಲವನ್ನು ಮನೆಯಲ್ಲಿಯೇ ಕಳೆಯುತ್ತೇವೆ. ಆದಕಾರಣ ನಮ್ಮ ಆರೋಗ್ಯಕ್ಕೂ ಅನಾರೋಗ್ಯಕ್ಕೂ ಮನೆಯೇ ಒಂದು ಕಾರಣವಾಗಿದೆ. ಮನೆಯು ಜೋಗಿಲ್ಲದ ಬೀದಿಗಿಂತಲೂ ಎತ್ತರವಾದ ಸ್ಥಳದಲ್ಲಿರಬೇಕು. ಗಾಳಿಯು ಧಾರಾಳವಾಗಿ ಒಳಗೆ ಸಂಚರಿಸುವಂತೆ ವಿಶಾಲವಾದ ಕಿಟಕಿಗಳನ್ನಿಟ್ಟು ತೆಗೆದಿಟ್ಟಿರಬೇಕು. ಬೆಳಕೂ ಸೂರ್ಯರಶ್ಮಿಯೂ ಚೆನ್ನಾಗಿ ಒಳಗೆ ಬೀಳುವಂತಿರಬೇಕು. ಮನೆಯ ಒಳಗೂ ಹೊರಗೂ ಚೊಕ್ಕಟವಾಗಿರಬೇಕು ಧೂಳಾಗಲಿ ಹೊಗೆಯಾಗಲಿ ಮನೆಯ ಒಳಗೆ ಮುಚ್ಚಿಕೊಂಡಿರಬಾರದು. ಬಚ್ಚಲ ನೀರು ಧಾರಾಳವಾಗಿ ಹೊರಗೆ ಹೋಗುವಂತಿರಬೇಕು. ಮನೆಯ ಹಿಂದು ಮುಂದೆ ಬೈಲಿರಬೇಕು. ಮನೆಯ ಸುತ್ತಲೂ ಹೂ ಗಿಡಗಳನ್ನೂ ಹಸುರಾದ ಹುಲ್ಲನ್ನೂ ಬೆಳೆಸಿ ಹೂಗಳ ಬಣ್ಣವನ್ನು ನೋಡಿ ವಾಸನೆಯನ್ನು ಆಘ್ರಾಣಿಸಿ ಆನಂದಪಡುವಂತಿರಬೇಕು. ಹಿಂದುಗಡೆ ತರಕಾರಿ ಹಣ್ಣು ಗಿಡಗಳನ್ನು ಬೆಳೆಸಬೇಕು. ಒಳಗಡೆ ನೆಲಕ್ಕೆ ಕಲ್ಲನ್ನು ಹಾಸಬೇಕು ಅಥವಾ ವಜ್ರುಗಾರೆ ಹಾಕಬೇಕು. ಗೋಡೆಗೆ ಅಡಿಗಡಿಗೆ ಸುಣ್ಣ ಬಳಿಯಬೇಕು. ಮಲಗುವ ಕೊಠಡಿಯು ಅಡಿಗೆಯ ಮನೆ ಮತ್ತು ಸ್ನಾನದ ಮನೆಗೆ ದೂರದಲ್ಲಿರಬೇಕು. ಪಾಯಿಖಾನೆಯೂ ದನದ ಕೊಟ್ಟಿಗೆಯೂ ಪ್ರತ್ಯೇಕವಾಗಿ ದೂರದಲ್ಲಿರಬೇಕು. ಅವನ್ನು ನಿತ್ಯವೂ ಶುಚಿಮಾಡಿಸಬೇಕು. ಮನೆಯುಲ್ಲಿ ಬಾವಿಯಿರಬೇಕು. ಅದರ ಸುತ್ತಲೂ ಕೊಳಕಿಲ್ಲದಂತೆ ನೋಡಿಕೊಳ್ಳಬೇಕು. ಬಾಗಿಲಿಟ್ಟು ಧೂಳು, ಕೊಳಕು, ಗುಬ್ಬಚ್ಚಿ ಬೀಳದಂತೆ ಮುಚ್ಚಬೇಕು.

ನಮ್ಮ ಕ್ಷೇಮವನ್ನು ಮತ್ತು ಸಾರ್ವಜನಿಕವಾದ ಕ್ಷೇಮವನ್ನುದ್ದೇಶಿಸಿ (೧) ನಮ್ಮ ಮನೆಯು ಮುಂದೆಯಾಗಲಿ ಅಥವ ಪಕ್ಕದಲ್ಲಿಯಾಗಲಿ ಮಕ್ಕಳನ್ನು ಮಲಮೂತ್ರ ವಿಸರ್ಜನೆ ಮಾಡುವುದಕ್ಕೆ ಕೂಡಿಸಬಾರದು. (೨) ಬೂದಿ, ಎಂಜಲೆಲೆ ಕಸವನ್ನು ಬೀದಿಯಲ್ಲಿಟ್ಟರುವ ಕಸದ ಬುಟ್ಟಿಯಲ್ಲಿಯೆ ಹಾಕಬೇಕು. (೩) ಮನೆಯ ಮಕ್ಕಳಿಗೆ ಅಂಟು ಜಾಡ್ಯ (ಕಜ್ಜಿ, ಕಣ್ಣು ನೋವು, ಸಿಡುಬು, ಅಮ್ಮೆ ಮುಂತಾದುವು) ತಲೆದೋರಿದರೆ ಸಂಪೂರ್ಣವಾಗಿ ವಾಸಿಯಾಗುವುದಕ್ಕೆ ಮುಂಚೆ ಮಕ್ಕಳನ್ನು ಹೊರಗೆ ಕಳುಹಿಸಿ ಇತರ ಮಕ್ಕಳಿಗೆ ಅಂಟುಜಾಡ್ಯವು ಅಂಟ ಊರೆಲ್ಲಾ ಹರಡಿಕೊಳ್ಳುವುದಕ್ಕೆ ಅವಕಾಶಕೊಡಕೂಡದು.

ರಾ. ಆಳ್ವಾರೈಯ್ಯಂಗಾರ್, ಬಿ. ಎ.

ಸಾಧನ ಔಷಧಾಲಯ, ಡಕಾ (ಬಂಗಾಳ)

ಅಧ್ಯಕ್ಷರು: ಡಾ. ಜೋಗೇಶ ಚಂದ್ರ ಘೋಸ್,

ಆಯುರ್ವೇದ ಶಾಸ್ತ್ರಿ,

ಎಂ.ಎ., ಎಫ್.ಸಿ.ಎಸ್.(ಲಂಡನ್), ಎಂ.ಸಿ.ಎಸ್.(ಅಮೇರಿಕ),

ಮೊದಲು ಭಗಲ್ಪುರ ಕಾಲೇಜಿನ ಕೆಮಿಸ್ಟ್ರಿ ಪ್ರೊಫೆಸರು.

ಮಂಗಳೂರು ಏಜಂಟರು:— **ಶಾ ಕಂಪೆನಿ,** ಸುಗಂಧ ದ್ರವ್ಯ ಮತ್ತು ಔಷಧಿ ವ್ಯಾಪಾರಿಗಳು, ಮಂಗಳೂರು

ಕೆಟಲಾಗು, ಸಲಹೆ, ಔಷಧಯೋಗಗಳು ಉಚಿತ.

ಮದ್ರಾಸು ಕೇಂದ್ರ:— 17-A, ಬ್ರಾಡ್ವೇ, ಮದ್ರಾಸು.

ಶ್ರೀ. ಜಿ. ಎನ್. ಲಕ್ಷ್ಮಣ ಪೈಗಳವರಿಂದ ರಚಿತವಾದ

ಪದ್ಯಪುಸ್ತಕಗಳು

[ಈ ಮೂರು ಪುಸ್ತಕಗಳೂ ಮದರಾಸು ಟಿಕ್ಸ್‌ಟ್ ಬುಕ್ ಕಮಿಟಿಯವರಿಂದ **ಕ್ಲಾಸು ಉಪಯೋಗದ ಬಗ್ಗೆ** ಮಂಜೂರಾಗಿರುತ್ತವೆ. vide: Page 155 Part I of the consolidated List of Text-Books—1940—Fort St. George Gazette dated 30—4—1940]

೧. ಶಿಶುಗೀತಮಾಲೆ (ಸಚಿತ್ರ)

ಶಿಶುಗೀತಗಳನ್ನೂ ಅಭಿನಯಗೀತಗಳನ್ನೂ ಒಳಗೊಂಡ ಈ ಪುಸ್ತಕವು 1, 2, 3ನೆ ದರ್ಜೆಗಳ ಪದ್ಯಪಾಠಕ್ಕೂ ಸಂಗೀತಪಾಠಕ್ಕೂ ತಕ್ಕುದಾಗಿದೆ.

ಕ್ರಯ: 2½ ಆಣೆ.

೨. ಅಭಿನಯಗೀತಾವಳಿ (ಸಚಿತ್ರ)

ಅಭಿನಯಗೀತಗಳನ್ನೂ ಸಂಭಾಷಣಾರೂಪವಾದ ಕಥೆಗಳನ್ನೂ ಒಳಗೊಂಡ ಈ ಪುಸ್ತಕವು 3, 4ನೆ ದರ್ಜೆಗಳ ಪದ್ಯಪಾಠಕ್ಕೂ ಸಂಗೀತಪಾಠಕ್ಕೂ ತಕ್ಕುದಾಗಿದೆ.

ಕ್ರಯ: 3 ಆಣೆ.

[ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫಿಸರ್, ಬಳ್ಳಾರಿ — ಇವರು ತಮ್ಮ N. Dis. No. 409–6 C/1939ನೆ 29–9–39 ಪ್ರೊಸಿಡಿಂಗ್ಸ್ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿರುವ ಎಲ್ಲಾ ಕನ್ನಡ ಶಾಲೆಗಳಲ್ಲಿ ಈ ಪುಸ್ತಕವನ್ನು ಉಪಯೋಗಿಸಲಿಕ್ಕೆ ಶಿಫಾರಸು ಮಾಡಿದ್ದಾರೆ.]

೩. ಕನ್ನಡ ಪದ್ಯರತ್ನಾವಳಿ (ಸಚಿತ್ರ)

(ಪ್ರಥಮ ಭಾಗ)

ವಿವಿಧ ವಿಷಯಗಳ ಕುರಿತು ವಿವಿಧ ಪಾಠಗಳನ್ನೊಳಗೊಂಡ ಈ ಪುಸ್ತಕವು 4, 5ನೆ ದರ್ಜೆಗಳ ಪದ್ಯಪಾಠಕ್ಕೆ ತಕ್ಕುದಾಗಿದೆ. **ಕ್ರಯ: 3 ಆಣೆ.**

ಪುಸ್ತಕಗಳು ಸಿಗುವ ಸ್ಥಳ:

ಹರಿಹರ ಪುಸ್ತಕಾಲಯ, ಪುತ್ತೂರು. ಮತ್ತು ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಎಲ್ಲಾ ಪ್ರಮುಖ ಪುಸ್ತಕ ವ್ಯಾಪಾರಿಗಳಲ್ಲಿ.

KAYAKALPA MODAK

ಕಾಯಕಲ್ಪ ಮೋದಕ

ಆಯುರ್ವೇದಿಕ್ ಡ್ರಗ್ ರೀಸರ್ಚ್ ಇನ್ಸ್‌ಟಿಟ್ಯೂಟ್ ಇವರ ಶರೀರಕ್ಕೆ ದಾರ್ಢ್ಯ ವ ಪುಷ್ಟತೆ ಉಂಟುಮಾಡಿ, ಅಬ್ಬಾಲವೃದ್ಧರಿಗೆ ರೋಗರಹಿತರಾಗಿ, ದೀರ್ಘಾಯುವನ್ನು ಕೊಡುವ ಚರಕೋಕ್ತ ದಿವ್ಯ ವನಸ್ಪತಿಗಳಿಂದ ಕೂಡಿರುವ ವಿಶೇಷ ಮೋಳಕ್ಕು ಬಾಟ್ಲಿ 1ರ ರೂಪಾಯಿ 3–8–0 (ಪೇಕಿಂಗ್ ವ ಟಪ್ಪಾಲು ಹಾಸಲು ನಾಫಿ).

Sole Distributors: THE

Indian Drug & General Agencies,

23, Stingers Street G. T. MADRAS.

ಜಗತ್ತನ್ನೇ ಗೆಲ್ಲಬಲ್ಲ ರಷ್ಯದ ಮಹಾಸೇನೆ!

ನಮ್ಮ ವೈರಿಗಳು ಬಂಡಾಯದ ಹಾರವನ್ನು ನೆನೆದುಕೊಳ್ಳಲಿ. ಕಳೆದ ೨೦ ವರ್ಷಗಳಲ್ಲಿ ನಮ್ಮ ರಾಷ್ಟ್ರ ಸಾವಿರ ಪಾಲು ಹೆಚ್ಚು ಬಲವಾಗಿದೆ.

ಜನತೆಯ, ಬಡವರ, ಮಜೂರರ, ರೈತರ ರಾಷ್ಟ್ರವಾದ, ಪ್ರಪಂಚದ ಸ್ವರ್ಗವಾದ, ರಷ್ಯದ ಸೇನಾ ಶಕ್ತಿ ಆದೆಂತಹದು? ಯುರೋಪನ್ನೇ ಪುಡಿಗೂಡಿಸಲು ಮುಂದಾಗಿ, ದಿನೇ ದಿನೇ ವಿಜಯವನ್ನು ಸಂಪಾದಿಸುತ್ತಾ ಸಾಗುತ್ತಿರುವ ನಾಜಿ ಸರ್ವಾಧಿಕಾರಿ ಹಿಟ್ಲರನನ್ನು—ರಷ್ಯದ ಆಜನ್ಮ ವೈರಿಯನ್ನು—ಆತ ಈ ರಾಷ್ಟ್ರದ ಮೇಲೆ ಬಿದ್ದರೆ ಪುಡಿಗೂಡಿಸುವ ಶಕ್ತಿ ರಷ್ಯಕ್ಕಿದೆಯೇ?

ಇಂದಿನ ರಷ್ಯದ ಸೇನೆಯಾದ "ರೆಡ್—ಆರ್ಮಿ"ಯೂ, ಇತರ ರಾಷ್ಟ್ರಗಳ ಸೇನಾ ನೀತಿಯನ್ನು ಅನುಸರಿಸಿಕೊಂಡಿರದೆ, ಜನತೆಯ ಸೇನೆಯಾಗಿಯೇ ಉಳಿದಿದೆ. ಇತರ ರಾಷ್ಟ್ರಗಳ ಸೇನೆಗಳು, ಜನತೆಯೊಡನೆ ಬೆರೆತಿರದೆ, ಹೊಸತೊಂದು ಜೀವನಕ್ರಮವನ್ನೇ ಅನುಸರಿಸಿ, ವಿಚಿತ್ರ ಮಾನವ ಕೂಟದಂತೆ ಬೆಳೆಸಲ್ಪಡುತ್ತಿವೆ. ಭಾರತದಲ್ಲಿಯೂ ಈ ಕ್ರಮ.ಆದೊಂದು ರೀತಿಯ ಪರಿಸ್ಥಿತಿಗೇರಿ, ಸೈನಿಕನಿಗೆ ತನ್ನ ದೇಶ, ಜನತೆಗಳ ನೆನಪಾಗುವುದೇ ಅಪರೂಪವೆಂದಂತಾಗುತ್ತದೆ.

ರಷ್ಯದ ಸೇನೆಯು ಬರೇ ಮಿಲಿಟರಿ ಶಾಲೆಯಲ್ಲ. ಅದು ಸಂಸ್ಕೃತಿ, ನಾಗರಿಕ ಜೀವನ ವಿಧಾನಗಳನ್ನು ಅರುಹುವ ಕೇಂದ್ರವೂ ಆಗಿದೆ. ಕೆಂಪು ಸೇನೆ(ರಷ್ಯದ ಸೇನೆ)ಯ ಮುಂದಿ ಎಲ್ಲರಂತೆ, ಎಲ್ಲರೊಡನೆ ಬೆರೆತು, ನಾಗರಿಕ ಜೀವನವನ್ನು ಸಾಗಿಸುವರು. ಚುನಾವಣೆಗಳಲ್ಲಿ ಭಾಗವಹಿಸುವರು. ಅವರೆಲ್ಲಿಯೇ ಇದ್ದರೂ, ಅವರ ಮನಸ್ಸಿಗೆ ಒಪ್ಪಿದ ಪ್ರತಿನಿಧಿಗಳಿಗವರು ಓಟು ಕೊಟ್ಟು ಅವರನ್ನು ಚುನಾಯಿಸಬಹುದು.

ಯುರೋಪಿನ ವಿವಿಧ ರಾಷ್ಟ್ರಗಳ ಸೇನೆಯಂತೆ, ರಷ್ಯದ ಸೇನೆಯು, ಕಡ್ಡಾಯ ಶಿಕ್ಷಣ ಪದ್ಧತಿಯಿಂದ ಕೂಡಿದೆ. ಸಮಾಜದ ಏಳಿಗೆಗಾಗಿ ದುಡಿಯುವವರು, ಮಜೂರರು, ರೈತರು ಮಾತ್ರವೇ ಕೆಂಪು ಸೇನೆಯಲ್ಲಿ ಸೇರಲು ಅರ್ಹರು. ಇವರಿಗೆ ಕಡ್ಡಾಯ ಸೈನ್ಯ ಶಿಕ್ಷಣ ದೊರೆಯುವುದು. ಚುನಾವಣೆಗೆ ಅರ್ಹರಲ್ಲದವರೆಂದು ಪರಿಗಣಿಸಲ್ಪಟ್ಟವರಿಗೆ ಇದರಲ್ಲಿ ಎಡೆಯಿಲ್ಲ. ಅದರಿಂದಲೇ ರಷ್ಯದ ಸೇನೆಯಿಂದು ಸರ್ವವಿಧದಿಂದಲೂ ರಾಷ್ಟ್ರಕ್ಕೆ ಅತ್ಯಂತ ಅನ್ಯೋನ್ಯವಾಗಿ ಹೊಂದಿಕೊಂಡಿದೆ. ರಾಷ್ಟ್ರಕ್ಕಾಗಿ ಜೀವಕೊಡುವವರು ಬಡವರೆಂದ ಮೇಲೆ ಬಡವರಿಂದಲೇ ತುಂಬಿದ ಈ ಸೇನೆ ತಮ್ಮ ಸ್ವರ್ಗವಾದ ರಷ್ಯವನ್ನು ಉಳಿಸಿಕೊಳ್ಳಲು ಅದೆಷ್ಟು ಯತ್ನಿಸದೆಂದು ಬೇರೆ ಹೇಳಬೇಕಾಗಿಲ್ಲ. ಸೈನ್ಯದಲ್ಲಿರುವ ಪ್ರತಿಯೊಂದು ತುಕ್ಕಡಿಯೂ, ಒಂದಲ್ಲ ಒಂದು ಕಾರ್ಖಾನೆ ಅಥವಾ ಕಲೆಕ್ಟಿವ್ ಫಾರ್ಮುಗಳಿಗೆ ಹೊಂದಿಕೊಂಡಿದೆ

ರಷ್ಯದ ತರುಣನು, ತನ್ನ ೧೯ನೆಯ ಪ್ರಾಯದಲ್ಲಿ ಸೈನ್ಯ ಶಿಕ್ಷಣ ಪಡೆಯಲು ಅರ್ಹನಾಗುತ್ತಾನೆ ಕಾಲ್ಬಳದ ಸೈನಿಕನಿಗೆ ದೊರೆಯುವ ತರಬೇತಿ ೨ವರ್ಷಗಳದ್ದು; ವಿಮಾನ ಸೈನಿಕನಿಗೆ ೩ವರ್ಷ ಹಾಗೂ ನೌಕಾ ಸೇನೆಗಳಿಗೆ ೫ವರ್ಷಗಳ ತರಬೇತಿ ದೊರೆಯುತ್ತದೆ. ಯುದ್ಧ ಮಾಡಲು ಶಕ್ತರಾದ ಹಾಗೂ ಆರೋಗ್ಯವಾಂತ ಚುನಾಯಿತ ಮಂದಿಯಲ್ಲಿ, ಬರೇ ಮೂರನೇ ಒಂದರಷ್ಟು ಕೆಂಪು ಸೇನೆಗೆ ಸೇರಿಸಲ್ಪಡುವರು. ಉಳಿದವರು "ಟೆರಿಟೋರಿಯಲ್" ಸೇನೆಯಲ್ಲಿ ಸೇರಿಸಿಕೊಳ್ಳಲ್ಪಡುವರು. ಇವರಿಗೆ ವೇತನ ಸಲ್ಲುವುದಾದರೂ, ವರ್ಷಕ್ಕೆ ಕೆಲ ವಾರಗಳ ತರಬೇತಿಗೆ ಹಾಜರಾದರೆ ಇವರ ಕೆಲಸ, ಶಾಂತ

ತಾಯಂದಿರಿಗೂ ಕುಟುಂಬದವರಿಗೂ ಲೈಫ್‌ಬಾಯ್ ಸೋಪಿನ ರಕ್ಷಣೆಯು ಅಗತ್ಯವಾಗಿದೆ—ಲೈಫ್‌ಬಾಯ್ ಸೋಪಿನಲ್ಲಿ ಕ್ರಿಮಿನಾಶಕವಾದ ಆರೋಗ್ಯ ಗುಣವಿರುವುದು—ಲೈಫ್‌ಬಾಯ್ ಸೋಪಿನಿಂದ ಮೈ ತೊಳೆದುಕೊಂಡರೆ, ಅದು ಕೊಳೆಯನ್ನು ಕಳೆಯುವುದಲ್ಲದೆ, ಕ್ರಿಮಿಗಳಿಂದಾಗತಕ್ಕ ಸೋಂಕಿನ ಭಯವನ್ನೂ ತಪ್ಪಿಸುವುದು....



L. 16-86 KN

LEVER BROTHERS (INDIA) LIMITED

ರಷ್ಯದ ವಿಶೇಷವೆಂದರೆ ಕಡ್ಡಾಯ ಸೈನ್ಯ ಶಿಕ್ಷಣವನ್ನು ವಿರೋಧಿಸುವವರಾರೂ ಇಲ್ಲ. ಇದಕ್ಕೆ ಕಾರಣಗಳೆಂದರೆ, ಉತ್ಕೃಷ್ಟತಮ ಪ್ರಚಾರ; ಹಾಗೂ ಸೇನೆಗೆ ಸೇರಿಸುವ ಅಧಿಕಾರಿಗಳು, ಆಳುಗಳಂತೆ ಜನತೆಯೊಡನೆ ಬೆರೆತು. ಅವರಿಗೆ ಕೆಂಪು ಸೇನೆಯ ಅಗತ್ಯ, ಶಿಕ್ಷಣ ವಿಚಾರ, ಜೀವನ ಸೌಲಭ್ಯ ಮುಂತಾದುವುಗಳನ್ನು ಅರುಹಿ, ಅವರ ವಿವಿಧ ಪ್ರಶ್ನೆಗಳನ್ನು ಉತ್ತರಿಸಿ, ಸಮಸ್ಯೆಗಳನ್ನು [redacted] ಅವರಾಗಿಯೇ ಸೇನೆಯನ್ನು ಸೇರುವಂತೆ ಮಾಡುವ ಆದರ್ಶ ಕಾರ್ಯಕ್ರಮ!

ಸಹೋದರನೊಬ್ಬನು, ಈ ರೀತಿಯಿಂದ ಅಧಿಕಾರಿ ಎಂಬುದನ್ನೇ ಮರೆತು ವರ್ತಿಸುವಾಗ, ಯಾರು ತಾನೇ ಸೇನೆಗೆ ಸೇರಲು ನಿರಾಕರಿಸಬಲ್ಲರು? ಅಲ್ಲದೆ, ಸೇನಾ ತುಕ್ಕಡಿಗಳ ನಾಯಕರೂ, ಸೈನ್ಯಾಧಿಕಾರಿಗಳೂ ಸೈನಿಕರನ್ನು ಗೌರವದಿಂದಲೂ, ಅಭಿಮಾನದಿಂದಲೂ ಕಾಣುವರು. ಇಡೀ ಕೆಂಪು ಸೇನೆಯಲ್ಲಿ, ಸಾಮಾನ್ಯ ಕಾರ್ಯವನ್ನು ಮಾಡುವವನಿಂದ ಹಿಡಿದು ಸೇನಾ ನಾಯಕನ ತನಕ, ಎಲ್ಲೆಲ್ಲೂ ಸಮಾನತೆಯನ್ನು ಕಾಣಬಹುದು. ಸೈನಿಕನಿಗಿರುವಷ್ಟೇ ಗೌರವ ಆ ಸೇನಾನಾಯಕನಿಗೆ! ಸೈನ್ಯಾಧಿಕಾರಿಗೆ ದೊರೆಯುವ ಅಧಿಕಾರದ ಮೇಲ್ಮೈ ಆತನ ಜಾಣ್ಮೆಯ

ಇಂತಹ ಸಮಾನದೃಷ್ಟಿಯ ಸೇನೆ ಅಸಮಾನ ಶಕ್ತಿಯುದಾಗಬೇಕಾದರೆ ಅತ್ಯುಚ್ಚ ತರದ ಶಿಕ್ಷಣ ಅಗತ್ಯವೆಂದು ತೋರದಿರದು. ನಿಜ! ಕೆಂಪು ಸೇನೆಯ ಸೈನಿಕನಾಗಲೀ, ನಾಯಕನಾಗಲೀ, ಅಧಿಕಾರಿಯಾಗಲೀ, ಸಕಲರೂ ಅತ್ಯುಚ್ಚ ರೀತಿಯ ಶಿಕ್ಷಣವನ್ನು ಪಡೆಯುವರು. ಈ ಸೈನಿಕರಿಗೆ ಅವರದೇ "ಕ್ಲಬ್"ಗಳೂ, ಶಾಲಾ ಕೋಣೆಗಳೂ, ಥಿಯೇಟರ್‌ಗಳೂ, ಪುಸ್ತಕ ಭಂಡಾರಗಳೇ ಮುಂತಾದವುಗಳಿವೆ. ರಷ್ಯದ ರಕ್ಷಣಾ ಸೇನೆಗೆ ಸಂಬಂಧಿಸಿದ ಸಹಸ್ರಾರು ಪುಸ್ತಕ ಭಂಡಾರಗಳಲ್ಲಿ ಇರುವ ಒಟ್ಟು ಪುಸ್ತಕಗಳ ಸಂಖ್ಯೆ ೨೦ ಮಿಲಿಯಕ್ಕೆ ಕಡಿಮೆಯಾಗದೆಂದು ತಿಳಿದುಬಂದಿದೆ.

ಅವಿದ್ಯಾವಂತನಾದವನೇ ಆದರೂ, ಸೇನೆಯನ್ನು ಸೇರಿದನೆಂದರೆ, ಆತನಿಗೆ ಆತನ ಮಾತೃ ಭಾಷೆಯನ್ನೂ, ರಷ್ಯನ್ ಭಾಷೆಯನ್ನೂ ಓದಲೂ, ಬರೆಯಲೂ ಕಲಿಸಲಾಗುವುದು. ಈ ಶಿಕ್ಷಣವು ಸೈನ್ಯ ಶಿಕ್ಷಣದ ಜೊತೆಯಲ್ಲೆ ಸಾಗುತ್ತಲಿರುವುದು ಸೈನಿಕರಿಗೆ ಚರಿತ್ರೆ, ಭೂಗೋಳ ಮಾತ್ರವೇ ಅಲ್ಲದೆ ಆರ್ಥಿಕ ವಿಚಾರ, "ಮಾರ್ಕ್ಸ್" ತತ್ವಗಳನ್ನೂ ಅತ್ಯಂತ ಸುಲಭ ಹಾಗೂ ಲಲಿತ ಭಾಷೆಯಲ್ಲಿ ಹೇಳಿಕೊಡಲಾಗುವುದು. ಎಲ್ಲಾ ಮಂದಿಗೂ ಹಾಡಲು ಕಲಿಸುತ್ತಾರೆ. ಸಂಗೀತ

ದವುಗಳನ್ನು ಕಲಿಯಲೆಳಸುವವರು ಅವುಗಳನ್ನೂ ಕಲಿಯಬಹುದು!

ಸೈನಿಕರಿಗೆ ಸೈನ್ಯ ಶಿಕ್ಷಣವಷ್ಟೇ ಸಲ್ಲುತ್ತಿಲ್ಲ. ಅವರಿಗೆ ಸಕಲ ವಿಚಾರದಲ್ಲೂ ತರಬೇತಿ ದೊರೆಯುತ್ತಿದೆ. ಕೃಷಿ ಮುಂತಾದ ವಿಚಾರಗಳಲ್ಲಿ ಮಾತ್ರವೇ ಅಲ್ಲದೆ ಕೈಗಾರಿಕೆ, ಮಾರ್ಗ, ಸೇತುವೆ, ರೈಲ್ವೆ, ಗೋಡೆರಚನೆ, ಟೆಲಿಗ್ರಾಫ್—ಟೆಲಿಫೋನ್ ಸಂಬಂಧ ಸ್ಥಾಪನೆ ಮುಂತಾದ ಹಲವಾರು ಕೆಲಸಗಳಲ್ಲಿಯೂ ಇವರಿಗೆ ತರಬೇತಿ ಇತ್ತು, ಅತ್ಯಗತ್ಯದ ಸಂದರ್ಭಗಳಲ್ಲಿ ಇವರಿಂದ ಕೆಲಸ ಮಾಡಿಸಲಾಗುತ್ತದೆ ಇಂತಹ ಕೆಲಸಗಳೆಂದರೆ ಈ ಸೈನಿಕರಿಗೆ ವಿಶೇಷ ಆನಂದ. ಪ್ರತಿವರ್ಷವೂ ೨ ಅಥವಾ ಹೆಚ್ಚಿಗೆ ವರ್ಷಗಳ ತರಬೇತಿಯನ್ನು ಪೂರೈಸಿದ ಸುಮಾರು ಅರ್ಧ ಮಿಲಿಯ ಸೈನಿಕರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿ, ಹೊಲದಲ್ಲೋ—ಕಾರ್ಖಾನೆಗಳಲ್ಲೋ ಕೆಲಸ ಆರಂಭಿಸತೊಡಗುವರು. ರಷ್ಯದಲ್ಲಿನ ನಗರ, ಪಟ್ಟಣ, ಹಳ್ಳಿಗಳ ಒಟ್ಟು ಸಂಖ್ಯೆ ಸುಮಾರು ೬ ಲಕ್ಷ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ ಸರಾಸರಿ ೨ ಅಥವಾ ೪ ಮಂದಿಯಂತೆ ತರಬೇತಾದ ಸೈನಿಕರು ಪ್ರತಿಯೊಂದು ಹಳ್ಳಿಯಲ್ಲಿ, ಬಾಲ್ಟಿಕ್‌ನಿಂದ ಪೆಸಿಫಿಕ್ ಸಾಗರದ ತನಕ ರಷ್ಯದಲ್ಲಿ ನೆಲೆನಿಂತಿದ್ದಾರೆ ಎನ್ನಬಹುದು.

ಮೈಸೂರು

ಸಾಬೂನು

ಇಪ್ಪತ್ತು ವರ್ಷದ ತಯಾರಿಕೆ ಅನುಭವ

ನೈಮರ್ಲ್ಯವು

ಒಳ್ಳೆ

ಅಭ್ಯಾಸದ ಪರಿಣಾಮ

ನಿಮ್ಮ ಮೈ ಮತ್ತು ಬಟ್ಟೆಗಳನ್ನು ಶುಚಿ ಮಾಡಲು

ಮೈಸೂರು

ಸಾಬೂನುಗಳು ಕಾದಿವೆ.

ಮೈಸೂರು ಸಾಬೂನುಗಳು ಸರಕಾರದ ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ ಬೆಂಗಳೂರಿನಲ್ಲೇ ತಯಾರಾಗುತ್ತಿವೆ.



ಮೈಸೂರು

ಸ್ಯಾಂಡಲ್ ಸೋಪ್

ವೆಂಕಟಗಿರಿ ಮಹಾತ್ಮೆ

೫೯೪ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಮುದ್ದಾದ

ಮುದ್ರಣ.

ಬೆಲೆ

ರೂಪಾಯಿ

೧—೮—೦.

ಟಪ್ಪಾಲು

ಹಾಸಲು

ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುಕೂಲವಾದ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1-8-0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಸಾವಕಾರ

ಶ್ರೀನಿವಾಸ ರಂಗ ಪೈ

ವಜ್ರಗಳು

ಸಾವಕಾರ ಮಹಾಲ್,

ಮಂಗಳೂರು.

ಸಾಮ್ರಾಜ್ಯದ ಧೈರ್ಯ ಹೆಚ್ಚುತ್ತಲಿದೆ

ಬ್ರಿಟಿಷ್ ಮಂತ್ರಿಮಂಡಲ ಇನ್ನೂ ನಮಗೆ ಧೈರ್ಯ ಕೊಡಲಿ

ಬ್ರಿಟನ್ನಿನ ಗೆಲುವೇ ಭಾರತದ ಏಳಿಗೆಯ ತಳಹದಿ
ಹಿಟ್ಲರನ ನಾಶವೇ ಜಗ[redacted] ಮಹದಾಶೆ

ಬ್ರಿಟಿಷ್ ಸಾಮ್ರಾಜ್ಯದ ವಿವಿಧ ಜನಾಂಗಿಕರಿಂದು ಬ್ರಿಟನ್ನಿನ ಅಸಮಾನ, ಅಜೇಯ ಶಕ್ತಿಯ ಕುರಿತಾಗಿ ಸಂಶಯಗೊಳ್ಳುವಂತೆ ಜರ್ಮನಿ ತನ್ನ ಬಲೆ ಹರಡುವ ಯತ್ನಮಾಡುತ್ತಿದೆ. ದಿನೇ ದಿನೇ ಜಗತ್ತಿಗೆ ಭಾಷಣಗಳ ಮೂಲಕ, ಸುದ್ದಿಗಳ ಮೂಲಕ ಧೈರ್ಯ ಹೇಳುತ್ತಿರುವ ಬ್ರಿಟಿಷ್ ರಾಜಕಾರಣಿಗಳು, ಕರ್ತವ್ಯತಃ ಇನ್ನೂ ತಮ್ಮ ಆ ಪ್ರಾಬಲ್ಯತೆಯ ವಿಚಾರದಲ್ಲಿ ಮತ್ತಷ್ಟು ಧೈರ್ಯ ಹೇಳಬೇಕಾಗಿದೆ. ಅಲ್ಲದಿದ್ದರೆ, ಇದರಿಂದ ಭಾರತದ ಸರಕಾರಕ್ಕೂ, ಸಾಮ್ರಾಜ್ಯಕ್ಕೂ ಕೆಲ ಮಟ್ಟಿಗೆ ತೊಂದರೆಯಿದೆ!

ದೇಶದಲ್ಲಿ ವಿವಿಧ ರೀತಿಯಿಂದ ಹುಟ್ಟಿ ಬೆಳೆಯುತ್ತಿರುವ ಸತ್ಯವಲ್ಲದ ಸುದ್ದಿಗಳಿಗೆ ಕೆಲಕೆಲವು ಅವಿದ್ಯಾವಂತರು ಮರುಳಾಗಿ, ಬ್ರಿಟಿಷರ ಶಕ್ತಿಯ ಕುರಿತಾಗಿ ಸಂಶಯಗೊಂಡಿರುವರೆಂಬುದು ಸರಕಾರಕ್ಕೇ ತಿಳಿದ ವಿಚಾರವಾಗಿದೆ. ಅದಕ್ಕಾಗಿ ಇಂಡು ವಿವಿಧ ರೀತಿಯ ಪ್ರಚಾರ ಆರಂಭವಾಗಿದೆ. ಸಂಶಯಗಳು ನಾಶವಾಗಿ, ಧೈರ್ಯವು ಮುಂದಿಯಲ್ಲಿ ತಲೆದೋರಬಹುದೆಂಬ ನಂಬುಗೆ ಸರಕಾರಕ್ಕಿರುವಂತೆ ಜನತೆಗೂ ಇದೆ.

ಆದರೆ, ಬ್ರಿಟನ್ ಮಾತ್ರ ಭಾರತದ ಕೇಳಿಕೆಗಳನ್ನು ಮನ್ನಿಸದೆ, ನೈಜರೀತಿಯಿಂದ ಧೈರ್ಯ ಕೊಟ್ಟು ನಿಲ್ಲಿಸದೆ ಸುಮ್ಮನಾಗಿದೆ. ಭಾರತೀಯರ ಸೇನೆಯನ್ನು ತಕ್ಕ ರೀತಿಯಲ್ಲಿ ತಯಾರಿಸುವ ಬದಲು, ಬ್ರಿಟಿಷರ ಸೇನೆಯನ್ನೇ ಹೆಚ್ಚಿಸುವ ಇಚ್ಛೆ ತೋರುತ್ತಿದೆ.

ಇನ್ನೊಂದೆಡೆಯಿಂದ, ಬ್ರಿಟನ್, ಭಾರತೀಯ ಸೇನೆಗಳ ಸಹಾಯದಿಂದಲೂ ವ್ಯಾಪ್ತಿಯನ್ನು ಬೆಳೆಸಿದ ಚೀನಾದಲ್ಲಿನ ಕೆಲ ನಗರಗಳಿಂದ ಸದ್ಯ ಹಿಂತಿರುಗುವ ಲಕ್ಷಣಗಳು ತೋರುತ್ತಿದೆ. ಸಾಮ್ರಾಜ್ಯವನ್ನು ರಕ್ಷಿಸಬಲ್ಲ, ಭಾರತದ ಅಸಮಾನ ರಕ್ಷಣೆಯಾದ ಸಿಂಗಾಪುರ ನೌಕಾ ನಿರ್ಮಾಣದ ಪ್ರಕಟಣೆಯನ್ನು ಸಾಕಷ್ಟು ಮಾಡಿಯೂ, ಇದೀಗ ತಾನು ಯುದ್ಧಾಸಕ್ತವಾಗಿರುವುದರಿಂದ ಜಪಾನರನ್ನು ಒಲಿಸಿಕೊಳ್ಳುವ ಕಾರ್ಯವೆಸಗಿದೆ. ಇದಕ್ಕಾಗಿ ಜಪಾನರಿಗೆ ಬಾಗಿ ಬರ್ಮಾ ಮಾರ್ಗವನ್ನು ಮುಚ್ಚಿದೆ. ಇದರ ಪರಿಣಾಮವೆಂದರೆ,-ಜಪಾನರ ಧೈರ್ಯ ಹೆಚ್ಚುವುದಲ್ಲವೇ?

ಇನ್ನು ತಾನು "ಡೆಮೊಕ್ರೆಸಿ"ಗಾಗಿ ಕಾದುತ್ತಿದ್ದೇನೆನ್ನುವ ಬ್ರಿಟನಿನ ಮಾತಿನ ಸತ್ಯತೆಯನ್ನೇ ಜನಗಳು ತೂಗಿ ನೋಡಿದಲ್ಲಿ ಅದರ ಪರಿಣಾಮವೇನೆಂದು ಹೇಳಲು ಬಾರದು. ತಾನು "ಡೆಮೊಕ್ರೆಸಿ"ಗಾಗಿ ಕಾದುತ್ತಿದ್ದೇನೆಂದು ಹೇಳುವ ಬ್ರಿಟನ್ ಭಾರತದ ಕೇಳಿಕೆಗಳನ್ನು ಮನ್ನಿಸಲಿಲ್ಲ; ಮಾತ್ರವಲ್ಲ; "ಡೆಮೊಕ್ರೆಸಿ"ಯಾದ ಚೀನಕ್ಕೆ ಈಗ ನ್ಯಾಯವನ್ನೂ ಮಾಡಿದ ಹಾಗಾಗಲಿಲ್ಲ. ಇದರಿಂದಾಗಿ; ಬ್ರಿಟನ್ನು ಭಾರತ ಹಾಗೂ ಚೀನಾ ದೇಶಗಳ ಸಹಕಾರ, ಸಹಾನುಭೂತಿಗಳನ್ನು ಮಾತ್ರವೇ ಅಲ್ಲದೆ, ಜಗತ್ತಿನ ಹಲವು ಕಪ್ಪು ಹಾಗೂ ಬಿಳಿ ಬಣ್ಣವಲ್ಲದ ಮಂದಿಯ ಸಹಾನುಭೂತಿಯನ್ನೂ ಕಳೆದುಕೊಳ್ಳಬಹುದೇ ಎಂಬ ಸಂದೇಹಕ್ಕೂ ಎಡೆಕೊಟ್ಟಿದೆ.

ಇಂತಹ ಪರಿಸ್ಥಿತಿಗಳಿಂದಾಗಿ, ಬ್ರಿಟಿಷ್ ಸಾಮ್ರಾಜ್ಯದ ಏಳಿಗೆಗೆ, ಮೇಲ್ಮೆಗೆ, ವಿಜಯಕ್ಕಾಗಿ ಸಹಾಯಮಾಡಲು ಮುಂದಾದವರಿಗೆ ಸಂದೇಹದ ತೊಡಕುಗಳು ಬರುವಿಂತಾಗಿವೆ. ಬ್ರಿಟಿಷ್ ಮಂತ್ರಿಮಂಡಲವು ಮಾತನ್ನು ಕಡಿಮೆಮಾಡಿ, ಕರ್ತವ್ಯದ ಹಾದಿಯನ್ನು ಇನ್ನಷ್ಟು ಫರಿಷ್ಕರಿಸಲು ಮುಂದಾದರೆ, ಅದೆಂತಹ ಸಾಮ್ರಾಜ್ಯ ವಿರೋಧಿಯನ್ನೂ, ಸೇವೆಗೆ ಮುಂದಾಗುವಂತೆ ಮಾಡಲು ಸುಲಭದಲ್ಲಿ ಶಕ್ತವಾಗಬಹುದು. ಬ್ರಿಟಿಷ್ ಸಾಮ್ರಾಜ್ಯದ ಗೆಲುವೇ ಭಾರತದ ಏಳಿಗೆಯ ಸಾಧನವೆಂಬುದು ಎಲ್ಲರಿಗೂ ತಿಳಿಯದುದಲ್ಲ. ಆದುದರಿಂದ ಅವರ ಸಹಕಾರವನ್ನು ಸಂಪಾದಿಸುವುದೂ ಕಷ್ಟವಲ್ಲ! ಭಾರತೀಯರೂ ಅಂತೇ ನೆರವಾಗುವರೆಂಬ ಧೈರ್ಯ ನಮಗಿದೆ.

ನಿಮಗೆ ಬೇಕಾಗುವ ಎಲ್ಲಾ ತೆರನ ರಬ್ಬರ್ ಸ್ಟಾಂಪ್

ಮೊನೋಗ್ರಾಮ್ ಮೊಹರುಗಳು,

ಪೇದೆಗಳ ಬೇಜ್ ಬೆಲ್ಟ್, ತರವಾರಿ ಸ್ಟೈನ್ ಬೋರ್ಡ್ ಇತ್ಯಾದಿಗಳಿಗೆ

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,

(ಸ್ಥಾಪನೆ: 1926)

A 17, [illegible]ಲ್ಮಠ. ರಸ್ತೆ ——— ಮಂಗಳೂರು.

(ಮೈಸೂರು ಸರಕಾರಿಕ್ ಸ್ಟೋರ್ಸ್ ಪರ್ಚೇಸ್ ಕಮಿಟಿಯ ಅಧಿಕೃತ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ)

ಮೇಹಧ್ವಂಸಿನಿ

ಗುಪ್ತವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರಚಿಕಿತ್ಸೆ ಅನಾವಶ್ಯಕ!!



ಶರೀರವನ್ನು ಕೃಶಿಸಿ ಮಾನವನ ಜೀವಶ್ರವ ಗೈಯುತ್ತಿರುವ ಬಿಳುಪು, ಕೆಂಪು, ಪರಂಗಿಹುಣ್ಣು, ಮೇಹಗಡ್ಡೆ, ಮೇಹಜ್ವರ, ಚರ್ಮವ್ಯಾಧಿ, ಕೀಲು ಕೀಲುಗಳ ನೋವು, ಅತಿಮೂತ್ರ ವಗೈರೆ ಚಿಹ್ನೆಗಳನ್ನು "ಮೇಹಧ್ವಂಸಿನಿ"ಯು ಶೀಘ್ರವಾಗಿ ಖಂಡಿಸಿ ರಕ್ತಶುದ್ಧಿಮಾಡಿ ನರಗಳಿಗೆ ಶಕ್ತಿಕೊಡುವುದು. ಸೇವಿಸುವುದಕ್ಕೆ ಹಿತಕರ. ಪ್ರತಿಯೊಂದು ಹೊತ್ತಿ[redacted]ದಲ್ಲಿಯೂ ಅದ್ಭುತ ಗುಣಪಿದೆ. ದೊಡ್ಡ ಸೀಸೆಗೆ ರೂ. ೪—೦—೦, ಮೂಡಿಯಂ ರೂ. ೨—೪—೦, ಚಿಕ್ಕ ಸೈಜು ರೂ. ೧—೨—೦.

ಲಸ್ಪರ್‌ದಂತಮಂಜನ

ದಿನೇವಹಿ ಉಪಯೋಗಿಸುತ್ತ ಬಂದಲ್ಲಿ ದಂತ ಚಿಕಿತ್ಸೆ ಅನಾವಶ್ಯಕ. ಖಂಡಿತವಾಗಿಯೂ ಒಂದೆರಡು ಸಲ ಪ್ರಯೋಗಿಸುವುದರಲ್ಲಿ ಹಲ್ಲಿನ ರಕ್ತವು ನಿಲ್ಲುವುದು. ವಸಡಿನ ಊದು ಬಾಯಿ ದುರ್ಗಂಧವು ನಾಶವಾಗುವುದು. ಹಲ್ಲುಗಳು ಬಹಳ ಶುಭ್ರವಾಗುವುದಲ್ಲದೆ ದೃಢಪಡಿಸಲ್ಪಡುವವು. ಬಹಳ ಬೆಲೆಯಾಗುವ ಟೂತ್ ಪೇಸ್ಟಿನ ಗುಣಾತಿಶಯಗಳು ಇದರಲ್ಲಿವೆ.

ಕ್ರಯ ಪಟ್ಟಿ 1ಕ್ಕೆ 0-1-0.

ಲಸ್ಪರ್ ಮ್ಯಾನುಫ್ಯಾಕ್ಚರ್ರಿಂಗ್ ಕಂಪೆನಿ, ಡಿಪೋ: ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಏಜೆಂಟ್ಸ್:- ಶ್ರೀನಿವಾಸ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್.

Sole Agents:—Basel Mission Press, Mangalore.

ಸಬ್ ಏಜೆಂಟ್ಸ್:- Messrs. ಉಡುಪಿ ಮಿಷನ್ ಷಾಪ್, ಸಂತೆಕಟ್ಟೆ, ಉಡುಪಿ.
Messrs. ಭಕ್ತಾ ಅಂಡ್ ಬ್ರದರ್ಸ್, ಕಾಸರಗೋಡು.
ವಿ. ವಿ. ಶೆಣೈ, ಕಾರ್ಕಳ.
ಬಿ. ಗೋವಿಂದ ಪಾಂಡುರಂಗ ಭಂಡಾರಿ, ಪುತ್ತೂರು.

ಕಾರ್ಕಳ

ಶಾಲೆಗೆ ರಣವೀರರ ಪ್ರವೇಶ

ಅಸ್ಪೃಶ್ಯ ಜಾತಿಗೆ ಸೇರಿದ ಇಲ್ಲಿಯ ರಣವೀರ ಬಾಲ-ಬಾಲಕಿಯರಿಗೆ, ಶ್ರೀ ವೆಂಕಟ್ರಮಣ ಹೈಯರ್ ಎಲಿಮೆಂಟರಿ ಶಾಲೆಯವರು ಪ್ರತ್ಯೇಕವಾದ ಪ್ರೋತ್ಸಾಹದೊಂದಿಗೆ ಅಲ್ಲಿ ಪ್ರವೇಶ ಕೊಟ್ಟಿರುವರು. ಶಾಲಾ ಮೆನೇಜರ ಶ್ರೀ. ಕೆ. ಕೃಷ್ಣ ಪೈಯವರು, ಈ ಬಡ ಮಕ್ಕಳಿಗೆ ತಮ್ಮ ಸ್ವಂತ ಖರ್ಚಿನಿಂದ ಸ್ಲೇಟು, ಪುಸ್ತಕಾದಿಗಳನ್ನು ಒದಗಿಸಿ ಕೊಟ್ಟಿರುವದು ಅಭಿನಂದನೀಯ.

Mangalore Municipality

NOTICE

Auction sale-Building & site-T. S. No. 13/2B—Casba Bazaar village-15th Court Ward-Karnad Sadashiva Rao Road.

It is hereby notified to the publice that the land and building bearing T. S. No. 13/2B of Casba Bazaar village No. 15 Court Ward along the Karnad Sadashiva Rao Road (land measuring about 9029 sq. ft. with a tiled and storied building with out houses) will be sold by public auction at 9 a. m. on 7th August 1940 at site by the under signed. The terms of sale and other particulars of the property can be obtained at the municipal office during office hours or can be seen in the District Gazette.

M. Narayana Shenoy,
Commissioner,
Mangalore Municipality.

Municipal Office,
Mangalore, 18—7—'40.

ಮಂಗಳೂರು ಮುನಿಸಿಪಾಲಿಟಿ.

ನೋಟೀಸು

ಏಲಂ ಇಸ್ತಿಹಾರು - ಕಟ್ಟೋಣ ಮತ್ತು ಸ್ಥಳ—ಟಿವನ್ ಸರ್ವೆ ನಂಬ್ರ 13/2B—ಕಸಬ ಬಜಾರು ಗ್ರಾಮ—15ನೇ ಕೋರ್ಟ್ ವಾರ್ಡು-ಕಾರ್ನಾಡು ಸದಾಶಿವ ರಾವು ರಸ್ತೆ.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿವುದೇನೆಂದರೆ—ಕಾರ್ನಾಡು ಸದಾಶಿವ ರಾವು ರಸ್ತೆ ಬಳಿ 15ನೇ ಕೋರ್ಟು ವಾರ್ಡಿಗೆ ಸೇರಿದ ಕಸಬ ಬಜಾರು ಗ್ರಾಮು—ಟವನ್ ಸರ್ವೆ ನಂಬ್ರ 13/2Bಯಲ್ಲಿರುವ, 9029 sq. ft. ವಿಸ್ತೀರ್ಣದ ಸ್ಥಳ ಮತ್ತು ಹಂಚು ಚಾವಣಿಯ ಉಪ್ಪರಿಗೆ ಮನೆ ವ ಉಪಕಟ್ಟಡಗಳನ್ನು ತಾರೀಕು 7—8—'40ನೇ ಬುಧವಾರ ಬೆಳಿಗ್ಗೆ 9 ಗಂಟೆಗೆ ಸರಿಯಾಗಿ ಸದ್ರಿ ಸ್ಥಳದಲ್ಲಿ ಈ ಕೆಳಗೆ ದಸ್ತಖತು ಹಾಕಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಮಿನ ಶರ್ತಗಳನ್ನು ಮತ್ತು ಇತರ ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ವಿಚಾರಿಸಬಹುದು. ಅಥವಾ ಜಿಲ್ಲಾ ಗಜೇಟಿನಲ್ಲಿ ಕಾಣಬಹುದು.

ಯಂ. ನಾರಾಯಣ ಶೆಣೈ,
ಕಮಿಶನರ್.

ಮುನಿಸಿಪಲ್ ಆಫೀಸು,
ಮಂಗಳೂರು, ತಾ. 18-7-'40.

ಇದುವೆ ಮದುವೆ!

[೨ನೇ ಪುಟದಿಂದ]

'ಇಲ್ಲ. ಸುಖಜೀವನಕ್ಕೆ ತಕ್ಕಷ್ಟು ಸಂಪಾದಿಸಿ ಠೇವಣಾತಿ ಇಡುವ ವರೆಗೆ, ಲಗ್ನ ಬೇಡವೆಂದಿದ್ದೆ. ಈಗ ಜೀವನಕ್ಕೆ ತಕ್ಕಷ್ಟು ಆನುಕೂಲವಾಗಿದೆ. ಯೋಗ್ಯಳಾದವಳು ದೊರಕಿದರೆ ಮದುವೆಯಾಗುವ ಮನಸ್ಸು ನನಗಿದೆ.'

'ಹಾಗಾದರೆ ಸರಿ; ನನ್ನ ಅಭಿಪ್ರಾಯವೂ ಅಷ್ಟೇ. ಒಂದು ವೇಳೆ ನನಗೂ ತಮಗೂ ಈ ದಾಂಪತ್ಯದ ಋಣಾನುಸಂಬಂಧವೇನಾದರೂ ಇದ್ದರೆ, ನಮ್ಮ ಮುಂದಿನ ಜೀವನವೂ ಸುಖವಾಗಿ ಸಾಗಬಹುದೆಂದು ತೋರುತ್ತಿದೆ.'

'ನನಗೂ ಹಾಗೇ ತೋರುತ್ತಿದೆ. ದೇವತಾನುಗ್ರಹದಿಂದ ನೀವೂ ಡಾಕ್ಟರೀ ವೃತ್ತಿಯಲ್ಲಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಿಟ್ಟಿದ್ದೀರಿ. ನಾನೂ ವ್ಯಾಪಾರದಲ್ಲಿ ಸಾಕಷ್ಟು ಹಣ ದುಡಿದು ಹಾಕಿದ್ದೇನೆ. ಒಂದು ವೇಳೆ ನಾವಿಬ್ಬರೂ ಮುಂದೆ ಯಾವ ಉದ್ಯೋಗವನ್ನೂ ಮಾಡದೆ, ಸುಮ್ಮನೆ ಕುಳಿತು, ಈಗ ಸಂಪಾದಿಸಿರುವುದನ್ನೇ ತಿಂದರೂ, ನಮಗೆ ಯಥೇಷ್ಟ ಸಾಕು!'

'ನಿಜ; ನಿಜ. ಆದರೆ ಮದುವೆಯಾದ ಮೇಲೂ ನಾನು ಡಾಕ್ಟರಿ ಉದ್ಯೋಗ ಮಾಡುವುದು ನಿಮಗೆ ಗೌರವವೇ? ಆಗ ನಾನು ಮನೆಯಲ್ಲಿಯೇ ಇರಬೇಕಾದ ಗೃಹಿಣಿಯಾಗಬೇಕಾಗುವುದಿಲ್ಲವೇ?'

'ಅದೂ ನಿಜವೇ. ಆಗಲಿ; ಅದಕ್ಕೇನು? ಹೇಗೆ ಬೇಕಾದರೂ ಮಾಡೋಣ; ನಮ್ಮೊಳಗೆ ಏರ್ಪಡಿಸಿಕೊಳ್ಳೋಣ!'

* * *

ದಿನವೆಲ್ಲಾ ಇಬ್ಬರೂ ಯೋಜನೆಯಲ್ಲಿಯೇ ಕಳೆದರು. ದುಡ್ಡಿದ್ದ ಗಂಡನನ್ನು ಸಂಪಾದಿಸಬೇಕೆಂದು ಲೇಡೀ ಡಾಕ್ಟರೂ, ಮದುವೆಯಾಗಿ ಆ ಹೆಂಡತಿಯ ದುಡ್ಡನ್ನು ಹೊಡೆದು ಹಾಕಬೇಕೆಂದು ಸಿಂಗಪುರದ ಸಾಹುಕಾರರೂ ಬಹು ದೀರ್ಘವಾಗಿ ಆಲೋಚಿಸಿದರು. ಇಬ್ಬರೂ ಪಾಪರಿಗಳೆಂದು ಅವರಿಗೊಮ್ಮೆಯೂ ಹೊಳೆಯದೆ ಹೋಯಿತು.

ಅಂದು ಮಧ್ಯಾಹ್ನ ಶ್ರೀ. ಪುರುಷೋತ್ತಮ ದಾಸರು ಒಂದು ಉಪಾಯ ಹುಡುಕಿ ತೆಗೆದರು. ಅವರ ಕೈಯಲ್ಲಿದ್ದ ದುಡ್ಡಾಗಲೇ ಖರ್ಚಾಗುತ್ತ ಬಂದಿತ್ತು. ಮರುದಿನ ಹೋಟ್ಲಿಗೆ ಕೊಡಲಿಕ್ಕೆ ಅವರಲ್ಲಿ ದುಡ್ಡಿರಲಿಲ್ಲ. ಅದಕ್ಕಾಗಿ ಅವರು ಲೇಡಿ ಡಾಕ್ಟರರಿಗೊಂದು ಪತ್ರ ಬರೆದು 'ಪೋಸ್ಟ್' ಮಾಡಿದರು. ಅದರ ಸಾರಾಂಶ ಹೀಗೆ:—

'ಪ್ರಿಯ ಸುಲೋಚನಾ ದೇವಿ, ನಾವು ಮದುವೆಯಾಗುವುದೇನೋ ನಿಷ್ಕರ್ಷೆಯಾದ ಹಾಗಾಯಿತು. ಆದರೆ ಇದು ದೊಡ್ಡ ಪಟ್ಟಣ; ಖರ್ಚು ವೆಚ್ಚ ಹೆಚ್ಚು. ನೀವಂತೂ ಮದುವೆಯಾದ ಮೇಲೆ ಸಂಪಾದಿಸುವುದು ನ್ಯಾಯವಲ್ಲ. ಹಾಗಿರುತ್ತ ನಾನಾದರೂ ಸಂಪಾದಿಸದೆ ಸುಮ್ಮನಿರಲಾದೀತೇ? ಆದ್ದರಿಂದ ಇಲ್ಲೊಂದು ನನ್ನ ವ್ಯಾಪಾರದ ಶಾಖೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ್ದೇನೆ.

'ಈ ಶಾಖೆಯ ಸ್ಥಾಪನೆಯ ಆಲೋಚನೆಯಾದದ್ದು ನಮ್ಮ ಮದುವೆಯ ನಿರ್ಧಾರವಾದ ಮೇಲೆ. ಇಲ್ಲಿಗೆ ಬರುವಾಗ ನನಗೆ ಮದುವೆಯ ಆಲೋಚನೆಯಾಗಲೀ, ಶಾಖೆಯ ಸ್ಥಾಪನೆಯಾಗಲೀ ಇರಲಿಲ್ಲವಾಗಿ ನಾನು ಅದಕ್ಕೆ ಅವಶ್ಯವಿರುವ ದುಡ್ಡು ಇಲ್ಲಿಗೆ ತರಲಿಲ್ಲ. ಬೇಂಕು ಠೇವಣಾತಿಯ ದಾಖಲೆಗಳು ನನ್ನಲ್ಲಿ ಇದ್ದರೂ, ಆದರ ಶಾಖೆ ಇಲ್ಲಿ ಇಲ್ಲದಿರುವ ಕಾರಣ, ಆ ದುಡ್ಡನ್ನು ಇಲ್ಲಿ ಪಡೆಯುವ ಹಾಗಿಲ್ಲ.

'ಆದುದರಿಂದ ನೀವೀಗ ನನಗೆ ೫೦೦ ರೂಪಾಯಿಗಳ ಸಹಾಯ ಮಾಡಬೇಕು. ಗಂಡ ಹೆಂಡಿರ ಲೆಕ್ಕಾಚಾರವೆಂದು ನೀವಿದನ್ನು ಭಾವಿಸಬಾರದು. ಬಡ್ಡಿ ಸಹಿತ ಆ ಹಣವನ್ನು ಹಿಂದಿರುಗಿಸುತ್ತೇನೆ. ನನ್ನಲ್ಲಿನ ದಾಖಲೆಗಳನ್ನು ಸಿಂಗಪುರದ ಬೇಂಕಿಗೆ ಕಳುಹಿಸಿ, ಅಲ್ಲಿಂದ ಅವರು "ಇನ್ಶೂರ್"ನ ಮೂಲಕ ದುಡ್ಡು ಕಳುಹಿಸಲು ಅಗತ್ಯವಿರುವ ಸವ[illegible] ಸಿಕ್ಕಿದರೆ ನಾಳೆ [illegible] ದಾಸ.'

*

ಯಥಾ ಸಮಯದಲ್ಲಿ ಕಾಗದ ಲೇಡಿ ಡಾಕ್ಟರಿಗೆ ತಲುಪಿತು. ಆಕೆಗೆ ಕಾಗದವನ್ನೋದಿ ಸಿಡಿಲು ಬಡಿದಂತಾಯಿತು. ಅವಳು ಯೋಚಿಸಿದ್ದೇನು? ಇಲ್ಲಿ ಆದದ್ದೇನು? ದಾಸನು ನಿಜವಾಗಿ ಧನಿಕನೇ? ತನ್ನಂತೆ ಪಾಪರಿಯೇ? [illegible] ಕೈಯಲ್ಲಿನ ದುಡ್ಡೆಲ್ಲ ಖರ್ಚಾಗಿ, ಊಟ [illegible] ದಾಸನೊಡನೆ ಸೇರಿಕೊಳ್ಳಬೇಕೆನ್ನುವಷ್ಟರಲ್ಲಿ [illegible] ೫೦೦ ರೂಪಾಯಿಗಳ ಸಾಲಕ್ಕೊಂದು ಅವನಿಂದ ಪತ್ರವೇ?

ಮಿಸ್ ಸುಲೋಚನೆ ಕಿಡಿಕಿಡಿಯಾದಳು! ಕಾಗದವನ್ನು ಕೈಯಲ್ಲಿ ಹಿಡಿದುಕೊಂಡು ದಾಸ ಮಹಾಶಯರಿದ್ದಲ್ಲಿಗೆ ಬಂದಳು. ಕೋಪವನ್ನು ತೋರ್ಪಡಿಸದೆ, ನಯನುಡಿಗಳಿಂದ,—

'ಈ ಕಾಗದವನ್ನು ಬರೆದದ್ದು ನೀವೇ?'

'ಹೌದು.'

'ನಿಮ್ಮಲ್ಲಿ ಬೇಂಕ್ ಠೇವಣಾತಿಗಳ ದಾಖಲೆ ಇದ್ದರೆ, ಇತ್ತ ಕೊಡಿ. ಬೇರೆ ಬೇಂಕುಗಳವರು ಹಣ ಕೊಟ್ಟಾರು.'

'ಇಲ್ಲ; ಅವರು ಕೊಡುವ ಹಾಗಿಲ್ಲ. ನಾನು ವಿಚಾರಿಸಿಯಾಗಿದೆ.'

'ಎಲ್ಲಿ ಆ ದಾಖಲೆಗಳನ್ನಾದರೂ ನಾನೊಮ್ಮೆ ಕಣ್ಣಿಲ್ಲಿ ನೋಡುತ್ತೇನೆ; ಕೊಡಿ.'

'ಅದನ್ನೆಲ್ಲ ಇನ್ನೊಬ್ಬರಿಗೆ ತೋರಿಸತಕ್ಕುದಲ್ಲ. ಅದು ನನ್ನ ಜೀವದ ಗಂಟು.'

'ಇನ್ನೊಬ್ಬರಿಗೆ ಆ ನಿಮ್ಮ 'ಜೀವದ ಗಂಟು' ತೋರಿಸಬಾರದಾದರೂ, ನಾನೇನು ಪರಕೀಯಳೇ? ನಾಳೆ ನಿಮ್ಮ ಹೆಂಡತಿಯಾಗುವವಳಲ್ಲವೇ? ನನಗೂ ಏತಕ್ಕೆ ತೋರಿಸಬಾರದು?'

'ಲಗ್ನವಾಗುವ ಮೊದಲೇ, ನನ್ನ ಹಣ ಕಾಸಿನ ಯೋಗಕ್ಷೇಮದ ವಿಚಾರ ಇಷ್ಟೇಕೆ ಬೇಕು ನಿಮಗೆ? ನನ್ನ ದುಡ್ಡು ಕಂಡು ನನ್ನನ್ನು ಮದುವೆಯಾಗುವ ಯೋಜನೆ ಏನು ನಿಮ್ಮದು?'

'ಅಥವಾ ನನ್ನ ದುಡ್ಡು ಕಂಡೇ ನನ್ನನ್ನು ಮದುವೆಯಾಗುವ ಯೋಚನೆ ಏನು ನಿಮ್ಮದು?'

'ನನ್ನಲ್ಲಿ ಇಷ್ಟೆಲ್ಲಾ ಸಂದೇಹಪಡುವ ನಿಮಗೆ, ಇನ್ನು ನಮ್ಮ ಮದುವೆಯ ಮಾತಾದರೂ ಬೇಕೇ?'

'ಮದುವೆಯ ಮಾತನ್ನು ಎತ್ತಿದವರು ನೀವು.'

'ಆಗಲೆಂದು ಒಪ್ಪಿಗೆ ಕೊಟ್ಟವರು ನೀವು.'

'ಸಾವಿರಾರು ರೂಪಾಯಿಗಳನ್ನು ಬೇಂಕಿನಲ್ಲಿಟ್ಟ ನೀವು, ಮದುವೆಗೆ ಮೊದಲೇ, ನನ್ನಲ್ಲಿ ಸಾಲ ಕೇಳಲು ಬರುವಿರೆಂದು ನನಗೆ ಸ್ವಪ್ನವೇ?'

'ಹಾಗಾದಲ್ಲಿ ಸಾವಿರಾರು ರೂಪಾಯಿಗಳನ್ನು ಸಂಪಾದಿಸಿ ಶೇಖರಿಸಿಟ್ಟುಕೊಂಡಿರುವೆನೆಂದದ್ದು ಬರೇ ಬೂಟಾಟಿಕೆಯ ಮಾತೇ?'

'ನಿಮಗೆ ಹಣ ಕೊಟ್ಟು ಮದುವೆಮಾಡಿಕೊಳ್ಳುವಷ್ಟು ಯೋಗ್ಯತೆಯನ್ನೇನೂ ನಿಮ್ಮಲ್ಲಿ ಕಾಣಲಿಲ್ಲವಲ್ಲ!'

'ಮತ್ತೆ ಹಣ ಕೊಡದೆ ನಿಮ್ಮಂಥ ಮುದುಕಿಯನ್ನು ಮದುವೆಯಾಗಲು ಯಾರಿಗೆ ಗ್ರಹಚಾರ ಹಿಡಿದಿದೆ?'

'ನಾನು ಮುದುಕಿ! ನೀವೇನು ೧೬ ವರ್ಷದ ತರುಣನೋ? ಬಾಯಲ್ಲಿರುವುದೆಲ್ಲಾ ಕೃತಕದ ಹಲ್ಲುಗಳೆಂದು ನನಗೆ ತಿಳಿಯದೇ?'

'ನೀನು ಮುದಿ ಗೂಬೆಯಾಗಿ, ನನ್ನನ್ನು ಮುದುಕನೆನ್ನಲು ನಾಚಿಕೆ ಇಲ್ಲವೇ[illegible]

'ನೀನು ಮುದಿ ಕೋತಿ ಮಾತ್ರವಲ್ಲ; ಜಗದ್ವಿಕ್ಷಕನಾದ ವಂಚಕ!'

'ನೀನೇನು ಕಡಿಮೆಯವಳೇ? ಎಷ್ಟು ಮಂದಿಯನ್ನು ಇದುವರೆಗೆ ಹೀಗೆ ಠಕ್ಕಿಸಲು ನೋಡ್ದಿದೆಯೋ? ನಿನ್ನ ಬಲೆಗೊಬ್ಬರೂ ಪುಣ್ಯಕ್ಕೆ ಬೀಳಲಿಲ್ಲ!'

'ನೀನೂ ದುಡ್ಡಿದ್ದ ಹೆಂಡತಿಗಾಗಿ ಅಲೆಯುತ್ತಿದ್ದ ಭಂಡನೇ! ಇನ್ನು ನಿನ್ನ ಮದುವೆಯ ಆಶೆ ಬಿಡು.'

'ನೀನು ವಾನಪ್ರಸ್ಥಾಶ್ರಮಕ್ಕೆ ತೆರಳು!'

'ಥೂ! ಮುದಿ ಕತ್ತೆ!'

'ಥೂ! ಮುದಿ ಎಮ್ಮೆ!'

'ಇನ್ನೂ ಕತ್ತೆ ಎಂದರೆ ಲತ್ತೆ ಬಿದ್ದೀತು!'

'ಎಲ್ಲಿ, ಭೈರ್ಯವಿದ್ದರೆ ಕೊಡು ನೋಡುವ! ಒಂದಕ್ಕೆ ನಾಲ್ಕು ಹಿಂದಿರುಗದೇ?'

'ಛೀ! ಮುದಿ ಮಂಗ!'

'ಛೀ! ಮುದಿ ಗೂಬೆ!'

'ನೀನು ಕೊಳೆತ ಕುಂಬಳಕಾಯಿ. ನಿನ್ನ ಮುಖಕ್ಕೆ ಇಷ್ಟು ಬೆಂಕಿ ಬೀಳ!'

'ನೀನು ಹಾಳಾದ ತೆಂಗಿನ ಕಾಯಿ! ನಿನ್ನ ಬಾಳ್ಗೆ ಸುಡ!'

ಲೇಡೀ ಡಾಕ್ಟರು ಹೊರಟುಹೋದಳು. ಸಾಹುಕಾರ ಬಾಗಿಲು ಬಡಿದುಕೊಂಡನು. ಪಾಪರಿ ಕುಳಗಳ ಮದುವೆ ಹೀಗೆ ಮುಗಿಯಿತು!

"R."

NOTICE

In the Court of the District Munsiff of Mangalore

O. S. No. 17/1940

BETWEEN:—

Haji K. Abdulkhader Bava —**Plaintiff**

AND

1. Mahomed O. Issa. 2. Phala Bin Abdul Mohassin Kharafi —**Defendants**

To

2nd Defendant,

Phala Bin Abdul Mohassin Kharafi, son of Abdul Mohassin Kharafi, Merchant, aged about 43 years, residing at Calicut.

Please take notice that the above suit has been filed against you and 1st defendant by the plaintiff for the recovery of Rs. 2138-1-0 with future interest and costs of suit due in respect of a contract for conveyance of plaintiff's cargo from Mangalore to Colombo, and that the said suit stands posted to 10-8-1940 at 11 A. M. before the said Court.

Your are hereby required to appear before the said Court on the date and hour and contest the same; otherwise the same will be heard and decided in your absence.

Mangalore 25-7-'40 } **K. Ram Mohan Rao,** Vakil for plaintiff.



ಮದನ ಕಳಾ ಶಾಸ್ತ್ರ

ಎಂಬ ಪ್ರೇಮ ರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೊಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲ ದೇಶದ ವೇಶ್ಯ



ಕನ್ಯೆಗಳು ಮೋಹಿಸುವ ರಹಸ್ಯಗಳು ಹಾಸಿಗೆಯ ಸುಖವಿಲಾಸಗಳು ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸುಯೋಗಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೊಟೋಗಳು ಅಡಗಿವೆ. 300 ಪುಟಗಳುಳ್ಳ ದೊಡ್ಡ ಪುಸ್ತಕ.

ಪುಸ್ತಕ ಒಂದಕ್ಕೆ ಕ್ರಯ ರೂ. 1-4-0.

T. R. ರಾಯಲ್ ಕಂಪೆನಿ,

ನಂ. 3, ಕೃಷ್ಣಪ್ಪ ನಾಯ್ಕನ್ ಟ್ಯಾಂಕ್ ಬೀದಿ, ಸಾಹುಕಾರ್‌ಪೇಟೆ, ಜಿ. ಟಿ., ಮದರಾಸು.



ಈ ತಿಂಗಳುವರಿಗೂ ಅರ್ಧ ಕ್ರಯ

Original Price Rs. 7-8-0. Sale Price Rs. 3-12-0.

GRAND CLEARANCE SALE

Pretty Shape and design.

ಮುಂಚಿನ ಕ್ರಯ ರೂ. 7-8-0. ಈಗಿನ ಕ್ರಯ ರೂ. 3-12-0.

ಭಂಗಾರದ ಲೀವರ್ ರಿಸ್ಟ್ ವಾಚ್

ಎಂಬ ಇಂಗ್ಲೀಷ್ ನಮೂನೆ ಕೈ ಗಡಿಯಾರ.

ಸ್ವಿಸ್ ಮೇಕರ್. ಲೀವರ್ ಮೂವ್‌ಮೆಂಟ್ಸ್. ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಪು. ನೋಡುವುದಕ್ಕೆ ಅಂದವಾಗಿಯೂ ಇರುತ್ತೆ. ಇದನ್ನು ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳಲು ಬಹು ಚೆನ್ನಾಗಿದೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸಿರುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಒಂದನ್ನು ತರಿಸಿ ನೋಡಿದರೆ ಸಂತೋಷಪಡುವಿರಿ. ೩ ವರ್ಷ ಗ್ಯಾರಂಟಿ. ನಂ. ೪೪ ಕಡಿಮೆ ಕ್ರಯ ವಾಚ್ 1ಕ್ಕೆ ರೂ. 3-12-0. ಜಾಗ್ರತೆ ತರಿಸಿದವರಿಗೆ ಮಾತ್ರ ದೊರೆಯುತ್ತೆ. **ವೆಸ್ಟರ್ನ್ ಸ್ವೀಸ್ ವಾಚ್ ಕಂಪೆನಿ,** ಪೋಸ್ಟ್ ಬಾಕ್ಸ್ ನಂ. 68, ಮದರಾಸ್.

Western Swiss Watch Co., Direct Importers, Post Box No. 68, Madras.

ನೂತನ ಪಾಠಪಟ್ಟಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ.

(Vide consolidated list of approved books, Fort St George Gazette, dated 30-4-1940, pages 59, 60, 62, 68, 70, 71, 86, 87, 88, 92 & 155).

(1) **ಹೊಸ ಕನ್ನಡ ಪಾಠಮಾಲೆ**—1ರಿಂದ 5ನೇ ದರ್ಜೆಯ ವರೆಗೆ.
(2) **ನೂತನ ಬಾಲ ಗಣಿತ**—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ.
(3) **ಭಾರತದ ಇತಿಹಾಸ**—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ
(4) ಡಿ ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) **ನೂತನ ಸಾಮಾನ್ಯ ಗಣಿತ**—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7 ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿ:—

ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

THE PIE-MONEY BANK, LTD.,
MAIDAN ROAD, MANGALORE.

Undertakes all kinds of Banking Business.
Current account at 2½% per annum.
Savings Bank Deposits at 4½% per annum.
FIXED DEPOSITS.
For 2 years 5%. 1 year 4½%. For 6 months 4%. 3 months 3½%.
Auction Chit Funds ranging from Rs. 100—5,000 run regularly on systematic lines.
Unique Banking facilities to Businessmen and interested Public.

Apply for particulars:— **K. R. GURU,** *Managing Director.*

THE BANK OF MANGALORE, LIMITED,
MANGALORE.

Head Office:-**Mangalore.** *Branches:*-**Moodabidri & Padubidri.**

Recurring Savings Bank Deposit

1. The minimum deposit payable at a time is only ONE ANNA.

2. Deposits collected at your door.

3. Every anna paid daily will grow, with interest, to Rs. **185**/-. Thus a depositor who pays in a sum of Re. 1/- daily will get at the end of seven years **2,960**/-.

4. Payment can even be discontinued and again continued, if and when convenient.

5. No forfeiture of interest for such discontinued period.

6. Maximum loan facilities on security of these deposits.

For further particulars please apply to our Head Office or Branches.



ಕೆ ಸ್ಟೊ ಫೇ ನ್

ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ–ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು, ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ. ದಕ್ಷಿಣ ಹಿಂದೂಸ್ಥಾನದ ಏಜಂಟರು:–

ಮೆಸರ್ಸ್ ಶಿವರಾಮ್ ಎಂಡ್ ಸ್ವಾಮಿ,
154, ನೈನಿಯಪ್ಪ ನಾಯಕ್ ಸ್ಟ್ರೀಟ್, ಪಿ. ಟಿ. ಮದ್ರಾಸು.

CASTOPHENE
CASTOR OIL CHOCOLATES

Diamonds! **Diamonds!**

Best Brilliancy!

K. R. K. SHET,

Opp. Government College,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟ್ಯಾಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗ ದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ಯೋಗ್ಯ ದರದಲ್ಲಿ ದೇವಪೂಜಾ ಸಾಮಗ್ರಿ ಉತ್ತಮ

ಆಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. UDIPI, S. K.

(ರಿಜಿಸ್ಟರ್ಡ್) # ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ, ಆಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ 0–12–0. ಟ. ಖ. 0–9–0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ—

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, (ಮೈಸೂರು ಸೀಮೆ).

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ಪರತ.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವುದಿಲ್ಲೆಂದು ೨ನೇ ಲಗ್ನವಾಗುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು: ಮಾ। ರಾ। ಎ.-ಎಮ್. ಇನ್ಸ್‌ಪೆಕ್ಟರ್ ಬೆಳಗಾಂವ–'ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಜಲ್ಲದಂತಾದವು.' ೨೧ ದಿವಸದ ಡಬ್ಬಿಯ ಕಿ. ರೂ. ೩. ಟ. ಖ. ಆಣೆ ಲ.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನೂ ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟು – ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮಾಹಿಮ, ಠಾಣೇ – ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವುದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ೨ಮತ್ತು ರೂ.೪; ವಿ. ಪಿ.-ಆಣೆ ಲ.

ವಿಳಾಸ:—**ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬ ಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ — ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ: ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ (ಟಪ್ಪಾಲು ಖರ್ಚು ಪ್ರತ್ಯೇಕ).

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Edited and Published by B. Vittal Rau at the Kanteerava Office, Maidan North Road, Mangalore. Printed by U. Vittalacharya, Manager at the Dharma Prakash Press, Car Street, Mangalore.